



ಐಕ್ಯರಂಗ

ಸಂಪುಟ 21 ಸಂಚಿಕೆ 6 ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ ಫೆ 2-8, 1998 ರೂ.2.00

ಪ್ರತಿ ಮನೆಯಲ್ಲಿ ಆಹಾರ ಧಾನ್ಯ ಪ್ರತಿ ಮಗು ಶಾಲೆಯಲ್ಲಿ ಎಲ್ಲರಿಗೂ ಆರೋಗ್ಯ - ಅಕ್ಷರ ಜ್ಞಾನ

ಸಿ.ಪಿ.ಐ(ಎಂ) ಸ್ಪರ್ಧೆ ಕೋಲಾರದಿಂದ



ಈಗಾಗಲೇ 'ಐಕ್ಯರಂಗ'ದಲ್ಲಿ ವರದಿಯಾಗಿರುವಂತೆ ರಾಜ್ಯದಲ್ಲಿ ಜನತಾದಳ ಮುಖಂಡರು ಆರಂಭದಲ್ಲಿ ಸಿ.ಪಿ.ಐ.(ಎಂ) ಸಿ.ಪಿ.ಐಗಳೊಡನೆ ಸೀಟು ಹೊಂದಾಣಿಕೆ, ಜಂಟೀ ಪ್ರಚಾರ ಇತ್ಯಾದಿಗಳ ಬಗ್ಗೆ ಮಾತನಾಡಿದ್ದರೂ ನಂತರ ಹಿಂದೇಟು ಹಾಕಿದ್ದರಿಂದ ಬೇಸರಗೊಂಡು ಕೋಲಾರ (ಮೀಸಲು) ಕ್ಷೇತ್ರವನ್ನು ಸಿ.ಪಿ.ಐ.(ಎಂ)ಗೆ ಬಿಟ್ಟುಕೊಡದಿದ್ದರೆ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದಾಗಿ ಸಿ.ಪಿ.ಐ(ಎಂ) ಮುಖಂಡರು ಹೇಳಬೇಕಾಯಿತು. ಈ ಪ್ರಕಾರ ಈ ಎರಡು ಕ್ಷೇತ್ರಗಳಲ್ಲಿ ಎಲ್ಲಾ ಕಡೆ ಕಾರ್ಯಕರ್ತರ ಸಭೆಗಳನ್ನು ನಡೆಸಲಾಗಿದೆ. ಈ ನಡುವೆ ಜನತಾದಳದ ಮುಖಂಡರು ಸಿ.ಪಿ.ಐ. (ಎಂ) ಎರಡು ಸ್ಥಾನಗಳಲ್ಲೂ ತಮ್ಮ ಅಭ್ಯರ್ಥಿ ಗಳನ್ನು ಹಿಂತೆಗೆದುಕೊಳ್ಳಲು ಮನವಿ ಮಾಡಿದ ಹಿನ್ನೆಲೆಯಲ್ಲಿ, ಮುಂಬರುವ ಲೋಕಸಭಾ ಚುನಾವಣೆಗಳ ನಿರ್ಣಾಯಕ ಮಹತ್ವ ದಿಂದಾಗಿ ಸಂಯುಕ್ತ ರಂಗದ ಐಕ್ಯತೆಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ಸಂಯುಕ್ತ ರಂಗದ ಅಂಗ ಪಕ್ಷಗಳೊಳಗೆ ತಿಕ್ಕಾಟದ ವಲಯವನ್ನು ವಿಸ್ತರಿಸಬಾರದು ಎಂಬ ಕಾರಣಕ್ಕಾಗಿ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಸಲಹೆ ಮೇರೆಗೆ ಚಿಕ್ಕಬಳ್ಳಾಪುರ ಕ್ಷೇತ್ರದಿಂದ ತನ್ನ ಅಭ್ಯರ್ಥಿ ಕೆ.ಎಂ. ವೆಂಕಟೇಶ್‌ರವರ ನಾಮ ಪತ್ರವನ್ನು ಹಿಂತೆಗೆದು ಕೊಳ್ಳುತ್ತಿರುವುದಾಗಿ ಸಿ.ಪಿ.ಐ(ಎಂ) ರಾಜ್ಯ ಸಮಿತಿ ತಿಳಿಸಿದೆ. ಆದರೆ ಕೋಲಾರ (ಮೀಸಲು) ಕ್ಷೇತ್ರದಲ್ಲಿ ಸಿ.ಪಿ.ಐ.(ಎಂ) ಸ್ಪರ್ಧಿಸುತ್ತಿದೆ.

ಉತ್ಸಾಹೀ ಹಾಗೂ ಜನಪ್ರಿಯ ಯುವ ಮುಂದಾಳು ನಾರಾಯಣಸ್ವಾಮಿ ಈ ಕ್ಷೇತ್ರದಲ್ಲಿ ಸಿ.ಪಿ.ಐ(ಎಂ) ಅಭ್ಯರ್ಥಿ ಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೇ ಜನ-ಪರ ಪ್ರಜಾಪ್ರಭುತ್ವ ಚಳುವಳಿಗಳಲ್ಲಿ ಭಾಗವಹಿಸಲಾರಂಭಿಸಿದ ನಾರಾಯಣ ಸ್ವಾಮಿಯವರು 1987ರಲ್ಲಿ ಕೋಲಾರದ ಸರ್ಕಾರಿ ಕಾಲೇಜು ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷರಾಗಿ ಆಯ್ಕೆಯಾ ಗಿದ್ದರು. 1989ರಲ್ಲಿ ಅವರು ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ ಎಸ್.ಎಫ್.ಐ.ನ ಕೋಲಾರ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾದರು. ವಿದ್ಯಾಭ್ಯಾಸ ಮುಗಿದ ಮೇಲೆ ಯುವಜನ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಕಾಂ|| ನಾರಾಯಣಸ್ವಾಮಿ 1990 ರಲ್ಲಿ ಡಿ.ವೈ.ಎಫ್.ಐ.ನ ತಾಲ್ಲೂಕು ಅಧ್ಯಕ್ಷರಾಗಿ ಆಯ್ಕೆಗೊಂಡರು. ನಂತರ ಕಾರ್ಮಿಕ ವರ್ಗದ ಚಳುವಳಿಗಳಲ್ಲೂ ಭಾಗವಹಿಸಲಾ ರಂಭಿಸಿದ ಅವರು 1993ರಲ್ಲಿ ಕೋಲಾರ ಜಿಲ್ಲಾ ಸಿಲ್ಕ್ ವರ್ಕರ್ಸ್ ಯುನಿಯನ್‌ನ ಪ್ರಧಾನ ಕಾರ್ಯದರ್ಶಿಯಾಗಿಯೂ ಆಯ್ಕೆಯಾದರು. ಆಟೋ ಚಾಲಕರ ಸಂಘ ಹಾಗೂ ಇತರ ಹಲವು ಕಾರ್ಮಿಕ ಸಂಘಗಳಿಗೆ ನೇತೃತ್ವ ನೀಡುತ್ತಿರುವ ಇವರು ಕಳೆದ ವರ್ಷ ಸಿ.ಐ.ಟಿ.ಯು ರಾಜ್ಯಸಮಿತಿ ಸದಸ್ಯರಾಗಿ ಆಯ್ಕೆ ಗೊಂಡರು. 1995 ರಿಂದ ಸಿ.ಪಿ.ಐ.(ಎಂ) ಕೋಲಾರ ಜಿಲ್ಲಾ ಸಮಿತಿ ಸದಸ್ಯರಾಗಿರುವ ಕಾಂ|| ನಾರಾಯಣ ಸ್ವಾಮಿ ಕೋಲಾರ ತಾಲ್ಲೂಕು ಸಮಿತಿಯ ಕಾರ್ಯದರ್ಶಿಗಳಾಗಿದ್ದಾರೆ.

ಸಂಯುಕ್ತ ರಂಗದ ಚುನಾವಣಾ ಪ್ರಣಾಳಿಕೆಯ ಭರವಸೆ

ಕೋಮುವಾದವನ್ನು ಎದುರಿಸಲು, ಒಕ್ಕೂಟ ತತ್ವವನ್ನು ಬಲಪಡಿಸಲು ಹಾಗೂ ಆರ್ಥಿಕ ಅಸಮತೋಲನಗಳನ್ನು ತಗ್ಗಿಸಲು ಒಂದು ಸ್ಥಿರ ಸರಕಾರ ರಚಿಸಲಿಕ್ಕಾಗಿ ಒಂದು ಸ್ಪಷ್ಟ ಜನಾದೇಶ ನೀಡಿ- *ಇದು ಸಂಯುಕ್ತರಂಗ ಮುಂಬರುವ ಲೋಕ ಸಭಾ ಚುನಾವಣೆಯ ಸಂದರ್ಭದಲ್ಲಿ ಬಿಡುಗಡೆ ಮಾಡಿರುವ ಸಮಾನ ಕನಿಷ್ಠ ಕಾರ್ಯಕ್ರಮ ಹಾಗೂ ಜಂಟಿ ಧೋರಣಾ ಘೋಷಣೆ ದೇಶದ ಮತದಾರರಿಗೆ ಮಾಡಿರುವ ಒಂದು ಬಲವಾದ ಮನವಿ. 18 ತಿಂಗಳ ಆಳ್ವಿಕೆಯಲ್ಲಿ ಅಪೂರ್ಣವಾಗುಳಿದದ್ದನ್ನು ಪೂರ್ಣಗೊಳಿಸುವ ಒಂದು "ಸ್ಥಿರ, ಭ್ರಷ್ಟಾಚಾರ-ಮುಕ್ತ, ಸ್ವಚ್ಛ ಹಾಗೂ ಜವಾಬುದಾರ ಆಡಳಿತ"ವನ್ನು ನೀಡುವುದಾಗಿ ಅದು ಜನತೆಗೆ ಭರವಸೆ ನೀಡಿದೆ.*

ಈ ಜನವರಿ 30 ರಂದು ಮಹಾತ್ಮ ಗಾಂಧೀಜಿ ಕೋಮುವಾದಿಯ ಗುಂಡಿಗೆ ಬಲಿಯಾಗಿ ಐವತ್ತು ವರ್ಷಗಳಾದವು. ಅಂದು ಬಿ.ಜೆ.ಪಿ.ಯ ಹತಾಶ ಯತ್ನಗಳನ್ನು ಹಾಗೂ ಕಾಂಗ್ರೆಸ್‌ನ ಅಪಾಯಕಾರಿ ನಿಷ್ಕ್ರಿಯತೆಯನ್ನು ಬಯಲಿಗೆಳೆಯುವುದು ತನ್ನ ರಾಜಕೀಯ ಅಜೆಂಡಾ ಎಂದಿರುವ ಈ ಘೋಷಣೆಯನ್ನು ಸಂಯುಕ್ತ ರಂಗದ ಅಧ್ಯಕ್ಷರಾದ ದೇವೇಗೌಡರು, ಎರಡು ಪ್ರಮುಖ ಎಡಪಕ್ಷಗಳಾದ ಸಿ.ಪಿ.ಐ(ಎಂ) ಹಾಗೂ ಸಿ.ಪಿ.ಐ.ನ ಪ್ರಧಾನ ಕಾರ್ಯದರ್ಶಿಗಳಾದ ಹರ್ಕಿಶನ್ ಸಿಂಗ್ ಸುರ್ಜಿತ್ ಹಾಗೂ ಎ.ಬಿ. ಬರ್ದನ್ ಹಾಗೂ ಜನತಾ ದಳದ ಅಧ್ಯಕ್ಷ ಶರದ್ ಯಾದವ್ ಮತ್ತಿತರ ಮುಖಂಡರು ಹಾಜರಿದ್ದ ಸಮಾರಂಭದಲ್ಲಿ ಬಡುಗಡೆ ಮಾಡಲಾಯಿತು.

"ಉತ್ತಮ ಆಡಳಿತ, ಸರ್ವತೋಮುಖ ಆರ್ಥಿಕ, ಸಾಮಾಜಿಕ ಅಭಿವೃದ್ಧಿ, ಪ್ರತಿ ಮನೆಯಲ್ಲಿ ಆಹಾರ ಧಾನ್ಯ, ಪ್ರತಿ ಭಾರತೀಯನಿಗೆ ಆರೋಗ್ಯ, ಅಕ್ಷರ ಜ್ಞಾನ ಹಾಗೂ ಪ್ರತಿಯೊಂದು ಮಗು ಶಾಲೆಯಲ್ಲಿ" ಎಂದು 19 ಪುಟಗಳ ಈ ದಸ್ತಾವೇಜು ಭಾರತೀಯ ಮತದಾರರಿಗೆ ಆಶ್ವಾಸನೆ ನೀಡಿದೆ.

ಕಾಂಗ್ರೆಸ್(ಐ) ಮತ್ತೆ-ಮತ್ತೆ ಸಂಯುಕ್ತರಂಗ ಸರಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನಿಸಿದರೂ ಸಂಯುಕ್ತರಂಗ 'ಅಭೇದ್ಯವಾಗಿ' ಉಳಿಯಿತು ಎಂದಿರುವ ದಸ್ತಾವೇಜು ರಾಜೀವ ಗಾಂಧಿ ಹತ್ಯೆ ಕುರಿತಂತೆ ಇತ್ತೀಚಿನ ಚೆನ್ನೈ ವಿಶೇಷ ನ್ಯಾಯಾಲಯದ ತೀರ್ಪು ಸಂಯುಕ್ತರಂಗದ ನಿಲುವನ್ನು ಸಾಬಿತುಪಡಿಸಿ ಸಂಯುಕ್ತರಂಗ ಸರಕಾರವನ್ನು ಉರುಳಿಸಲು ಕಾಂಗ್ರೆಸ್(ಐ) ನೀಡಿದ ಕಾರಣ ಎಷ್ಟು ಪೊಳ್ಳು ಎಂಬುದನ್ನು ಜಗಜ್ಜಾಹೀರು ಮಾಡಿದೆ. ಅವಸಾನದ ಅಂಚಿನಲ್ಲಿರುವ ಕಾಂಗ್ರೆಸ್(ಐ)ಗೆ ಒಂದು ಸ್ಥಿರ ಸರಕಾರವನ್ನಾಗಲೀ, ದೇಶದ ಮುಂದಿರುವ ಸಮಸ್ಯೆಗಳನ್ನು ಎದುರಿಸುವ ಚೈತನ್ಯವಾಗಲೀ ಉಳಿದಿಲ್ಲ.

ಅತ್ತ ಸಂಕುಚಿತ ವಿಭಜಕ ರಾಜಕೀಯದ ಮೇಲೆ ನಿಂತಿರುವ ಬಿ.ಜೆ.ಪಿ.ಯ "ಮೌಲ್ಯಾಧಾರಿತ ರಾಜಕೀಯದ" ಮಿಥ್ಯೆ ಉತ್ತರಪ್ರದೇಶದಲ್ಲಿ ಪ್ರತಿಯೊಬ್ಬ ಪಕ್ಷಾಂತರಿಗೂ ಅಧಿಕಾರ ಸ್ಥಾನ-ಮಾನಗಳನ್ನು ಹಂಚಿದಾಗ ಸಂಪೂರ್ಣವಾಗಿ ಒಡೆದಿದೆ. "ತಮ್ಮ ಅಧಿಕಾರದಾಹದ ನಡುವೆ ಬಿ.ಜೆ.ಪಿ.ಯ ಮುಖಂಡರು ಹಾಗೂ ಕಾವಿ ಪಡೆಗಳ ಇತರರು ಬೇರೆ-ಬೇರೆ ದನಿಗಳಲ್ಲಿ ಮಾತನಾಡುತ್ತಿದ್ದಾರೆ. ಆದರೆ ಇದು ಸೈದ್ಧಾಂತಿಕ ಕಣ್ಣಾ ಮುಚ್ಚಾಲೆಯ ಒಂದು ಯೋಜಿತ ತಂತ್ರ. ಬಿ.ಜೆ.ಪಿ.ಯ ಮೂಲಭೂತ ಕೋಮುವಾದಿ ಅಜೆಂಡಾದ ಸಂಪೂರ್ಣ ಅರಿವು ಸಂಯುಕ್ತರಂಗಕ್ಕಿದೆ. ಚುನಾವಣೆಗಳಲ್ಲಿ ಅದರ ಸವಾಲುಗಳನ್ನು ನೇರವಾಗಿ ಎದುರಿಸಲಾಗುವುದೆಂದು ಸಂಯುಕ್ತರಂಗದ ಈ ಪ್ರಣಾಳಿಕೆ ಹೇಳಿದೆ.

ಒಳಪುಟಗಳಲ್ಲಿ

ದುಶ್ಶಾಸನ- ಶಕುನಿ ಮಾಮ

ಬಿಜೆಪಿ ಈಗ ನಡೆಸುತ್ತಿರುವುದು ದುಃಶಾಸನನ ರಾಜನೀತಿ. ಆರ್.ಎಸ್.ಎಸ್. ಇದಕ್ಕೆ ಮಾರ್ಗದರ್ಶನ ನೀಡುತ್ತಿರುವ ಶಕುನಿ ಮಾಮಾನಂತಿದೆ. ಜನಗಳನ್ನು ಒಡೆದು ಕೋಮುವಾದದ ವಿಷ ಹರಡುವ ರಾಜಕಾರಣ ಅದು. ಈ ದುಶ್ಶಾಸನನ ರಾಜನೀತಿ, ಸಿಂಹಾಸನದ ರಾಜನೀತಿಗೆ ಎದುರಾಗಿ ಜನಶಾಸನದ ರಾಜನೀತಿ ತರಬೇಕಾಗಿದೆ. ಅಂದರೆ ಬಿಜೆಪಿಯ ದುಷ್ಟ ರಾಜಕೀಯ, ಕಾಂಗ್ರೆಸಿನ ಅಧಿಕಾರಶಾಹಿ ರಾಜಕೀಯವನ್ನು ತಿರಸ್ಕರಿಸಿ ಎಡ, ಜಾತ್ಯಾತೀತ, ಪ್ರಜಾಪ್ರಭುತ್ವವಾದಿ ಶಕ್ತಿಗಳ ಜನಪರ ರಾಜಕೀಯವನ್ನು ತರಬೇಕಾಗಿದೆ.

-ಸೀತಾರಾಂ ಯೆಚೂರಿ

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರು

ಸಂಯುಕ್ತ ರಂಗದ ಸಮಾನ ಕನಿಷ್ಠ ಕಾರ್ಯಕ್ರಮ ಹಾಗೂ ಜಂಟಿ ಧೋರಣಾ ಘೋಷಣೆಯನ್ನು ಬಿಡುಗಡೆ ಮಾಡುತ್ತಿರುವ ಸುರ್ಜಿತ್, ಬರ್ದನ್, ದೇವೇಗೌಡರು ಮತ್ತು ಶರದ್ ಯಾದವ್. ಮೇಲಿನ ಚಿತ್ರ ಜನವರಿ 19 ರಂದು ಹೈದರಾಬಾದಿನಲ್ಲಿ ಸಂಯುಕ್ತ ರಂಗದ ಚುನಾವಣಾ ಪ್ರಚಾರದ ಉದ್ಘಾಟನಾ ರ್‍ಯಾಲಿಯಲ್ಲಿ ಭಾಗವಹಿಸಿದ ಅಪಾರ ಜನಸ್ತೋಮ.



ಕೇಂದ್ರ ಚುನಾವಣಾ ನಿಧಿ

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಮನವಿ

ಮುಂಬರುವ ಚುನಾವಣೆಗಳು ಒಂದು ಹೊಸ ಸವಾಲು, ಜತೆಗೆ ದೇಶದ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆ ಹೊಸ ಅವಕಾಶಗಳನ್ನು ಇದು ತೆರೆದಿಟ್ಟಿದೆ. ತಮ್ಮ ರಾಜಕೀಯ ವ್ಯವಸ್ಥೆಯ ಜಾತ್ಯಾತೀತ ಪ್ರಜಾಪ್ರಭುತ್ವ ಆಧಾರಕ್ಕೆ ದೊಡ್ಡ ಬೆದರಿಕೆಯೊಡ್ಡಿರುವ ಬಿಜೆಪಿ ಮತ್ತಿತರ ಮಿತ್ರ ಪಕ್ಷಗಳ ಹಾಗೂ ವಿನಾಶಕಾರಿ ಆರ್ಥಿಕ ನೀತಿಗಳನ್ನು ಅನುಸರಿಸುತ್ತಾ ನಮ್ಮ ಜಾತ್ಯಾತೀತ ಪರಂಪರೆಗೆ ವಿಶ್ವಾಸಘಾತ ಮಾಡಿದ ಕಾಂಗ್ರೆಸ್(ಐ) ಮತ್ತದರ ಮಿತ್ರರು ದೇಶಕ್ಕೆ ಸ್ಥಿರತೆ ಅಥವಾ ಉತ್ತಮ ಆಡಳಿತ ನೀಡಲಾರವು. ಏಕೆಂದರೆ ಇದಕ್ಕೆ ಜಾತ್ಯಾತೀತತೆ, ರಾಷ್ಟ್ರೀಯ ಐಕ್ಯತೆ, ಒಕ್ಕೂಟ ತತ್ವಕ್ಕೆ ಹಾಗೂ ಜನ-ಪರ ಆರ್ಥಿಕ ನೀತಿಗಳಿಗೆ ಸಂಪೂರ್ಣ ಬದ್ಧತೆ ಅಗತ್ಯ. 18 ತಿಂಗಳು ಅಧಿಕಾರ ನಡೆಸಿದ ಸಂಯುಕ್ತ ರಂಗ ಇಂತಹ ಬದ್ಧತೆಯುಳ್ಳ ಸರಕಾರದ ಅಗತ್ಯವನ್ನು ಮನಗಾಣಿಸಿದೆ ಆದ್ದರಿಂದ ಇಂತಹ ಸಂಯುಕ್ತ ರಂಗ ರಚನೆಯಲ್ಲಿ, ಐಕ್ಯತೆಯಲ್ಲಿ ಮಹತ್ವದ ಪಾತ್ರ ವಹಿಸಿರುವ ಎಡಪಕ್ಷಗಳು ಕೇಂದ್ರದಲ್ಲಿ ಸಂಯುಕ್ತ ರಂಗಕ್ಕೆ ಬಹುಮತ ಸಿಗುವಂತೆ ಶ್ರಮಿಸುತ್ತವೆ ಇದಕ್ಕಾಗಿ ಜನಗಳ ಹಿತಾಸಕ್ತಿಗಳ ಬಲವಾದ ರಕ್ಷಕರಾದ ಎಡಪಕ್ಷಗಳ ಪ್ರಾತಿನಿಧ್ಯ ಸಂಸತ್ತಿನಲ್ಲಿ ಹೆಚ್ಚಬೇಕಾಗಿದೆ. ಇದರಲ್ಲಿ ಜನಸಾಮಾನ್ಯರ ಇತರ ದೇಶಪ್ರೇಮಿ ಶಕ್ತಿಗಳ ಬೆಂಬಲ, ನೆರವು ಅಗತ್ಯ. ಕಾರ್ಮಿಕ ವರ್ಗದ ಜನ ಸಾಮಾನ್ಯರ ಪಕ್ಷವಾದ ಸಿಪಿಐ(ಎಂ) ಸದಾ ಜನಸಾಮಾನ್ಯರ ಬೆಂಬಲ, ನೆರವನ್ನೇ ಅವಲಂಬಿಸಿರುವಂತಹ ಕೇಂದ್ರದಲ್ಲಿನ ಚುನಾವಣಾ ಖರ್ಚನ್ನು ಎದುರಿಸಲು 25 ಲಕ್ಷ ರೂ.ಗಳ ಸಿಪಿಐ(ಎಂ) ಕೇಂದ್ರ ಚುನಾವಣಾ ನಿಧಿ ಸಂಗ್ರಹಿಸಲು ಪಕ್ಷದ ಪೊಲಿಟ್‌ಬ್ಯೂರೋ ಕರೆ ನೀಡಿದೆ. ನಗದು, ಚೆಕ್ ಅಥವಾ ಡ್ರಾಫ್ಟ್‌ಗಳ ಮೂಲಕ ಈ ಕೆಳಗಿನ ವಿಳಾಸಕ್ಕೆ ತಮ್ಮ ಉದಾರ ಧನ ಸಹಾಯಗಳನ್ನು ಕಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಮನವಿ ಮಾಡಿದೆ.

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕೇಂದ್ರ ಸಮಿತಿ, 27-29,
ಭಾಯಿ ವೀರಸಿಂಗ್ ಮಾರ್ಗ್,
ನವದೆಹಲಿ - 110 001



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (೧೭೫೭ -೧೯೪೭)

ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

1930ರ ದಶಕದ ಮಧ್ಯಭಾಗದ ವೇಳೆಗೆ ವಿವಿಧ ದೇಶೀ ರಾಜರುಗಳ ಆಳ್ವಿಕೆಯಲ್ಲಿದ್ದ ಸಂಸ್ಥಾನಗಳ ಜನ ಬ್ರಿಟಿಶರ ವಿರುದ್ಧ ಚಳವಳಿಗಿಳಿಯಲಾರಂಭಿಸಿದರು. ಇದರಲ್ಲಿ ಆರಂಭದಲ್ಲಿ ಗಮನ ಸೆಳೆದ ಘಟನೆಯೆಂದರೆ ಮಣಿಪುರ, ಅಸ್ಸಾಂ ಮತ್ತು ನಾಗಾಲ್ಯಾಂಡ್‌ನ ಗಡಿ ಪ್ರದೇಶದಲ್ಲಿ ರಾಣಿ ಗಿಡಾಲೋ ನೇತೃತ್ವದ ಬ್ರಿಟಿಶ್-ವಿರೋಧಿ ಸಾಮೂಹಿಕ ಉತ್ಕ್ರಾಂತಿ. ಈ ಚಳವಳಿ ಕರ ನಿರಾಕರಣೆಯೊಂದಿಗೆ ಹೊಸ ರೂಪ ಪಡೆಯಿತು. ರಾಣಿ ಗಿಡಾಲೋಳನ್ನು ಹಿಡಿದು ಕೊಟ್ಟವರಿಗೆ ಬಹುಮಾನ ಘೋಷಿಸಿದರೂ ಬಹಳ ದಿನ ಆಕೆಯನ್ನು ಬಂಧಿಸಲು ಬ್ರಿಟಿಶ್ ಸರಕಾರಕ್ಕೆ ಆಗಲಿಲ್ಲ. ಬ್ರಿಟಿಶ್ ಸರಕಾರ ಕೊನೆಗೆ ಅಸ್ಸಾಂ ರೈಫಲ್ಸ್‌ನ ಎರಡು ತುಕಡಿಗಳನ್ನು ಬಳಸಿ ಹಲವಾರು ಹಳ್ಳಿಗಳನ್ನು ಧ್ವಂಸಮಾಡಿ ಹಲವರನ್ನು ಬಂಧಿಸಿ ಕೊನೆಗೆ ಅಕ್ಟೋಬರ್ 17,1932ರಲ್ಲಿ ಆಕೆಯನ್ನು ಬಂಧಿಸಲು ಸಾಧ್ಯವಾಯಿತು. ಹತ್ತು ತಿಂಗಳ ವಿಚಾರಣೆಯ ನಂತರ ಆಕೆಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. 1947ರಲ್ಲಿ ದೇಶ ಸ್ವತಂತ್ರವಾದ ಮೇಲಷ್ಟೇ ಆಕೆಯ ಬಿಡುಗಡೆಯಾದದ್ದು.





ಕಾಶ್ಮೀರದ ಶೇಖ್ ಅಬ್ದುಲ್ಲಾ ಇಂತಹ ಬ್ರಿಟಿಶ್-ವಿರೋಧಿ ಹೋರಾಟಗಾರರಲ್ಲಿ ಇನ್ನೊಂದು ಪ್ರಮುಖ ಹೆಸರು. ಜುಲೈ 1931ರಲ್ಲಿ ಆತ ಶ್ರೀನಗರದ ಜೈಲಿನೆದುರು ಒಂದು ಬೃಹತ್ ಮತ ಪ್ರದರ್ಶನಕ್ಕೆ ಮುಖಂಡತ್ವ ನೀಡಿದ್ದರು. ಅಂದು ಪೋಲಿಸರ ಗೋಲಿಬಾರಿನಲ್ಲಿ 21ಜನ ಸತ್ತರು. ಅಕ್ಟೋಬರ್ 1932ರಲ್ಲಿ ಕಾಶ್ಮೀರದ ಮುಸ್ಲಿಂ ಕಾನ್ಪರೆನ್ಸ್‌ನಲ್ಲಿ ಭಾಗವಹಿಸಲು ಹೋದರು. ನಂತರ ಅವರು ಕಾಶ್ಮೀರದ ಡೆಮಾಕ್ರೆಟಿಕ್ ಯೂನಿಟಿ ಸಂಘಟನೆಯ ಮುಖಂಡರಾದ ಪಿ.ಎನ್ .ಬಜಾಜರವರ ಸಂಪರ್ಕಕ್ಕೆ ಬಂದರು. ಆರು ವರ್ಷಗಳ ನಂತರ ಮುಸ್ಲಿಂ ಕಾನ್ಪರೆನ್ಸ್ ನ್ಯಾಶನಲ್ ಕಾನ್ಪರೆನ್ಸ್ ಆಯಿತು. ಅದು ಶೇಖ್ ಅಬ್ದುಲ್ಲಾ ನೇತೃತ್ವದ್ವಲ್ಲಿ ಕಾಶ್ಮೀರದಲ್ಲಿ ಬ್ರಿಟಿಶ-ವಿರೋಧಿ ಹೋರಾಟದ ಮುಂಚೂಣಿಗೆ ಬಂತು.


ರಾಜಸ್ತಾನದ ಅಲ್ವಾರ್‌ನಲ್ಲಿ ಸೆಗು ಬುಡಕಟ್ಟು ಜನ ದಮನಕಾರಿ ರಾಜನ ವಿರುದ್ಧ ಸಾಮೂಹಿಕ ಹೋರಾಟ ಆರಂಭಿಸಿದರು. ಮಹಮ್ಮದ್ ಯಾಮಿನ್ ಖಾನ್ ಎಂಬಾತ ಈ ಚಳುವಳಿಯಲ್ಲಿ ಕೋಮು ವಿಷ ತುಂಬಲು ಯತ್ನಿಸಿದ. ಆದರೆ ಡಾ. ಕೆ.ಎಂ.ಅಶ್ರಫ್ ಎಂಬವರ ಪ್ರಯತ್ನದಿಂದ ಆ ಕುಯುಕ್ತಿ ಫಲಿಸಲಿಲ್ಲ. ಕೊನೆಗೂ ಬ್ರಿಟಿಶರು ದಮನಕಾರಿ ಮಹಾರಾಜನನ್ನು ತೆಗೆಯಬೇಕಾಯಿತು. ಡಾ.ಕೆ.ಎಂ. ಅಶ್ರಫ್ ನಂತರ ಒಬ್ಬ ಮಾರ್ಕ್ಸ್‌ವಾದಿ ಇತಿಹಾಸಕಾರರಾಗಿ ಪ್ರಸಿದ್ಧರಾದರು.



ದಕ್ಷಿಣ ಭಾರತದಲ್ಲೂ ಇಂತಹ ಚಳುವಳಿಗಳು ಹಲವು ಸಂಸ್ಥಾನಗಳಲ್ಲಿ ನಡೆಯಲಾರಂಭಿಸಿದವು. ಇದೇ ವೇಳೆಗೆ ಕಾಯಿದೇ ಭಂಗ ಚಳುವಳಿಯ ಸಂದರ್ಭದಲ್ಲಿ ಹಲವೆಡೆ ರೈತರು ಕಾನೂನು ಭಂಗ ಚಳುವಳಿಯನ್ನು ತಮ್ಮದೇ ರೀತಿಯಲ್ಲಿ ಮುಂದುವರಿಸಿದರು. ಬಿಹಾರದಲ್ಲಿ ಆದಾಗಲೇ ಕಿಸಾನ್ ಸಭಾ ಆರಂಭವಾಗಿತ್ತು. ಆಂಧ್ರಪ್ರದೇಶದಲ್ಲೂ ಒರಿಸ್ಸಾದಲ್ಲೂ ಅದು ವ್ಯಾಪಿಸಲಾರಂಭಿಸಿತ್ತು. ಇಲ್ಲೆಲ್ಲಾ ಬೃಹತ್ ಪ್ರಮಾಣದ ಅರಣ್ಯ ಸತ್ಯಾಗ್ರಹ ನಡೆಯಿತು. ಗೊಂಡರು, ಕೊರ್ಕುಗಳು ಮುಂತಾದ ಬುಡಕಟ್ಟು ಜನಗಳ ನಡುವೆಯೂ ಇಂತಹ ಬಲಿಷ್ಟ ಚಳುವಳಿಗಳು ಆರಂಭವಾದವು. ಉತ್ತರ ಪ್ರದೇಶದಲ್ಲಿ ಗಾಂಧಿಜಿಯ ಎಚ್ಚರಿಕೆಯನ್ನೂ ಲೆಕ್ಕಿಸದೆ ಕರನಿರಾಕರಣೆ ಚಳುವಳಿ ನಡೆಯಿತು.



ಕಾನೂನು ಭಂಗ ಚಳುವಳಿಯನ್ನು ಹಿಂತೆಗೆದುಕೊಂಡ ನಂತರ ಗಾಂಧೀಜಿ ಸಾಮಾಜಿಕ ಪ್ರಶ್ನೆಗಳ ಮೇಲೆ ಸಕಾರಾತ್ಮಕ ಕಾರ್ಯಕ್ರಮ ಆರಂಭಿಸಿದರು. ಹರಿಜನ ಆಂದೋಲನ ಇದರ ಒಂದು ಮುಖ್ಯ ಭಾಗವಾಗಿತ್ತು. ಇದರೊಂದಿಗೆ ದೇಶದ ಹಲವೆಡೆ ಅಸ್ಪೃಶ್ಯತೆ ಜಾತಿವಾದದ ವಿರುದ್ಧ ಚಳುವಳಿಗಳು ನಡೆಯುತ್ತಿದ್ದವು. ಅಸ್ಪೃಶ್ಯತೆ ತಾರಕಕ್ಕೇರಿದ ತಮಿಳುನಾಡಿನಲ್ಲಿ ಪೆರಿಯಾರ್ ಎಂದು ಪ್ರಸಿದ್ಧರಾದ ಇ.ವಿ.ರಾಮಸ್ವಾಮಿ ನಾಯ್ಕರ್ ನೇತೃತ್ವದಲ್ಲಿ ಬ್ರಾಹ್ಮಣ ವಿರೋಧಿ ಸ್ವಾಭಿಮಾನ ಚಳುವಳಿ 1932ರಲ್ಲಿ ಆರಂಭವಾಯಿತು. ಇದರಲ್ಲಿ ಕೆಲವು ಸಮಾಜವಾದೀ ಅಂಶಗಳೂ ಬಂದವು -ವಿಶೇಷವಾಗಿ ಪೆರಿಯಾರ್ ರವರ ಸೋವಿಯತ್ ಪ್ರವಾಸದ ನಂತರ. ಈ ಆಂದೋಲನದ ಮೂಲಕ ಹಲವರು ಕಮ್ಯುನಿಸ್ಟ್ ಮುಖಂಡರಾಗಿ ಬೆಳೆದು ಬಂದರು. ಈ ಮೂಲಕ ಈ ಆಂದೋಲನವೂ ಬೆಳೆಯಿತು. ಪಿ.ಜೀವನಂದನ್ ಇಂತಹ ಕಮ್ಯುನಿಸ್ಟ್ ಮುಖಂಡರಲ್ಲಿ ಪ್ರಮುಖರು.



ಕೇರಳದಲ್ಲಿ ನವಂಬರ್ 1931 ರಲ್ಲಿ ಗುರುವಾಯೂರು ದೇವಸ್ಥಾನ ಪ್ರವೇಶ ಚಳುವಳಿ ನಡೆಯಿತು. ಕಾಂಗ್ರೆಸ್ ಮುಖಂಡ ಕೇಳಪ್ಪನ್ ಆರಂಭಿಸಿದ ಈ ಚಳುವಳಿ ಪ್ರತಿಯೊಬ್ಬರಿಗೂ ದೇವಸ್ಥಾನ ಪ್ರವೇಶಿಸಲು ಅವಕಾಶವಿರಬೇಕು ಎಂದು ಆಗ್ರಹಿಸಿ ನಡೆಯಿತು. ಮಲಬಾರ್‌ನ ಹಲವೆಡೆಗಳಿಂದ ಸ್ವಯಂಸೇವಕರು ಬಂದು ಇದರಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಕೊನೆಗೆ ಗಾಂಧಿಜಿಯ ನಿರ್ದೇಶನದಂತೆ ಈ ಆಂದೋಲನವನ್ನು ಹಿಂತೆಗೆದುಕೊಳ್ಳಲಾಯಿತು. ನಂತರ ಪ್ರಸಿದ್ಧ ಕಮ್ಯುನಿಸ್ಟ್ ಮುಖಂಡರಾಗಿ ಬೆಳೆದ ಎ.ಕೆ.ಗೋಪಾಲನ್ ಅಥವಾ ಎ.ಕೆ.ಜಿ. ಈ ಚಳುವಳಿಯ ಒಬ್ಬ ಪ್ರಮುಖ ಕಾರ್ಯಕರ್ತರಾಗಿದ್ದರು.

ಈ ಎಲ್ಲಾ ಚಳುವಳಿ, ಹೋರಾಟಗಳ ಹಿನ್ನೆಲೆಯಲ್ಲಿ 1935ರಲ್ಲಿ ಬ್ರಿಟಿಶ್ ಸರಕಾರ ಭಾರತಕ್ಕೆ ಒಂದು ಹೊಸ ಸಂವಿಧಾನ ಶಾಸನವನ್ನು ಸಾರಿತು. ಜನ ಈ ಶಾಸನದ ವಿರುದ್ಧ ಕ್ರೋಧ ವ್ಯಕ್ತಪಡಿಸಿದರು.

(ಮುಂದುವರಿಯುವುದು)

ಹೆಚ್ಚು ಆರ್ಥಿಕ ಸುಧಾರಣೆಗಳು

ಮಾನವೀಯ ಮುಖದೊಂದಿಗೊ ಮಾನವೀಯ ಮುಖವಾಡದೊಂದಿಗೊ?



ಮಾನವೀಯ ಮುಖದೊಂದಿಗೆ ಇನ್ನೂ ಹೆಚ್ಚಿನ ಆರ್ಥಿಕ ಸುಧಾರಣೆಗಳು ಎಂಬುದು ಕಾಂಗ್ರೆಸ್(ಐ)ನ ಚುನಾವಣಾ ಪ್ರಣಾಳಿಕೆಯ ತಿರುಳು ವಾಕ್ಯ. ಉದ್ದಿಮೆಗಳಲ್ಲಿ ಹೆಚ್ಚು ನಿರ್ಲೈನ್ಸೀಕರಣ ಹಣಕಾಸು ಸಂಸ್ಥೆಗಳಿಂದ (ಸಾರ್ವಜನಿಕ ಉದ್ದಿಮೆಗಳ) ಶೇರು ಮಾರಾಟ ಸುಂಕಗಳಲ್ಲಿ ಕಡಿತ ಆಮದಿನ ಮೇಲಿನ ನಿರ್ಬಂಧಗಳ ತೆಗೆದು ಹಾಕುವಿಕೆ, ವಿದೇಶೀ ವಿನಿಮಯ ನಿರ್ವಹಣಾ ಕಾಯಿದೆ (ಫೆಮ), ಬ್ಯಾಂಕುಗಳಿಗೆ ಸ್ವಾಯತ್ತತೆ, ವಸತಿ ನಿರ್ಮಾಣ ಕ್ಷೇತ್ರದಲ್ಲಿ ವಿದೇಶೀ ಹೂಡಿಕೆ ಮತ್ತು ವಿಮಾ ಕ್ಷೇತ್ರದಲ್ಲಿ ಸೀಮಿತ ಖಾಸಗೀಕರಣ ಇವು ಕಾಂಗ್ರೆಸ್(ಐ)ನ ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಮುಖ್ಯ ಅಂಶಗಳು.

ಆರ್ಥಿಕ ಬೆಳವಣಿಗೆಯ ವೇಗವನ್ನೇ ಹೆಚ್ಚುಗೊಳಿಸಿದರೆ ಎಲ್ಲ ತರಹದ ಆರ್ಥಿಕ ಸಮಸ್ಯೆಗಳು ಪರಿಹಾರಗೊಳ್ಳುತ್ತವೆ ಎಂಬುದು ಕಾಂಗ್ರೆಸ್‌ನ ನಿಲುವು. ಬಡತನ ಮತ್ತು ನಿರುದ್ಯೋಗಗಳೆರಡೂ ಇದರಿಂದ ಪರಿಹಾರವಾಗುತ್ತವೆಯಂತೆ. ಹಣಕಾಸು ಶಿಸ್ತು ವಿದೇಶೀ ವ್ಯಾಪಾರ ಮತ್ತು ಹೂಡಿಕೆಗೆ ಆರ್ಥಿಕವನ್ನು ತೆರೆಯುವುದು, ಹಣಕಾಸು ವಲಯದ ಸುಧಾರಣೆ ಇತ್ಯಾದಿಗಳೆಲ್ಲ, ಶೀಘ್ರ ಬೆಳವಣಿಗೆಗೆ ಅವಶ್ಯಕ ಎನ್ನುತ್ತದೆ ಕಾಂಗ್ರೆಸ್ ಪ್ರಣಾಳಿಕೆ.

ಇದು ಮಾನವೀಯ ಮುಖವಾಡದ ಆರ್ಥಿಕ ಸುಧಾರಣೆ ಎಂಬುದು ಸ್ಪಷ್ಟ. ಸ್ವಲ್ಪ ಆಳವಾಗಿಯೇ ವಿಚಾರ ಮಾಡುವವರಿಗೆ ಇದು ಮುಖವಾಡ, ನಟನೆ ಏನೂ ಇಲ್ಲದ ಸತ್ಯ. ಇಲ್ಲಿ ಮಾನವೀಯತೆಯ ಎಸಳೂ ಇಲ್ಲ. ಆದರೆ ಇವರ ಮಾತುಗಳಿಗೆ ಮರುಳಾಗುವವರಿಗೆ ಮಾನವೀಯತೆಯ ಮುಖವಾಡ ಕಂಡೀತು ಅಷ್ಟೇ. ಅದು ಮುಖವಾಡ ಎಂಬುದಂತೂ ಹಸುಗೂಸಿಗೂ ಗೊತ್ತಾಗಿಬಿಡುತ್ತದೆ.

ಹಿಂದೆ ಶ್ರೀಮತಿ ಇಂದಿರಾಗಾಂಧಿ ಆನಂತರ ರಾಜೀವ್ ಗಾಂಧಿ ಆರ್ಥಿಕ ಉದಾರೀಕರಣ ತಂದಿದ್ದರು.

ಆದರೆ 1991ರಲ್ಲಿ ಅಧಿಕಾರಕ್ಕೆ ಬಂದ ಪಿ.ವಿ.ನರಸಿಂಹರಾಯರ ಕಾಂಗ್ರೆಸ್ ಸರ್ಕಾರ ಉದಾರೀಕರಣ ಎಂಬುದನ್ನು ದೇಶ ಮಾರಾಟ ಮಾಡುವ ಪ್ರಕ್ರಿಯೆಗೇ ಇಳಿಸಿತು. ಡಾ|| ಮನಮೋಹನಸಿಂಗ್ ಎಂಬ (ಕು) ಖ್ಯಾತ ಅರ್ಥಶಾಸ್ತ್ರಜ್ಞರನ್ನೇ ಹಣಕಾಸು ಮಂತ್ರಿಗಳಿಂದು ನೇಮಿಸಿ ಐ.ಎಂ.ಎಫ್. ವಿಶ್ವ ಬ್ಯಾಂಕುಗಳು ಹೇಳುವ ಕಾರ್ಯಕ್ರಮಗಳನ್ನು ಚಾಚೂತಪ್ಪದೆ ಅಪಾರ ಜನ ಕಾಳಜಿಯ ಕೆಲಸ ಎಂಬ ಏರ್ಪಾಡು ಮಾಡಲಾಯಿತು.

ಕಾಂಗ್ರೆಸ್‌ನ ಈ ಸರ್ಕಾರ ತೆಗೆದು ಕೊಳ್ಳುವ ಪ್ರತಿಯೊಂದೂ ಕ್ರಮವನ್ನು ತಾತ್ವಿಕವಾಗಿ ವಿವರಿಸಿ ಸಮರ್ಥಿಸಿಕೊಳ್ಳಲು ಒಬ್ಬ ಅರ್ಥಶಾಸ್ತ್ರಜ್ಞ ಅವರಿಲ್ಲದಿದ್ದರೂ ನಮ್ಮ ಬೂರ್ಜ್ವ ಮಾಧ್ಯಮಗಳು ಅದನ್ನು ಮಾಡುತ್ತಿದ್ದರು ಬಿಡಿ. ಆದರೆ ಒಬ್ಬ ಖ್ಯಾತ ಅರ್ಥಶಾಸ್ತ್ರಜ್ಞ ಈ ಕೆಲಸಕ್ಕೆ ದೊರೆತಾಗ? ಇನ್ನೂ ಸಲೀಸಲ್ಲವೆ?

ಹೀಗೆ 1991ರಿಂದ ಆರ್ಥಿಕ ಸುಧಾರಣೆಗಳ ಮಹಾಪೂರವೇ ಹರಿದು ಬಂತು. ಈ ಕ್ರಮಗಳ ನೇರ ಗುರಿ ಐ.ಎಂ.ಎಫ್. ವಿಶ್ವ ಬ್ಯಾಂಕ್‌ಗಳ ಕಾರ್ಯಕ್ರಮವಾದ ರಚನಾತ್ಮಕ ಹೊಂದಾಣಿಕೆಯನ್ನು ಜಾರಿಗೆ ತರುವುದು, ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು ಜಾಗತಿಕ ಆರ್ಥಿಕದೊಂದಿಗೆ ಭಾರತದ ಆರ್ಥಿಕವನ್ನು ವಿಲೀನಗೊಳಿಸುವುದು ಇತ್ಯಾದಿ ಮಹತ್ವಾಕಾಂಕ್ಷೆಗಳ ಘೋಷಣೆಗಳಾದವು. ಒಟ್ಟಿನಲ್ಲಿ ಸಾಮ್ರಾಜ್ಯಶಾಹಿಗಳಿಗೆ ನಿಮ್ಮ ಆರ್ಥಿಕವನ್ನು ತೆರೆದು ನಮ್ಮದೊಡ್ಡ ಬಂಡವಾಳಿಗರೂ ಹೊರ ಹೋಗಿ ಹೂಡಿಕೆ ಮಾಡಿ ಲಾಭಗಳಿಸಿಕೊಂಡು ಬರಲು ಅನುವು ಮಾಡಿ ಕೊಡುವುದೇ ಇದರ ಉದ್ದೇಶ.

ಆರ್ಥಿಕವನ್ನೇ ಕೆಲವೇ ಕೆಲವು ಬಂಡವಾಳಿಗರು ಲಾಭ ಮಾಡಿಕೊಳ್ಳುವಂತೆ, ದುಡಿವ ಜನಸಾಮಾನ್ಯರು ಹೆಚ್ಚೆಚ್ಚು ಬಡವರಾಗುತ್ತಾ ಹೋಗುವಂತೆ ಮಾಡುವುದು ಇದೇ ಈ ಉದಾರೀಕರಣ ಸಾಧಿಸಿದ್ದು. ದೇಶದಲ್ಲಿ ಉದಾರೀಕರಣ ಬಂದುದರ ಜೊತೆಗೇ ಬಡತನ ನಿರುದ್ಯೋಗ ಹೆಚ್ಚಿದ್ದು, ಆಮದು ಹೆಚ್ಚಿದ್ದು ವ್ಯಾಪಾರ ಬಾಕಿ ಹೆಚ್ಚತೊಡಗಿದ್ದು ಇವೆಲ್ಲ ಈಗ ಎಲ್ಲರಿಗೂ ತಿಳಿದಿರುವ ವಿಷಯ.

ಒಂದೊಂದೇ ವಲಯವನ್ನು ತೆಗೆದುಕೊಂಡು ವಿಶ್ಲೇಷಿಸುವುದಾದರೆ, ಸತತ ಒಂಬತ್ತು ವರ್ಷಗಳ ಕಾಲ ಮಳೆ ಬೆಳೆ ಉತ್ತಮವಾಗಿ ಆಗುತ್ತಿದ್ದರೂ ಕೃಷಿಯ ಬೆಳವಣಿಗೆ ಹೇಳಿ ಕೊಳ್ಳುವಷ್ಟೇನು ಉತ್ತಮವಾಗಿಲ್ಲ, 2000 ಇಸವಿಯ ವೇಳೆಗೆ ಭಾರತದ ಜನಕೋಟಿಗೆ ಎರಡು ಹೊತ್ತು ಊಟ ದೊರೆಯಬೇಕಾದರೆ ಆಹಾರ ಧಾನ್ಯದ ಉತ್ಪಾದನೆ 225 ದಶಲಕ್ಷ ಟನ್ನುಗಳಷ್ಟಾಗಬೇಕು ಆದರೆ ಈಗ ನಾವು 195 ದಶಲಕ್ಷ ಟನ್ನುಗಳಷ್ಟು ಉತ್ಪಾದನೆಯ ಸುತ್ತವೇ ಸುತ್ತುತ್ತಿದ್ದೇವೆ.

ಔದ್ಯಮಿಕ ಬೆಳವಣಿಗೆ ಶೇ. 9 ಕ್ಕಿಂತ ಹೆಚ್ಚು ಬೆಳವಣಿಗೆ ಇರಬೇಕಾದದ್ದು ಶೇ.6 ಕ್ಕೆ ಇಳಿದಿದೆ. ಔದ್ಯಮಿಕ ಹಿಂಜರಿತವನ್ನು ಈಗ ಅನುಭವಿಸುತ್ತಿದ್ದೇವೆ. ಬ್ಯಾಂಕುಗಳಿಂದ ಸಾಲ ಕೇಳುವವರಿಲ್ಲವಾಗಿದೆ.

ಹಣಕಾಸು ವಲಯದಲ್ಲಿ ಆಗಿರುವ ಸುಧಾರಣೆಗಳಿಂದಾಗಿ ಶ್ರೀಮಂತರ ಸೇವೆಗೆ ಒತ್ತು ನೀಡುವ ವ್ಯವಸ್ಥೆ ಮೂಡಿಬರುತ್ತಿದೆ. ಕೃಷಿ, ಸಣ್ಣ ಕೈಗಾರಿಕೆ, ಸಣ್ಣ ಸೇವೆ ಇತ್ಯಾದಿ ಆದ್ಯತೆ ವಲಯಗಳಿಗೆ ಸಾಲ ಸೌಲಭ್ಯಗಳು ಕಡಿಮೆಯಾಗತೊಡಗಿವೆ. ಹಣಕಾಸು ವಲಯದಲ್ಲಿ ಉದ್ಯೋಗಗಳು ಕಡಿಮೆ ಆಗುತ್ತಿದೆ. ಆದ್ಯತೆಯ ವಲಯಕ್ಕೆ ಸಾಲ ಸೌಲಭ್ಯಗಳು ಕಡಿಮೆಯಾಗುತ್ತಿರುವುದರಿಂದ ಅಲ್ಲಿಯೂ ಉದ್ಯೋಗಗಳ ಸೃಷ್ಟಿ ಬಹಳ ಕಡಿಮೆಯಾಗುತ್ತಿದೆ. ವಾಸ್ತವವಾಗಿ ಈ ಆದ್ಯತೆಯ ವಲಯದಲ್ಲೇ ಅತಿ ಹೆಚ್ಚು ಉದ್ಯೋಗಗಳ ಸೃಷ್ಟಿ ಅತಿ ಕಡಿಮೆ ಬಂಡವಾಳದಿಂದ ಆಗುವುದು. ಆದರೆ ಈ ವಲಯಕ್ಕೆ ನೆರವಿನ ಕಡಿತ ಆಗಿರುವುದರಿಂದ ಉದ್ಯೋಗಗಳ ಸೃಷ್ಟಿ ಕಡಿಮೆ ಆಗಿದೆ.

ಹಣಕಾಸು ವಲಯಕ್ಕೆ ಬಹುರಾಷ್ಟ್ರೀಯ ಕಂಪನಿಗಳು ಲಗ್ಗೆ ಹಾಕಿವೆ. ವಿದೇಶೀ ಬ್ಯಾಂಕುಗಳು ನಮ್ಮ ದೇಶದ ಶ್ರೀಮಂತರಿಗೆ ಹೊಸ ಹೊಸ ತರಹದ ಸೇವೆಗಳನ್ನು ಕಲ್ಪಿಸಿ ಲಾಭದ ಕೊಳ್ಳೆ ಹೊಡೆಯುತ್ತಿದ್ದಾರೆ. ವಿಮಾ ಕ್ಷೇತ್ರವನ್ನು ವಿದೇಶಿಯರಿಗೆ ತೆರೆಯಬೇಕೆಂಬ ಬಗ್ಗೆ ತೀವ್ರ ಒತ್ತಡವನ್ನು ಭಾರತದ ಮೇಲೆ ಹೇರಲಾಗುತ್ತಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆ

ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸಹಾಯಧನದ ಕಡಿತವನ್ನು ಮಾಡಿಕೊಂಡೇ ಬರಲಾಗುತ್ತಿದೆ. ಒಂದು ಕಡೆ ಸರ್ಕಾರೀ ಗೋದಾಮುಗಳಲ್ಲಿ ಆಹಾರ ಧಾನ್ಯಗಳು ಕೊಳೆಯುತ್ತ ಬಿದ್ದಿದ್ದರೆ ಇನ್ನೊಂದು ಕಡೆ ಬಡ ಜನತೆ ಉಪವಾಸ ಸಾಯುವ ಸ್ಥಿತಿ. ಎಡಪಕ್ಷಗಳು ಮಾತ್ರ ರೇಷನ್ ಪದ್ಧತಿಯನ್ನು ಬಲಪಡಿಸಿ ಎಂದು ಒತ್ತಾಯ ಮಾಡಿದವು.

ಸಾರ್ವಜನಿಕ ಆರೋಗ್ಯ

ಸಹಾಯಧನಗಳ ಕಡಿತದಿಂದಾಗಿ ಸಾರ್ವಜನಿಕ ಆರೋಗ್ಯಕ್ಕೂ ಹಣಕಾಸಿನ ಕಡಿತ. ಒಂದು ಕಡೆ ದೊಡ್ಡ ಖಾಸಗಿ ಆಸ್ಪತ್ರೆಗಳು ಏಳುತ್ತಿದ್ದರೆ ಬಡ ಜನತೆ ವೈದ್ಯಕೀಯ ನೆರವಿಲ್ಲದೆ ಸಾಯುವ ಸ್ಥಿತಿ. ಖಾಸಗಿ ಆಸ್ಪತ್ರೆಗಳಲ್ಲಿ ಉತ್ತಮ ಸೇವೆಗಳು ಲಭ್ಯವಿರಬಹುದು. ಆದರೆ ಈ ಸೇವೆಗಳನ್ನು ಖರೀದಿಸುವ ಸಾಮರ್ಥ್ಯ ಬಡ ಬೋರೇಗೌಡನಿಗೆಲ್ಲಿ? ವೈದ್ಯಕೀಯ ಸೇವೆಗಳೂ ಬಂಡವಾಳಿಗರ ಲಾಭಕ್ಕಾಗಿ ಮಾತ್ರ.

ಸಾರ್ವಜನಿಕ ಶಿಕ್ಷಣ

ಸಾರ್ವಜನಿಕ ಶಿಕ್ಷಣವೂ ಹಣಕಾಸು ಕೊರತೆಯಿಂದಾಗಿಯೇ ಬಳಲುವಂತಾಗಿದೆ. ಇದರಿಂದಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣವನ್ನು ಒಂದು ಬಹಳ ಲಾಭದಾಯಕ ವ್ಯಾಪಾರೀ ಸರಕನ್ನಾಗಿ ಪರಿವರ್ತಿಸಿದ್ದಾರೆ.

ಗಣಿಗಾರಿಕೆ, ವಿದ್ಯುತ್, ಸಾಗಾಣಿಕೆ, ಬಂದರುಗಳು ಹೀಗೆ ಯಾವ ಕ್ಷೇತ್ರವನ್ನು ತೆಗೆದುಕೊಂಡರೂ ಉದಾರೀಕರಣ ಈ ಎಲ್ಲ ಕ್ಷೇತ್ರಗಳನ್ನು ಬಂಡವಾಳಿಗರ ಲಾಭಕ್ಕಾಗಿ ಅನುವು ಮಾಡಿಕೊಟ್ಟಿದೆ.

ಉದಾರೀಕರಣವೆಂದರೆ ಅಮಾನವೀಯತೆ ಎಂಬುದು ಈಗ ಬಹಳ ಸ್ಪಷ್ಟವಾಗಿ ಕಾಣತೊಡಗಿದೆ. ಉದಾರೀಕರಣ ದೇಶಕ್ಕೆ ನಿಜವಾಗಿಯೂ ಒಳ್ಳೆಯದು ಮಾಡುತ್ತದೆಂದು ನಂಬಿದವರೂ ಇಂದು ಉದಾರೀಕರಣವನ್ನು ಸಂದೇಹಿಸುತ್ತಿದ್ದರೆ.

ಹೀಗಿರುವಾಗ ಕಾಂಗ್ರೆಸ್ ಮಾನವೀಯ ಮುಖದಿಂದ ಇನ್ನೂ ಹೆಚ್ಚಿನ ಉದಾರೀಕರಣ ಮಾಡಲಾಗುವುದೆಂದರೆ ಅದು ಅಮಾನವೀಯ ಮುಖವಾಡದ್ದಾಗಿರುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿರುವ ಆವಶ್ಯಕತೆಯೇ ಇಲ್ಲ ಅಲ್ಲವೆ?

ಅವರು ಬತ್ತ ತಿನ್ನುವವರಾದರೆ ನಾವು ಹೊಟ್ಟು ತಿನ್ನುವವರು

ಯಾರು? ಬಿ.ಜೆ.ಪಿ.ಯವರು. ಯಾವ ವಿಷಯದಲ್ಲಿ? ಎಲ್ಲ ವಿಷಯಗಳಲ್ಲೂ ಹೌದು. ಉದಾರೀಕರಣದ ವಿಷಯದಲ್ಲಂತೂ ಕೇಳುವುದೇ ಬೇಡ. ಕಾಂಗ್ರೆಸ್‌ನವರು ಮಾನವೀಯ ಮುಖ ಎಂದರೆ ಇವರು ಸ್ವದೇಶೀ ಎನ್ನುತ್ತಾರೆ.

ಹಾಗೆ ನೋಡಿದರೆ ಬಿ.ಜೆ.ಪಿ.ಯ ಒಬೊಬ್ಬರು ಒಂದೊಂದು ತರಹ ಮಾತನಾಡುತ್ತಾರೆ. ಪ್ರಧಾನ ಮಂತ್ರಿ ಪದವಿಗೆ ಬಿ.ಜೆ.ಪಿ.ಯ ಅಭ್ಯರ್ಥಿ ಅಟಲ್ ಬಿಹಾರಿ ವಾಜಪೇಯಿಯವರ ವಿಚಾರಗಳೇನು?

ದೇಶೀ ಕಂಪನಿಗಳಿಗೆ ಜಾಗತಿಕ ಮಟ್ಟದ ಸ್ಪರ್ಧೆಗೆ ಸಜ್ಜುಗೊಳ್ಳಲು ನಾವು ಎರಡು ವರ್ಷಗಳನ್ನು ಸಮಯ ನೀಡುತ್ತೇವೆ ಎನ್ನುತ್ತಾರೆ ವಾಜಪೇಯಿಯವರು. ಆಮೇಲೆ? ಆಮೇಲೆ ಉದಾರೀಕರಣ. ಉದಾರೀಕರಣದಿಂದ ಏನಾಗುತ್ತದೆ ಎನ್ನುವುದನ್ನು ನೋಡಿದ್ದೇವಲ್ಲ. ಅವೆಲ್ಲವೂ ಇನ್ನೂ ತೀವ್ರವಾಗಿ ಆಗುತ್ತದೆ. ಯಾಕೆಂದರೆ ಬಿ.ಜೆ.ಪಿ. ಇನ್ನೂ ತೀವ್ರ ಉದಾರೀಕರಣ ಮಾಡುತ್ತದೆ. ಜೊತೆಗೆ ಆಂತರಿಕವಾಗಿಯೂ ಬೆಂಕಿ ಹಚ್ಚುತ್ತಾರೆ. ಆರ್ಥಿಕದ ಉದಾರೀಕರಣದ ಜೊತೆಗೆ ಈ ಬೆಂಕಿ ಸೇರಿದರೆ (ಕೋಮು, ಜಾತಿ, ಮತ ಇತ್ಯಾದಿ ಬೆಂಕಿ) ದೇಶದ ಜನರ ಪರಿಸ್ಥಿತಿ.

ಆಟಲ್ ಬಿಹಾರಿ ವಾಜಪೇಯಿ ಅವರ ಕನಸು ನನಸಾಗಿ ಪ್ರಧಾನ ಮಂತ್ರಿಗಳೇ ಆಗಿ ಬಿಟ್ಟರೆ ಏನೇನು ಮಾಡಬಯಸುತ್ತಾರೆ ಆರ್ಥಿಕ ರಂಗದಲ್ಲಿ?

ಮೊದಲನೇಯದಾಗಿ ಲೈಸನ್ಸ್ ರಾಜ್ ವ್ಯವಸ್ಥೆಯನ್ನು ತೆಗೆದು ಹಾಕುವುದು. ಲೈಸನ್ಸ್ ರಾಜ್ಯವನ್ನು ತೆಗೆದುಹಾಕುವುದು ಸರಿಯೇ. ಆದರೆ ಯಾವ ಯೋಜನೆಯೂ ಇಲ್ಲದೆ ಯಾರು ಯಾವ ಉದ್ದಿಮೆ ಬೇಕಾದರು ಸ್ಥಾಪಿಸಬಹುದೆಂದರೆ, ಅಥವಾ ಯಾರು ಎಲ್ಲಿ ಬೇಕಾದರೂ ಉದ್ದಿಮೆ ಸ್ಥಾಪಿಸಬಹುದೆಂದಾದರೆ ಲಾಭದಾಯಕ ಉದ್ದಿಮೆಗಳನ್ನು ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ಸ್ಥಾಪಿಸುತ್ತಾರೆ ಆಗ?

ಭಾರತೀಯ ಉದ್ದಿಮೆಗಳಿಗೆ ಎಂತಹ ರಕ್ಷಣೆ ನೀಡುತ್ತಾರೆ ಬಿ.ಜೆ.ಪಿ.ಯವರು? ಎಷ್ಟು ಸಹಾಯಧನ ಇತ್ಯಾದಿ ನೀಡುತ್ತಾರೆ?

ಈ ಪ್ರಶ್ನೆಗೆ ವಾಜಪೇಯಿ ಉತ್ತರ ನೀಡುವುದಿಲ್ಲ. ಅದು ಗುಟ್ಟಿನ ವಿಷಯ ಆಧಿಕಾರಕ್ಕೆ ಬಂದ ಮೇಲೆ ಪ್ರಕಟಿಸುತ್ತಾರಂತೆ.

ವಿದೇಶೀ ಹೂಡಿಕೆಗಳ ಬಗ್ಗೆ ಹೇಳುವುದಾದರೆ ನಾವು ಪ್ರಗತಿಪರ ಮನೋಭಾವವುಳ್ಳ ಪಕ್ಷ ಎಂಬುದೇ ವಾಜಪೇಯಿಯವರ ನಿಲುವು ಇದರರ್ಥ? ಅವರನ್ನೇ ಕೇಳಬೇಕು ಕೇಳಿದರೂ ಉತ್ತರವಿಲ್ಲ .

ಹಾಗೆ ವಾಜಪೇಯಿಯವರು ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಅಂತರ್ರಚನಾ ಸೌಕರ್ಯ ಇತ್ಯಾದಿಗಳಲ್ಲಿ ದೊಡ್ಡ ಪ್ರಮಾಣದ ಹೂಡಿಕೆಯ ಆಗತ್ಯವಿದೆ ಎಂದು ಹೇಳುತ್ತಾರೆ. ಆದರೆ ಇದಕ್ಕೆ ಹಣವನ್ನು ಎಲ್ಲಿಂದ ತರಬಯಸುತ್ತಾರೆಂಬುದನ್ನು ಸ್ಪಷ್ಟ ಪಡಿಸುವುದಿಲ್ಲ. ಅದಲ್ಲದೆ ಆಂತರಿಕ ಉಳಿತಾಯದ ಪ್ರಮಾಣವನ್ನು ಹೆಚ್ಚಿಸ ಬೇಕೆನ್ನುತ್ತಾರೆ - ಅದು ಹೇಗೆ ಎಂಬ ಪ್ರಶ್ನೆ ಉಳಿದು ಬಿಡುತ್ತದೆ.

ಹೀಗೆ ಬಿ.ಜೆ.ಪಿ. ಎಲ್ಲ ಆರ್ಥಿಕ ವಿಷಯಗಳ ಬಗ್ಗೆ ತನಗೆ ಸ್ಪಷ್ಟ ನಿಲುವಿದೆ ಎಂದು ಹೇಳಿದರೂ ನಿರ್ದಿಷ್ಟ ಪ್ರಶ್ನೆಗಳನ್ನು ಕೇಳಿದಾಗ ಅವುಗಳಿಗೆ ಉತ್ತರವಿರುವುದಿಲ್ಲ.

ಐ.ಎಂ.ಎಫ್. ವಿಶ್ವಬ್ಯಾಂಕ್‌ಗಳ ಸಾಲ, ಅವು ಹೇರುವ ಷರತ್ತುಗಳನ್ನು ಒಪ್ಪಿಕೊಳ್ಳುವ ತಿರಸ್ಕರಿಸುವ ಬಗ್ಗೆ ಬಿ.ಜೆ.ಪಿ. ಏನೂ ಹೇಳುವುದಿಲ್ಲ.

ಸಾಮಾಜಿಕ ವಲಯಕ್ಕೆ ಸಹಾಯಧನ ಮತ್ತು ಹೂಡಿಕೆಗಳನ್ನು ಕಡಿಮೆ ಮಾಡುವ ಮೂಲಕ ಹಣಕಾಸು ಕೊರತೆಯನ್ನು ಕಡಿಮೆಮಾಡುವ ಷರತ್ತಿನ ಬಗ್ಗೆಯಾಗಲಿ ದೇಶದ ಅಭಿವೃದ್ಧಿಗಾಗಿ ಎಂತಹ ಆರ್ಥಿಕ ನಿಯಮಗಳನ್ನು ಅನುಸರಿಸಬೇಕೆಂಬ ಬಗ್ಗೆಯಾಗಲಿ ಅವರಲ್ಲಿ ಸ್ಪಷ್ಟ ವಿಚಾರಗಳಿಲ್ಲ.

ಸ್ಪಷ್ಟ ವಿಚಾರಗಳಿಲ್ಲದ ಮೇಲೆ ಬೇರೆಯವರ ವಿಚಾರಗಳನ್ನು ಎರವಲು ಪಡೆದು ಸ್ವಲ್ಪ ಬದಲಾಯಿಸಿ ಕೊಂಡು ಅನುಸರಿಸುವುದೇ ದಾರಿ. ಬಿ.ಜೆ.ಪಿ. ಅದನ್ನೇ ಮಾಡುವಂತೆ ಕಾಣುತ್ತದೆ.

ಇತ್ತ ಸ್ವದೇಶಿಯ ಬಗ್ಗೇ ಮಾತನಾಡುತ್ತ ಅತ್ತ ಉದಾರೀಕರಣವನ್ನು ಪ್ರತಿಪಾದಿಸುವ ಅವಕಾಶವಾದಿತ್ವ ಬಿ.ಜೆ.ಪಿ.ಯದು.

ಕರ್ನಾಟಕದಲ್ಲಿ ಕಳೆದವಾರ

ಜನವರಿ 22

- ಯಾವುದೇ ಕಾರಣಕ್ಕೂ ಪ್ರಸಕ್ತ ವಿಧಾನಸಭೆಯನ್ನು ವಿಸರ್ಜನೆ ಮಾಡಲು ತಾನು ಶಿಫಾರಸು ಮಾಡುವುದಿಲ್ಲ ಎಂದು ಮುಖ್ಯಮಂತ್ರಿಗಳು. ಭಾರತೀಯ ಜನತಾ ಪಕ್ಷದ ನೆರಳನ್ನು ಸಹಿಸಲಾರೆ ಎಂದಿದ್ದ ಹೆಗಡೆ ಅವರು ಇಂದು ಅದೇ ಪಕ್ಷದ ಜತೆ ಚುನಾವಣಾ ಮೈತ್ರಿ ಮಾಡಿಕೊಂಡಿದ್ದಾರೆ ಎಂದು ಟೀಕಿಸಿದರು.
- ಕೆವಿ.ಪಿ. ಯ ಆರು ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆ.

ಜನವರಿ 23

- ಕಾಂಗ್ರೆಸ್‌ನ ಎರಡನೇ ಪಟ್ಟಿಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್‌ನ 8 ಅಭ್ಯರ್ಥಿಗಳು
- ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲ್ಲೂಕಿನ ನೂರಾರು ಮಂದಿ ಕಾರ್ಯಕರ್ತರು ನಾಲ್ವರು ಜಿಲ್ಲಾ ಪಂಚಾಯತ್ ಸದಸ್ಯರೊಂದಿಗೆ ಜನತಾ ದಳಕ್ಕೆ.
- ಟಿಕೆಟ್ ಸಿಗದ ಮೊಯ್ಲಿಯವರೂ ಪ್ರತ್ಯೇಕ ಪಕ್ಷ ರಚಿಸುವುದಾಗಿ ಬೆದರಿಸಿ ದ್ದಾರೆಂಬ ವರದಿ.

ಜನವರಿ 24

- ದೇಶಪಾಂಡೆ ಅವರಿಗೆ ನಾಚಿಕೆಯಿದ್ದರೆ ಜನತಾದಳಕ್ಕೆ ರಾಜೀನಾಮೆ ನೀಡಿ ಚುನಾವಣೆ ನಿಲ್ಲಲಿ, ಎರಡು ವರ್ಷಗಳ ವಿಧಾನ ಸಭಾ ಸದಸ್ಯತ್ವ ಉಳಿಸಿಕೊಳ್ಳಲು ಪಕ್ಷ ಬಿಡಲು ಅವರು ತಯಾರಿಲ್ಲ ಎಂದು ಇಬ್ರಾಹಿಂ ಟೀಕೆ.

ಜನವರಿ 25

- ಮಾಜಿ ಸಚಿವ ಲಕ್ಷ್ಮಿನರಸಿಂಹಯ್ಯ ಕೊನೆಗೂ ಲೋಕಶಕ್ತಿಗೆ. ರಾಯಚೂರಿನಲ್ಲಿ ಜಿಲ್ಲಾ ಬಿಜೆಪಿ ಮಾಜಿ ಪ್ರಧಾನ ಕಾರ್ಯದರ್ಶಿ ಬಂಡಾಯ ಅಭ್ಯರ್ಥಿ.

ಜನವರಿ 26

- ವೈ.ಕೆ.ರಾಮಯ್ಯನವರಿಗೆ ಟಿಕೆಟ್ ನಿರಾಕರಿಸಿದ್ದಕ್ಕೆ ಕಾಂಗ್ರೆಸ್ ಅಧ್ಯಕ್ಷರ ಮನೆ ಮುಂದೆ ಬೆಂಬಲಿಗರ ಧರಣಿ.

ಜನವರಿ 27

- ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ಸಭಾತ್ಯಾಗದ ನಡುವೆ ಪಟೇಲ್ ಸರಕಾರಕ್ಕೆ 135-0 ರ ವಿಶ್ವಾಸ ಮತ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಹೆಗಡೆಯವರ ವೇದಿಕೆ ಸೇರಿದ ಮೂವರು ಸದಸ್ಯರಿಂದಲೂ ಪಟೇಲ್ ಸರಕಾರದ ಪರವಾಗಿ ಮತ. ಸರಕಾರ ಅಸ್ಥಿರ ಗೊಳಿಸುವಲ್ಲಿ ಮೇಲ್ವಾತಿಯವರ ಪಿತೂರಿ ವಿಫಲ ಎಂದು ಮುಖ್ಯಮಂತ್ರಿಗಳು.
- ಬಿಜೆಪಿ ಅಧಿಕಾರಕ್ಕೆ ಬಂದರೆ ಮೀಸಲಾತಿ ರದ್ದಾಗುವುದೆಂದು ಬಂಗಾರಪ್ಪ ಎಚ್ಚರಿಕೆ.

ಜನವರಿ 28

- ಚಿಕ್ಕಮಗಳೂರಿನಲ್ಲಿ ಡಿ.ಕೆ.ತಾರಾದೇವಿ ಬದಲು ವೀರಪ್ಪ ಮೊಯಿಲಿ ಕಾಂಗ್ರೆಸ್ ಅಭ್ಯರ್ಥಿ. ತಾರಾದೇವಿ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಕೆ.
- ಭಟ್ಕಳದ ಬಿಜೆಪಿ ಶಾಸಕ ಚಿತ್ತರಂಜನ್ ಅಳ್ವರ ಹತ್ಯೆಯಲ್ಲಿ ದೇಶಪಾಂಡೆಯವರ ಕೈವಾಡವಿದೆ ಎಂದು ವಿಚಾರಣಾ ಆಯೋಗದ ಮುಂದೆ ಸಲ್ಲಿಸಿರುವ ದೂರನ್ನು ಅವರು ತಮ್ಮ ಅಭ್ಯರ್ಥಿಯ ಪರ ಪ್ರಚಾರಕ್ಕೆ ಬಂದರೂ ವಾಪಾಸು ಪಡೆಯುವುದಿಲ್ಲ ಎಂದು ಬಿಜೆಪಿ ಮುಖಂಡರು.

ಜನವರಿ 28

- ತುಮಕೂರಿನಲ್ಲಿ ಅಧಿಕೃತ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ವೈ.ಕೆ.ರಾಮಯ್ಯ ಸ್ಪರ್ಧೆ

"ಕೋಮುವಾದ ಭ್ರಷ್ಟಾಚಾರ ವಿರೋಧಿಸಲು ಸಂಯುಕ್ತರಂಗಕ್ಕೆ ವಿದ್ಯಾರ್ಥಿ ಯುವಜನರ ಬೆಂಬಲ"

ಕೋಮುವಾದ, ಭ್ರಷ್ಟಾಚಾರ ಹಾಗೂ ರಾಜಕೀಯ ಅಪರಾಧೀಕರಣವನ್ನು ಸಮಗ್ರವಾಗಿ ಎದುರಿಸಲು ವಿದ್ಯಾರ್ಥಿ ಯುವಜನರು ಸಂಯುಕ್ತರಂಗಕ್ಕೆ ಬೆಂಬಲ ನೀಡಬೇಕೆಂದು ಜನವರಿ 24 ರಂದು ನಡೆದ ಸಮಾವೇಶದಲ್ಲಿ ನಿರ್ಣಯಿಸಲಾಯಿತು.

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ), ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಶನ್ (ಡಿ.ವೈ.ಎಫ್.ಐ) ಯುವ ಜನತಾದಳ ವಿದ್ಯಾರ್ಥಿ ಜನತಾದಳ ಗುಲ್ಬರ್ಗಾ ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ವಿಭಾಗ ಮಟ್ಟದ ಸಮಾವೇಶದಲ್ಲಿ ನಿರ್ಣಯ ತೆಗೆದುಕೊಳ್ಳಲಾಯಿತು. ಸಮಾರಂಭದಲ್ಲಿ ಮಾತನಾಡುತ್ತಾ ರಾಜ್ಯ ವಿದ್ಯಾರ್ಥಿ ಜನತಾದಳದ ಅಧ್ಯಕ್ಷ ಡಾ.ಜಯಣ್ಣ ದೇಶ ಸ್ವಾತಂತ್ರ್ಯದ 50 ನೇ ವಾರ್ಷಿಕೋತ್ಸವ ಆಚರಿಸಿದರೂ ಜನತೆಯ ಕಷ್ಟಗಳು ದೂರಾಗಿಲ್ಲ ಎಂದು ಅಭಿಪ್ರಾಯ ಪಟ್ಟರು.

ಮುಂದುವರೆದು ಮಾತನಾಡಿದ ಅವರು ರಾಜಕೀಯದ ಭ್ರಷ್ಟಾಚಾರ ಹಾಗೂ ಕೋಮುವಾದವನ್ನು ಎದುರಿಸಲು ಅವಶ್ಯಕತೆ ಇರುವುದರಿಂದ ವಿದ್ಯಾರ್ಥಿ-ಯುವಜನರು ಹೋರಾಡುವುದು ಅನಿವಾರ್ಯವಾಗಿದೆ ಎಂದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ) ನ ರಾಜ್ಯ ಅಧ್ಯಕ್ಷ ಎಸ್.ವೈ. ಗುರುಶಾಂತ್ ಜನರ ದಿನ ನಿತ್ಯದ ಬದುಕಿನ ಪ್ರತಿಯೊಂದು ಹಂತದಲ್ಲಿ ರಾಜಕೀಯದ ಪರಿಣಾಮ ಇರುವುದರಿಂದ ವಿದ್ಯಾರ್ಥಿ-ಯುವಜನರು ರಾಜಕೀಯದಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದರು.

ಈಗ ಬಂದಿರುವ ಚುನಾವಣೆ ನಾವು ಬಯಸಿದ್ದಲ್ಲ. ಒತ್ತಾಯಪೂರ್ವಕ ಕಾಂಗ್ರೆ ನಮ್ಮ ಮೇಲೆ ಹೇರಿದೆ. ಅಧಿಕಾರ ಕಳೆದುಕೊಂಡ ಕಾಂಗ್ರೆ ಅತ್ಯಂತ ಬೇಜವಾಬ್ದಾರಿಯಿಂದ ಸಂಯುಕ್ತರಂಗದ ಬೆಂಬಲ ಹಿಂದೆ ತೆಗೆದುಕೊಂಡು ಜನತೆಯ ಮೇಲೆ ಚುನಾವಣೆಯನ್ನು ಹಾಕಿದೆ ಎಂದ ಅವರು ಬೆಂಬಲ ಹಿಂದೆ ತೆಗೆದುಕೊಂಡ ನಂತರದಲ್ಲಿ ಬೆಣೆ ಕಿತ್ತ ಕೋತಿಯ ಹಾಗೆ ಸೀತಾರಾಂ ಕೇಸರಿಯವರ ಪರಿಸ್ಥಿತಿ ಆಗಿದೆ ಎಂದರು.

ಕೇವಲ 13 ದಿನ ಅಧಿಕಾರದಲ್ಲಿದ್ದ ಭಾ.ಜ.ಪ.ದ ಪ್ರಮೋದ ಮಹಾಜನ್ ಈಗ ಅದೇ ಪಕ್ಷದ ಮಾಜಿ ಲೋಕಸಭಾ ಸದಸ್ಯರಿಂದ ಭ್ರಷ್ಟಾಚಾರದ ಆಪಾದನೆಗೊಳಗಾಗಿದ್ದಾರೆ. ಎನ್ರಾನ್ ಎಂಬ ವಿದೇಶಿ ವಿದ್ಯುತಾ ಕಾರ್ಖಾನೆ ಸ್ಥಾಪನೆಗಾಗಿ 2,500 ಕೋಟಿ ಲಂಚ ತೆಗೆದುಕೊಂಡಿದ್ದು, ಅದು ತನಿಖೆಯಾಗಬೇಕೆಂದು ಭಾ.ಜ.ಪ. ಎಂ.ಪಿ. ಕೋರ್ಟಿನಲ್ಲಿ ದಾವೆ ಹೂಡಿದ್ದು, ಆ ಪಕ್ಷದ ಭ್ರಷ್ಟಾಚಾರಕ್ಕೆ ಹಿಡಿದ ಕೈಗನ್ನಡಿ ಎಂದರು. ಕೇವಲ 13 ದಿನದಲ್ಲಿ ಇಷ್ಟೆಲ್ಲಾ ಭ್ರಷ್ಟಾಚಾರ ಎಸಗಿದ ಭಾ.ಜ.ಪ.ಕ್ಕೆ ಅಧಿಕಾರ ಬಂದರೆ ಇನ್ನೆಷ್ಟು ಅನಾಹುತ ಮಾಡಬಹುದೆಂದು ಗುರುಶಾಂತ್ ಪ್ರಶ್ನಿಸಿದರು.

ಅಧ್ಯಕ್ಷ ಮಾದರಿಯ ಸರಕಾರ ಬೇಕೆಂದು ಹೇಳುವ ಅಟಲ ಬಿಹಾರಿ ವಾಜಪೇಯಿ ದೇಶದ ವ್ಯವಸ್ಥೆಗೆ ಧಕ್ಕೆ ಉಂಟು ಮಾಡಿ ಸರ್ವಾಧಿಕಾರವನ್ನು ಪ್ರದರ್ಶಿಸಲು ಹೊರಟಿದ್ದಾರೆಂದು ಟೀಕಿಸಿದ ಅವರು ಸ್ವತಂತ್ರ ಹೋರಾಟದಲ್ಲಿ ಹೋರಾಟಗಾರರ ವಿರುದ್ಧ ಬ್ರಿಟಿಶ್ ಸರಕಾರಕ್ಕೆ ಸಾಕ್ಷಿ ಹೇಳಿದ ವಾಜಪೇಯಿಗೆ ಪ್ರಧಾನಿಯಾಗುವ ನೈತಿಕ ಹಕ್ಕಿಲ್ಲ ಎಂದು ಅಭಿಪ್ರಾಯಪಟ್ಟರು.

ಎಸ್.ಎಫ್.ಐ.ನ ರಾಜ್ಯಕಾರ್ಯದರ್ಶಿ ಕೆ. ಪ್ರಕಾಶ್ ಮಾತನಾಡುತ್ತಾ ದೇಶದ ಬಹುತೇಕ ಮಾಧ್ಯಮಗಳು ಭಾ.ಜ.ಪ. ಇನ್ನೇನು ಅಧಿಕಾರಕ್ಕೆ ಬರುತ್ತದೆ ಎನ್ನುವ ಹಾಗೆ ಚಿತ್ರಿಸುತ್ತಿರುವುದನ್ನು ಟೀಕಿಸಿದರು. ಭಾ.ಜ.ಪ ಅಧಿಕಾರಕ್ಕೆ ಬರಲೆಂದು ಬಹುರಾಷ್ಟ್ರೀಯ ಹಾಗೂ ರಾಷ್ಟ್ರದ ದೊಡ್ಡ ದೊಡ್ಡ ಬಂಡವಾಳಗಾರರು ಹಣದ ಹೊಳೆಯನ್ನು ಭಾ.ಜ.ಪ.ದತ್ತ ಹರಿಸುತ್ತಿದ್ದಾರೆ. ಇದಕ್ಕೆ ಉದಾಹರಣೆ ಎನ್ನುವಂತೆ ಇತ್ತೀಚೆಗೆ ವಾಜಪೇಯಿಯವರ ಹುಟ್ಟು ಹಬ್ಬಕ್ಕಾಗಿ ಪತ್ರಿಕೆಗಳಲ್ಲಿ ಮೂಡಿಬಂದ ಜಾಹೀರಾತುಗಳೇ ಸಾಕ್ಷಿ ಎಂದು ನುಡಿದರು.

ಸಮಾರಂಭದಲ್ಲಿ ಸಚಿವ ಶರಣ ಬಸಪ್ಪ ದರ್ಶನಾಪೂರ ಗುಲ್ಬರ್ಗಾ ಲೋಕಸಭಾ ಅಭ್ಯರ್ಥಿ ಕಮರುಲ್ ಅಸ್ಲಾಂ ಹಾಗೂ ಅನೇಕ ಗಣ್ಯರು ಆಗಮಿಸಿ ಸಮಾವೇಶಕ್ಕೆ ಶುಭಕೋರಿದರು. ಸಿ.ಪಿ.ಐ(ಎಂ) ಪಕ್ಷದ ಮುಖಂಡರು ಜಿಲ್ಲಾ ಪಂಚಾಯತ್ ಸದಸ್ಯರಾದ ಮೇಘರಾಜ್ ಕಠಾರೆ ನೀಲಾ.ಕೆ. ಉಪಸ್ಥಿತರಿದ್ದರು.

ವೇದಿಕೆ ಮೇಲೆ ವಿದ್ಯಾರ್ಥಿ ಜನತಾದಳದ ಜಿಲ್ಲಾ ಅಧ್ಯಕ್ಷ ರವಿ, ಎಸ್.ಎಫ್.ಐ ನ ರಾಜ್ಯ ಉಪಾಧ್ಯಕ್ಷ ಚಂದ್ರಪ್ಪ ಹೊಸ್ಕೆರಾ ಉಪಸ್ಥಿತರಿದ್ದರು. ಗುಲ್ಬರ್ಗಾ ವಿಭಾಗದ ಬಳ್ಳಾರಿ, ರಾಯಚೂರು, ಬೀದರ್‌ನಿಂದ ಬಂದ 1000 ಜನರ ಈ ಸಮಾವೇಶದಲ್ಲಿ ಆದಯ್ಯ ಹಿರೇಮಠ ಸ್ವಾಗತಿಸಿದರು. ನಾಗರಾಜ್ ವಂದಿಸಿದರು.

ಬೆಳೆ ನಷ್ಟ ಪರಿಹಾರಕ್ಕಾಗಿ ಧರಣಿ

ಬಳ್ಳಾರಿ:- ಜಿಲ್ಲೆಯ ಸಿರಗುಪ್ಪ ತಾಲೂಕು ಸಿಪಿಐ(ಎಂ) ತಾಲೂಕು ಸಮಿತಿ ನೇತೃತ್ವದಲ್ಲಿ ರೈತರ ಬೆಳೆ ನಷ್ಟಕ್ಕೆ ಪರಿಹಾರ, ಕೃಷಿ ಕೂಲಿಕಾರರ ಸಮಸ್ಯೆಗಳ ಈಡೇರಿಕೆ, ಕಾರ್ಮಿಕರ ಬೇಡಿಕೆಗಳನ್ನು ಪರಿಹರಿಸುವಂತೆ, ರೈತರು, ಕಾರ್ಮಿಕರು ಕೃಷಿ ಕೂಲಿಕಾರರು ಜನವರಿ ಒಂದರಂದು ಜಿಲ್ಲಾಧಿಕಾರಿ ಕಛೇರಿಮುಂದೆ ಧರಣಿ ನಡೆಸಿ, ಕೆಳಕಂಡ ಬೇಡಿಕೆಯ ಪಟ್ಟಿಯನ್ನೊಳಗೊಂಡ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು.

- ಸೂರ್ಯಕಾಂತಿ ಬೆಳೆ ನಷ್ಟಕ್ಕೆ ಪರಿಹಾರ ನೀಡಬೇಕು.
- ಪಡಿತರ ಚೀಟಿ ನೀಡಿ, ಜೀವನಾವಶ್ಯಕ ಪಡಿತರ ವಸ್ತುಗಳನ್ನು ಅರ್ಧ ಬೆಲೆಗೆ ನೀಡಬೇಕು.
- 60 ವರ್ಷ ತುಂಬಿದ ಕೃಷಿಕೂಲಿಕಾರರಿಗೆ ಮತ್ತು ಬಡ ರೈತರಿಗೆ ವಿಶ್ರಾಂತಿ ವೇತನ ಹಾಗೂ 30 ಸಾವಿರ ಪ್ರಾವಿಡೆಂಟ್ಸ್ ಫಂಡ್ ಕೊಡಬೇಕು.
- ಬಳ್ಳಾರಿಯಲ್ಲಿ ಕಾರ್ಮಿಕ ನ್ಯಾಯಾಲಯ ಖಾಯಂಗೊಳಿಸಬೇಕು. ರಾರಾವಿ ಗ್ರಾಮ ರೈತರಿಗೆ ಏತ ನೀರಾವರಿ ಸೌಲಭ್ಯ ಕಲ್ಪಿಸಬೇಕು. ಸಿರಗುಪ್ಪ- ಕೆಂಚನಹಳ್ಳಿ-ಕಂಪ್ಲಿಗೆ ಬಸ್ ಸೌಲಭ್ಯ ಕಲ್ಪಿಸಬೇಕು. ರೈತರ ಧಾನ್ಯ ಮಾರಾಟವನ್ನು ಎ.ಪಿ.ಎಮ್.ಸಿ ಮುಖಾಂತರ ನಡೆಸುವಂತೆ ಕ್ರಮಕೈಗೊಳ್ಳುವಂತೆ ಒತ್ತಾಯಿಸಲಾಗಿದೆ.

ಲೋಕಸಭಾ ಚುನಾವಣೆ : ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಆಗ್ರಹ

ಬೆಂಗಳೂರು ನಗರದಲ್ಲಿರುವ ಸಾರ್ವಜನಿಕ ಉದ್ದಿಮೆಗಳು, ಬ್ಯಾಂಕ್, ವಿಮೆ ಮತ್ತಿತರ ಹಣಕಾಸು ಸಂಸ್ಥೆಗಳ ಸುಮಾರು ಒಂದು ಲಕ್ಷವನ್ನೂ ಮೀರಿದ ಕಾರ್ಮಿಕರು ಮತ್ತು ಅಧಿಕಾರಿಗಳು **'ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಮತ್ತು ಅಧಿಕಾರಿಗಳ ವೇದಿಕೆ'** ಎಂಬ ಒಂದು ಸಮಾನ ವೇದಿಕೆಯನ್ನು ರಚಿಸಿಕೊಂಡಿದ್ದು

ಈಗ ನಮ್ಮ ದೇಶದ ಮುಂದಿರುವ ಸಾರ್ವತ್ರಿಕ ಚುನಾವಣೆಯ ಸಂದರ್ಭಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮುಂದೆಯೂ ಈ ಕೆಳಗಿನ ವಿಷಯಗಳ ಕುರಿತಂತೆ ಕಾರ್ಮಿಕರ ಅಭಿಪ್ರಾಯಗಳನ್ನು ಇಡಲು ವೇದಿಕೆ ತೀರ್ಮಾನಿಸಿದೆ. ಕಾರ್ಮಿಕರ ಬೇಡಿಕೆ ಪಟ್ಟಿಯು ಈ ಕೆಳಕಂಡ ಅಂಶಗಳನ್ನು ಒಳಗೊಂಡಿದೆ.

1.ಭಾರತದ ಆರ್ಥಿಕತೆಯಲ್ಲಿ ಕೇಂದ್ರೋದ್ಯಮಗಳು ಪ್ರಮುಖ ಪಾತ್ರ ವಹಿಸಬೇಕು.

2. ಕೇಂದ್ರೋದ್ಯಮಗಳ ಶೇರುಗಳನ್ನು ಮಾರಾಟ ಮಾಡಬಾರದು.

3. ರೋಗಗ್ರಸ್ತ ಸಾರ್ವಜನಿಕ ಉದ್ದಿಮೆಗಳನ್ನು ಪುನರುಜ್ಜೀವಗೊಳಿಸಲು ಸರ್ಕಾರವು ತನ್ನ ಬಜೆಟ್ಟಿನಿಂದ ಸಾಕಷ್ಟು ಹಣವನ್ನು ಮುಡಿಪಾಗಿಡಬೇಕು.

4. ಯಾವುದೇ ಕಾರಣಕ್ಕೂ ವಿಮಾ ಉದ್ದಿಮೆಯನ್ನು ತೆರೆಯುವ ಅಥವಾ ಖಾಸಗೀಕರಣಗೊಳಿಸುವ ಪ್ರಯತ್ನ ನಿಲ್ಲಬೇಕು.

5.ಈಗಿರುವ ಕೇಂದ್ರೋದ್ಯಮ ಹಣಕಾಸು ಸಂಸ್ಥೆಗಳಾದ ಬ್ಯಾಂಕ್, ವಿಮೆ ಮುಂತಾದವುಗಳ ಮೇಲೆ ಇರುವ ಸರ್ಕಾರದ ಹತೋಟಿ/ನಿಯಂತ್ರಣವನ್ನು ಯಾವುದೇ ಕಾರಣಕ್ಕೂ ಸಡಿಲಗೊಳಿಸಬಾರದು.

6.ಆಡಳಿತೆಯಲ್ಲಿ ಕಾರ್ಮಿಕರ ಭಾಗವಹಿಸುವಿಕೆ, ನಿಜವಾದ ಸಾಮೂಹಿಕ ಚೌಕಾಸಿ ಸೂತ್ರವನ್ನು ಜಾರಿಗೆ ತರುವುದು ಮತ್ತು ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವುದು ಮುಂತಾದ ಕ್ರಮಗಳ ಮೂಲಕ ಕೈಗಾರಿಕಾ ಬಾಂಧವ್ಯವನ್ನು ಪ್ರಜಾಪ್ರಭುತ್ವೀಕರಣಗೊಳಿಸಬೇಕು.

7. ರೋಗಗ್ರಸ್ಥವಾಗಿರುವ ಹಾಗೂ ಬಿ.ಐ.ಎಫ್.ಆರ್. ನ ವಿಚಾರಣೆಗೆ ಒಳಪಟ್ಟಿರುವ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರಿಗೆ 1.1.92 ರಿಂದ ಬಾಕಿ ಇರುವ ವೇತನ ಪರಿಷ್ಕರಣವನ್ನು ಜಾರಿ ಮಾಡಬೇಕು.

8. ಸಮಗ್ರ ಭೂಸುಧಾರಣೆಯನ್ನು ಜಾರಿಗೊಳಿಸಬೇಕು, ರೈತರಿಗೆ ಲಾಭದಾಯಕ ಬೆಳೆ ಬೆಲೆಯನ್ನು ನಿಗದಿ ಮಾಡಬೇಕು ಮತ್ತು ಕೃಷಿ ಕೂಲಿಕಾರರ ಹಕ್ಕುಗಳ ರಕ್ಷಣೆಗಾಗಿ ಸಮಗ್ರವಾದ ಕಾನೂನು ರೂಪಿಸಬೇಕು.

ಈ ಬೇಡಿಕೆ ಪಟ್ಟಿಯನ್ನು ಕರ್ನಾಟಕದ ರಾಜಕೀಯ ಪಕ್ಷಗಳ - ಕಾಂಗ್ರೆಸ್(ಐ), ಜನತಾದಳ, ಬಿಜೆಪಿ, ಸಿಪಿಐ(ಎಂ), ಸಿಪಿಐ, ಲೋಕಶಕ್ತಿ ಮತ್ತು ಕರ್ನಾಟಕ ವಿಕಾಸ ಪಕ್ಷಗಳ - ಧುರೀಣರಿಗೆ ಸಲ್ಲಿಸಲಾಗಿದೆ. ಈ ಕಾರ್ಮಿಕರ ಬೇಡಿಕೆ ಪಟ್ಟಿಯನ್ನು ಈ ಮೇಲಿನ ಪಕ್ಷಗಳ ರಾಷ್ಟ್ರೀಯ ನಾಯಕರುಗಳಿಗೂ ಕಳಿಸಲಾಗಿದೆ. ಯಾವ ಪಕ್ಷಗಳು ಈ ಮೇಲಿನ ಕಾರ್ಮಿಕರ ಬೇಡಿಕೆ ಪಟ್ಟಿಯನ್ನು ಪುರಸ್ಕರಿಸಿ ತಮ್ಮ ಪ್ರಣಾಳಿಕೆಯಲ್ಲಿ ಸೇರಿಸಿಕೊಂಡು ಅಧಿಕಾರಕ್ಕೆ ಬಂದರೆ ಜಾರಿ ಮಾಡುವುದಾಗಿ ಖಡಾಖಂಡಿತವಾದ ಬದ್ಧತೆಯನ್ನು ತೋರುತ್ತಾರೋ ಅಂತಹ ಪಕ್ಷಗಳನ್ನು ಮಾತ್ರ ಬೆಂಬಲಿಸಬೇಕೆಂದು ಸರ್ವಾನುಮತದ ತೀರ್ಮಾನ ಮಾಡಲಾಗಿದೆ ಎಂದು ವೇದಿಕೆ ತಿಳಿಸಿದೆ.

ಈ ಮೇಲಿನ ಬೇಡಿಕೆಗಳಿಗೆ ಬೆಂಬಲ ಗಳಿಸಲು ಈ ಬಾರಿಯ ಲೋಕಸಭಾ ಚುನಾವಣೆಯ ಅಭ್ಯರ್ಥಿಗಳನ್ನು ಭೇಟಿ ಮಾಡಲು, ಸಭೆ ಸಮಾವೇಶಗಳನ್ನು ಏರ್ಪಡಿಸಲು ವೇದಿಕೆಯು ನಿರ್ಧರಿಸಿದೆ. ಚುನಾವಣೆಯ ನಂತರ ಈ ಬೇಡಿಕೆಗಳ ಈಡೇರಿಕೆಗಾಗಿ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಮತ್ತು ಅಧಿಕಾರಿಗಳನ್ನು ಸಂಘಟಿಸಿ ಹೋರಾಟ ನಡೆಸಲು ವೇದಿಕೆ ಸಿದ್ಧತೆ ನಡೆಸಿದೆ.

ನೈಜ ಭೂಸುಧಾರಣೆಗಳ ಮೂಲಕ ಆಂತರಿಕ ಮಾರುಕಟ್ಟೆಯನ್ನು ವಿಸ್ತಾರಗೊಳಿಸಲು ಆರ್ಥಿಕ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಮತ್ತು ಸ್ವಾವಲಂಬೀ ಆರ್ಥಿಕ ಬೆಳವಣಿಗೆಗಾಗಿ ಈ ಬೇಡಿಕೆಗಳು ಬಹು ಮುಖ್ಯ. ಆದ್ದರಿಂದ ಈ ಬೇಡಿಕೆಗಳಿಗೆ ದೇಶದ ಸಮಸ್ತ ಜನಸಮುದಾಯವು ಬೆಂಬಲ ನೀಡಬೇಕೆಂದು ವೇದಿಕೆಯು ವಿನಂತಿಸಿದೆ.

ಹೊಸಕೋಟೆ: ಸಂಗಾತಿ ಇ.ಕೆ.ನಯನಾರ್ ಹಾಗೂ ಸಂಗಾತಿಗಳಿಗೆ ಹೃದಯಸ್ಪರ್ಶಿ ಸ್ವಾಗತ

ಪಕ್ಷದ 16ನೇ ರಾಜ್ಯ ಸಮ್ಮೇಳನದ ಬೃಹತ್ ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ಕೋಲಾರಕ್ಕೆ ತೆರಳುತ್ತಿದ್ದ ಕೇರಳದ ಮುಖ್ಯಮಂತ್ರಿ ಇ.ಕೆ. ನಯನಾರ್ ಮತ್ತು ಪಕ್ಷದ ಪಿ.ಬಿ. ಸದಸ್ಯರಾದ ಕಾಂ. ಪಿ. ರಾಮಚಂದ್ರನ್, ಕಾಂ. ಇ. ಬಾಲಾನಂದನ್ (ಸಿಐಟಿಯು ಅ.ಭಾ.ಅಧ್ಯಕ್ಷರು) ರಾಜ್ಯ ಕಾರ್ಯದರ್ಶಿ ಕಾಂ.ಪಿ.ರಾಮಚಂದ್ರರಾವ್, ಕಾಂ. ಸೂರಿ. ಕಾಂ. ಜಿ.ಎನ್.ನಾಗರಾಜ್, ಕಾಂ.ಎನ್.ಕೆ. ಮುಂತಾದವರಿಗೆ ಹೊಸಕೋಟೆಯ ಪಕ್ಷದ ಸಂಗಾತಿಗಳು, ಹಿತೈಷಿಗಳು, ಭಾವಪೂರ್ವಕವಾಗಿ ಸ್ವಾಗತಿಸಿದರು. ಹೊಸಕೋಟೆ ನ್ಯಾಯಾಲಯದ ಬಳಿ ಹೂಹಾರಗಳೊಂದಿಗೆ ವಕೀಲರು, ಇ.ಕೆ. ನಯನಾರ್‌ರವರನ್ನೂ ಸ್ವಾಗತಿಸಿದರು. ಅವರೊಂದಿಗೆ ಸೇರಿಕೊಂಡ ರೈತರು, ಕಾರ್ಮಿಕರು, ಕೂಲಿಕಾರರು, ವಿದ್ಯಾರ್ಥಿ-ಯುವಜನರು ಘೋಷಣೆ ಕೂಗುತ್ತಾ ಮುಖ್ಯಬೀದಿಗಳಲ್ಲಿ ಮೆರವಣಿಗೆ ನಡೆದು ನಂತರ ಸ್ವಾಗತ ಸಭೆ ನಡೆಯಿತು. ಸಭೆಯಲ್ಲಿ ಕಾಂ.ನಯನಾರ್, ಕಾಂ.ಸೂರಿ, ಮಾತನಾಡಿದರು. ಪುರಸಭೆಯ ಅಧ್ಯಕ್ಷರಾದ ಚಿತ್ತೇಗಾರ ಹಾಗೂ ಪುರಸಭಾ ಸದಸ್ಯರು, ಪತ್ರಕರ್ತರ ಸಂಘ, ಮಹಿಳಾ ಮಂಡಲ, ವಕೀಲರ ಸಂಘ, ಎಸ್.ಎಫ್.ಐ, ಡಿ.ವೈ.ಎಫ್.ಐ, ರೈತಸಂಘ, ಅಂಗನವಾಡಿ ಕಾರ್ಯಕರ್ತೆಯರ ಸಂಘ, ಅಲ್ಲದೇ ಹಲವಾರು ವೈಯುಕ್ತಿಕವಾಗಿ ಹೂಹಾರ ಹಾಕಿ ಎಲ್ಲರನ್ನು ಸ್ವಾಗತಿಸಿದರು. ಸಭೆಯಲ್ಲಿ ಸುಮಾರು 700 ಕ್ಕೂ ಅಧಿಕ ಜನತೆ ಪಾಲ್ಗೊಂಡು ಯಶಸ್ವಿಗೊಳಿಸಿದರು.

ವಕೀಲರಾದ ಕಾಂ. ಹರೀಂದ್ರರಾವ್ ರವರು ಅಧ್ಯಕ್ಷತೆ ವಹಿಸಿದ್ದರು. ಕಾಂ. ಎಸ್.ವೈ.ಗುರುಶಾಂತ್ ಸ್ವಾಗತಿಸಿದರು. ಕಾಂ. ಮನೋಹರ್ ವಂದಿಸಿದರು. ಸ್ವಾಗತಕ್ಕಾಗಿ ಬ್ಯಾನರ್‌ಗಳು, ಧ್ವಜ, ತೋರಣಗಳಿಂದ ಅಲಂಕರಿಸಲಾಗಿತ್ತು.

ಬಿಜೆಪಿ ವಿರುದ್ಧ ಮಠಾಧಿಪತಿಗಳ ವೇದಿಕೆ

ಹುಬ್ಬಳ್ಳಿ: ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ದೊರೆತ 50 ನೆಯ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿಯೇ ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾದ ಅಪಾಯಕಾರಿ ಪರಿಸ್ಥಿತಿ ಈ ದೇಶದಲ್ಲೀಗ ಉದ್ಭವಿಸಿದ್ದು, ಇದನ್ನು ತಪ್ಪಿಸಲೋಸುಗ ಜಾತ್ಯಾತೀತ, ಪ್ರಜಾಸತ್ತಾತ್ಮಕ ಹಾಗೂ ಪ್ರಗತಿಪರ ವಿಚಾರಧಾರೆಯ ಮಠ-ಪೀಠಾಧಿಪತಿಗಳ ವೇದಿಕೆ ಯೊಂದು ಸಧ್ಯದಲ್ಲಿಯೇ ಅಸ್ತಿತ್ವಕ್ಕೆ ಬರಲಿದೆ ಯೆಂದು ನೀಲಗುಂದ ಶ್ರೀ ವೀರ ಮಹಂತೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ತಿಳಿಸಿದ್ದಾರೆ.

ಸಧ್ಯದಲ್ಲಿಯೇ ಲೋಕಸಭೆಗೆ ನಡೆಯಲಿರುವ ಚುನಾವಣೆಯು ಕೇವಲ ಯಾವುದಾದರೂ ಒಂದು ಪಕ್ಷವನ್ನು ಚುನಾಯಿಸಬೇಕಾದ ಸೀಮಿತ ಉದ್ದೇಶದಿಂದ ಕೂಡಿರದೇ, ಈ ದೇಶದ ಬಹುಮುಖ ಸಾಂಸ್ಕೃತಿಕ ಲಕ್ಷಣಗಳ ಅಳಿವು ಉಳಿವುಗಳ ಪ್ರಶ್ನೆಗೆ ಉತ್ತರ ಕಂಡು ಕೊಳ್ಳುವುದಾಗಿದೆ. ಈ ವಿವಿಧತೆಯಲ್ಲಿಯೂ ಏಕತೆಯನ್ನು ಕಾಯ್ದುಕೊಳ್ಳುವ ಗಂಭೀರ ಜವಾಬ್ದಾರಿಯನ್ನು ಹೊರುವುದಕ್ಕಾಗಿಯೇ ಈ ಮಠಾಧಿಪತಿಗಳ ವೇದಿಕೆ ರೂಪುಗೊಳ್ಳಲಿದೆಯೆಂದು ಅವರು ತಿಳಿಸಿದ್ದಾರೆ.

ಈ ಸಲದ ಚುನಾವಣೆಯಲ್ಲಿ ನಾವು ಯಾವ ಪಕ್ಷವನ್ನು ಆರಿಸಿ ಕಳಿಸಬೇಕಾಗಿದೆ ಎಂಬ ಸಮಸ್ಯೆಗಿಂತಲೂ ಯಾವ ಪಕ್ಷವನ್ನು ಆರಿಸಿ ಕಳಿಸಬಾರದೆಂಬುದೇ ಪ್ರಮುಖ ವಿಷಯವಾಗಿದ್ದು, ಇದರಂಗವಾಗಿ ಬಿ.ಜೆ.ಪಿ.ಯು ಅಧಿಕಾರಕ್ಕೆ ಬರುವುದನ್ನು ಶತಾಯ-ಗತಾಯ ತಪ್ಪಿಸುವುದೇ ಈ ಮಠಾಧಿಪತಿಗಳ ವೇದಿಕೆಯ ಮುಖ್ಯ ಗುರಿಯಾಗಿದೆ ಯೆಂದು ಸ್ವಾಮಿಗಳು ವಿವರಿಸಿದ್ದಾರೆ.

ಇದುವರೆಗೂ ತಾನು ಅತ್ಯಂತ ಪರಿಶುದ್ಧ ಧರ್ಮ- ನ್ಯಾಯ-ನೀತಿಗಳ ತಳಹದಿಯುಳ್ಳ ಶ್ರೇಷ್ಠ ಸಾಂಸ್ಕೃತಿಕ ಪರಂಪರೆ ಇರುವ ಪಕ್ಷವೆಂದು 'ಫೋಜು' ಕೊಡುತ್ತಿದ್ದ ಬಿ.ಜೆ.ಪಿ.ಯು ಉತ್ತರ ಪ್ರದೇಶದಲ್ಲಿ ಹೇಗಾದರೂ ಅಧಿಕಾರ ಪಡೆಯುವ ಹುನ್ನಾರದಿಂದ, ಭಾರತದ ಇತಿಹಾಸದಲ್ಲಿಯೇ ಹಿಂದೆಂದೂ ಕೇಳರಿಯದಂತಹ ಕೆಳಮಟ್ಟಕ್ಕಿಳಿದು ಅಧಿಕಾರವನ್ನು ಸುಭದ್ರಪಡಿಸಿಕೊಂಡಾಗಿನಿಂದ ಬಿ.ಜೆ.ಪಿ.ಯ ಬಗೆಗೆ ಎಲ್ಲ ಮಠಾಧೀಶರ ಭ್ರಮೆ ಹರಿದು ಹೋಗಿದೆಯೆಂದೂ ಸ್ವಾಮೀಜಿ ಬಹಿರಂಗ ಪಡಿಸಿದ್ದಾರೆ.

ಬಿ.ಜೆ.ಪಿ.ಯ ಇತ್ತೀಚಿನ ನೂತನ ಅವತಾರದಿಂದಾಗಿ, ಇಲ್ಲಿಯವರೆಗೆ ಈ ಪಕ್ಷವನ್ನು ಬೆಂಬಲಿಸುತ್ತ ಬಂದಿದ್ದ ಎಲ್ಲ ಧರ್ಮ, ಜಾತಿ-ಪಂಗಡಗಳಿಗೆ ಸೇರಿದ ಮಠಾಧೀಶ್ವರರಿಗೆ ತೀರಾ ಮುಖಭಂಗವಾಗಿದ್ದು, ಅವರೆಲ್ಲ ಈಗಾಗಲೇ ಬಿ.ಜೆ.ಪಿ.ಯಿಂದ ವಿಮುಖಗೊಂಡಿದ್ದಾರೆ. ಇವರಾರೂ ಈ ಸಲದ ಚುನಾವಣೆಯಲ್ಲಿ ಬಿ.ಜೆ.ಪಿ.ಪರವಾಗಿ ಬಹಿರಂಗವಾಗಿಯಂತೂ ಸಾಧ್ಯವೇ ಇಲ್ಲ. ಆಂತರಿಕವಾಗಿಯೂ ಪ್ರಚಾರ ಕೈಗೊಳ್ಳದಿರಲು ನಿರ್ಧರಿಸಿದ್ದಾರೆ. ಬಿ.ಜೆ.ಪಿ.ಗೆ ಬೇರೆ ಬೇರೆ ಪಕ್ಷಗಳಿಂದ ಪಕ್ಷಾಂತರದ ಮಹಾಪೂರವೇ ಹರಿದು ಬಂದಿರಬಹುದು. ಆದರೆ, ಈ ಮಹಾಪೂರದಿಂದಾಗಿಯೇ ಈ ಪಕ್ಷ ಹೊಲಸೆದ್ದು ಹೋಗಿದೆ, ಅಪವಿತ್ರಗೊಂಡಿದೆ, ತಿರಸ್ಕೃತಗೊಂಡಿದೆ ಎಂದು ಶಿವಾಚಾರ್ಯ ಸ್ವಾಮಿಗಳು ಹೇಳಿದ್ದಾರೆ.

ಬಿಜೆಪಿಗೆ ಮತ ಎಂದರೆ ಸಮಾನತೆಯ ವಿರುದ್ಧ ಮತ

ಒಟ್ಟಾರೆಯಾಗಿ ಸಂಯುಕ್ತರಂಗಕ್ಕೆ ಬೆಂಬಲ ನೀಡಿರುವ ಎ.ಐ.ಡಿ.ಡಬ್ಲ್ಯು.ಎ. ತನ್ನ ಸದಸ್ಯರು ಮಹಿಳೆಯರ ವಿರುದ್ಧ ಅಪರಾಧದ ಆಪಾದನೆಗೆ ಗುರಿಯಾಗಿರುವವರ ಪರವಾಗಿ ಕೆಲಸಮಾಡುವುದಿಲ್ಲ, ಅಥವಾ ಮಹಿಳಾ ಮೀಸಲಾತಿಯ ಮಸೂದೆಯನ್ನು ವಿರೋಧಿಸಿರುವವರು ತಮ್ಮ ವಿರೋಧವನ್ನು ಸಾರ್ವಜನಿಕವಾಗಿ ಹಿಂತೆಗೆದುಕೊಳ್ಳದೆ ಇದ್ದರೆ ಅವರ ಪರವಾಗಿಯೂ ಕೆಲಸ ಮಾಡುವುದಿಲ್ಲ ಎಂದು ಸ್ಪಷ್ಟ ಪಡಿಸಿದೆ.

ಮಹಿಳೆಯರ ಮತಗಳು ಮಾರಾಟಕ್ಕಿಲ್ಲ, ಎಂದು ವಿವಿಧ ರಾಜ್ಯಗಳಲ್ಲಿ 51 ಲಕ್ಷ ಸದಸ್ಯತ್ವ ಹೊಂದಿರುವ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (ಎ.ಐ.ಡಿ.ಡಬ್ಲ್ಯು.ಎ.) ಘೋಷಿಸುತ್ತಾ ಮಹಿಳೆಯರ ವಿರುದ್ಧ ಅಪರಾಧಗಳ ಆರೋಪವಿರುವ ಅಭ್ಯರ್ಥಿಗಳಿಗೆ, ಅವರು ಯಾವ ಪಕ್ಷದವರೇ ಆಗಲಿ ಮತ ನೀಡಬಾರದು ಎಂದು ಭಾರತದ ಜನತೆಯನ್ನು ವಿನಂತಿಸಿಕೊಂಡಿದೆ. ಕೋಮುವಾದಿ ಮತ್ತು ಭ್ರಷ್ಟ ಅಭ್ಯರ್ಥಿಗಳನ್ನು ದೂರವಿಟ್ಟು ಸಂಯುಕ್ತ ರಂಗಕ್ಕೆ ಮತ ನೀಡಬೇಕು, ಮಹಿಳೆಯರ ಹಕ್ಕುಗಳನ್ನು ಸದಾ ಪ್ರತಿಪಾದಿಸುವ ಎಡ ಪಕ್ಷಗಳ ಪ್ರಾತಿನಿಧ್ಯ ಲೋಕ ಸಭೆಯಲ್ಲಿ ಹೆಚ್ಚುವಂತೆ ಮಾಡಬೇಕು ಎಂದು ಎ.ಐ.ಡಿ.ಡಬ್ಲ್ಯು.ಎ. ಜನರಿಗೆ ಮನವಿ ಮಾಡಿದೆ.

ಜನವರಿ 18-19 ರಂದು ದಿಲ್ಲಿಯಲ್ಲಿ ಎ.ಐ.ಡಿ.ಡಬ್ಲ್ಯು.ಎ.ನ ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆಯ ನಂತರ ಅದು ಈ ಕರೆಯನ್ನು ನೀಡಿದೆ. ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅಧಿಕಾರಕ್ಕಾಗಿ ಸ್ಪರ್ಧಿಸುತ್ತಿರುವ ಮೂರು ಗುಂಪುಗಳ ದಾಖಲೆಯ ಆಧಾರದಲ್ಲಿ ಸ್ವತಂತ್ರವಾಗಿ ಮತನೀಡಿ ಎಂದು ಈ ಸಭೆ ಅಂಗೀಕರಿಸಿದ ಒಂದು ನಿರ್ಣಯ ಮಹಿಳೆಯರನ್ನು ಆಗ್ರಹ ಪಡಿಸಿದೆ.

ರಾಜಕೀಯ ಮುಖಂಡರು ತಮ್ಮ ಭಾಷಣಗಳಲ್ಲಿ ಮಹಿಳಾ ಅಭ್ಯರ್ಥಿಗಳ ವಿರುದ್ಧ ಲೈಂಗಿಕ ಟಿಪ್ಪಣಿಗಳನ್ನು ಮಾಡುವುದನ್ನು ಅಥವಾ ಮಹಿಳಾ ವಿರೋಧಿ ಟೀಕೆಗಳನ್ನು ಮಾಡುವುದನ್ನು ತಡೆಯುವ ಒಂದು ಕಲಮನ್ನು ನೀತಿ ಸಂಹಿತೆಯಲ್ಲಿ ಸೇರಿಸಬೇಕು ಎಂದು ಆ ನಿರ್ಣಯ ಚುನಾವಣಾ ಆಯೋಗವನ್ನು ಕೇಳಿದೆ.

ಮಹಿಳೆಯರಿಗೆ ಮೀಸಲಾತಿ ಮತ್ತಿತರ ಮಹಿಳಾ ಆಂದೋಲನ ಎತ್ತಿದ ಪ್ರಶ್ನೆಗಳ ಬಗ್ಗೆಯಾಗಲೀ, ವಿವಿಧ ಆರ್ಥಿಕ ಹಾಗೂ ಸಾಮಾಜಿಕ ಒತ್ತಾಯ ಗಳ ಬಗ್ಗೆಯಾಗಲೀ ಸ್ಪಷ್ಟವಾದ, ಯಾವುದೇ ಸಂದಿಗ್ಧತೆಯಿಲ್ಲದ ನಿಲುವು ತಗೊಳ್ಳುತ್ತಿರುವುದು ಎಡಪಕ್ಷಗಳು ಮಾತ್ರ ಎಂದಿರುವ ಈ ನಿರ್ಣಯ ಸಂಸತ್ತಿನಲ್ಲಿ ಎಡಪಕ್ಷಗಳ ಪ್ರಾತಿನಿಧ್ಯ ವನ್ನು ಹೆಚ್ಚಿಸಲು ಎಡ ಅಭ್ಯರ್ಥಿಗಳ ಯಶಸ್ಸಿಗೆ ಸಕ್ರಿಯವಾಗಿ ದುಡಿಯಬೇಕು ಎಂದು ಮಹಿಳೆಯರಿಗೆ ಹೇಳಿದೆ. ಒಟ್ಟಾರೆಯಾಗಿ ಸಂಯುಕ್ತರಂಗಕ್ಕೆ ಬೆಂಬಲ ನೀಡಿರುವ ಎ.ಐ.ಡಿ.ಡಬ್ಲ್ಯು. ಎ. ತನ್ನ ಸದಸ್ಯರು ಮಹಿಳೆಯರ ವಿರುದ್ಧ ಅಪರಾಧದ ಆಪಾದನೆಗೆ ಗುರಿಯಾಗಿರುವವರ ಪರವಾಗಿ ಕೆಲಸಮಾಡುವುದಿಲ್ಲ, ಅಥವಾ ಮಹಿಳಾ ಮೀಸಲಾತಿಯ ಮಸೂದೆಯನ್ನು ವಿರೋಧಿಸಿರುವವರು ತಮ್ಮ ವಿರೋಧವನ್ನು ಸಾರ್ವಜನಿಕವಾಗಿ ಹಿಂತೆಗೆದುಕೊಳ್ಳದೆ ಇದ್ದರೆ ಅವರ ಪರವಾಗಿಯೂ ಕೆಲಸ ಮಾಡುವುದಿಲ್ಲ ಎಂದು ಸ್ಪಷ್ಟ ಪಡಿಸಿದೆ.

ಎ.ಐ.ಡಿ.ಡಬ್ಲ್ಯು.ಎ. ಮಹಿಳೆಯರ ಪ್ರಶ್ನೆಗಳತ್ತ ಚುನಾವಣೆಗಳಲ್ಲಿ ಗಮನ ಸೆಳೆಯಲು ತನ್ನ ಸದಸ್ಯರು ದೇಶಾದ್ಯಂತ ಚುನಾವಣಾ ಪ್ರಚಾರ ಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ನಿರ್ಧರಿಸಿದೆ. ಹಲವು ಕೇಂದ್ರಗಳಲ್ಲಿ ಮಹಿಳಾ ಹಕ್ಕುಗಳ ಯಾತ್ರೆಗಳನ್ನು ಸಂಘಟಿಸಲಾಗುವುದು. ಇತ್ತೀಚೆಗೆ ಕೆಲವು ಮಹಿಳಾ ಸಂಘಟನೆ ಗಳು ರಾಜಕೀಯ ಪಕ್ಷಗಳಿಗೆ ಮನವಿಯ ರೂಪದಲ್ಲಿ ತಯಾರಿಸಿದ ಆಗ್ರಹ ಪತ್ರ (ಚಾರ್ಟರ್)ವನ್ನು ಜನಜನಿತಗೊಳಿ ಸಲು ಎ.ಐ.ಡಿ.ಡಬ್ಲ್ಯು.ಎ ತಂಡಗಳು ಮನೆ ಮನೆಗೆ ಹೋಗಲಿವೆ. ಈ ಪ್ರಚಾರ ಪ್ರಕ್ಷೋಭೆ ವಿಶೇಷವಾಗಿ ತಾನು ಮಹಿಳಾ ಹಕ್ಕುಗಳ ಬೆಂಬಲಿಗ ಪಕ್ಷ ಎಂಬ ಹೊಸ ಅವತಾರ ತಾಳಿರುವ ಬಿಜೆಪಿ ವೇದಿಕೆಯ ಸಂಪೂರ್ಣ ಗೋಸುಂಬೆತನವನ್ನು ಬಯಲಿಗೆಳೆ ಯುವುದರ ಮೇಲೆ ಗಮನ ಕೇಂದ್ರೀಕರಿಸಲಿದೆ. ಸೀತೆ ಅಥವಾ ಏಕಲವ್ಯರುಗಳಿಗೆ ಯಾವುದೇ ಸ್ಥಾನವಿಲ್ಲದ ಬಿಜೆಪಿಯ ರಾಜ್ಯ ಸರಕಾರಗಳ 'ರಾಮ ರಾಜ್ಯ' ದ ದಾಖಲೆಗಳನ್ನು ವಿವರಿಸಲಾಗುವುದು, ಸ್ವಭಾವತಃ ಮಹಿಳಾ ವಿರೋಧಿಯಾದ ಹಾಗೂ ಬಡವರ ವಿರೋಧಿ ನಿಲುವಿನ ಆರ್‌ಎಸ್‌ಎಸ್ ಒಡ್ಡಿರುವ ಅಪಾಯ ಗಳನ್ನು ಎತ್ತಿ ತೋರಿಸಲಾಗುವುದು ಎಂದಿರುವ ಎ.ಐ.ಡಿ.ಡಬ್ಲ್ಯು.ಎ ನಿರ್ಣಯ ಬಿಜೆಪಿಗೆ ನೀಡುವ ಒಂದು ಮತ ಮಹಿಳಾ ಸಮಾನತೆಗಾಗಿ ಹೋರಾಟದ ವಿರುದ್ಧ ನೀಡುವ ಒಂದು ಮತ ಎಂದು ಘೋಷಿಸಿದೆ.

ಶ್ರೀಮತಿ ಜಯಲಲಿತಾ, ಶ್ರೀಮತಿ ಮಮತಾ ಬ್ಯಾನರ್ಜಿ ಮತ್ತು ಶ್ರೀಮತಿ ಲಕ್ಷ್ಮಿ ಪಾರ್ವತಿಯವರಂತಹ ಪ್ರಮುಖ ಮುಖಂಡರು ಅತ್ಯಂತ ಪಿತೃ ಪ್ರಧಾನ ಮೌಲ್ಯ ಪರಿಸ್ಥಿತಿ ಹೊಂದಿರುವ ಬಿಜೆಪಿಯೊಂದಿಗೆ ಸಮಯಸಾಧಕತನ ದಿಂದ ಕೈಮಿಲಾಯಿಸಿ ಮಹಿಳೆಯರ ಹಿತಾಸಕ್ತಿಗಳಿಗೆ ವಿಶ್ವಾಸಘಾತ ಬಗೆದಿದ್ದಾರೆ ಎಂದು ಎ.ಐ.ಡಿ.ಡಬ್ಲ್ಯು.ಎ.ನ ಕೇಂದ್ರ ಕಾರ್ಯಕಾರಿ ಸಮಿತಿ ಖಂಡಿಸಿದೆ.

ಕಾಂಗ್ರೆಸ್(ಐ) 1996 ರ ಚುನಾವಣೆ ಗಳಲ್ಲಿ ತನ್ನ ಶೋಚನೀಯ ಪರಾಭವಕ್ಕೆ ಕಾರಣವಾದ ಶ್ರೀಮಂತರ ಪರವಾದ ಧೋರಣೆಗಳನ್ನು ಬಿಟ್ಟಿಲ್ಲ, ಕೋಮು ವಾದಿ ಮತ್ತಿತರ ವಿಭಾಜಕ ಶಕ್ತಿ ಗಳೊಂದಿಗೆ ಅಸಹ್ಯ ರಾಜಿಗಳ ಬಗ್ಗೆ ಖೇದ ವ್ಯಕ್ತಪಡಿಸುವಂತೆಯೂ ಕಾಣುತ್ತಿಲ್ಲ ಮತ್ತು ಅದು ಈಗಲೂ ಭ್ರಷ್ಟಾಚಾರಿಗಳ ಆಶ್ರಯತಾಣವಾಗಿದೆ. ಎ.ಐ.ಡಿ.ಡಬ್ಲ್ಯು.ಎ ಮಹಿಳೆಯರ ನಡುವೆ ಮಾಡುವ ಪ್ರಚಾರದಲ್ಲಿ ಶ್ರೀಮತಿ ಸೋನಿಯಾಗಾಂಧಿ ಪ್ರತಿನಿಧಿ ಸುವ ಧೋರಣೆಗಳು ಮತ್ತು ಬೊಫೋರ್ಸ್ ಹಗರಣದಲ್ಲಿ ಅವರ ಕುಟುಂಬ ಒಳಗೊಂಡಿರುವ ರೀತಿಯ ಮೇಲೆ ಗಮನ ಕೇಂದ್ರೀಕರಿಸುತ್ತದೆ. ಕಾಂಗ್ರೆಸ್‌ನ್ನು ತಾನು ವಿರೋಧಿಸುವುದು ಅದರ ನೀತಿಗಳಿಗಾಗಿಯೇ ಹೊರತು ಶ್ರೀಮತಿ ಸೋನಿಯಾ ಗಾಂಧಿ ವಿದೇಶ ದಲ್ಲಿ ಹುಟ್ಟಿದವರು ಎಂಬ ಕಾರಣಕ್ಕಾಗಿ ಅಲ್ಲ ಎಂದು ಎ.ಐ.ಡಿ.ಡಬ್ಲ್ಯು.ಎ. ಸ್ಪಷ್ಟಪಡಿಸಿದೆ.

ಕೆಲವು ಗುಂಪುಗಳು ಮಹಿಳಾ ಅಭ್ಯರ್ಥಿಗಳಿಗೆ ಒಂದು ರಾಷ್ಟ್ರೀಯ ನಿಧಿಗಾಗಿ ನೀಡಿರುವ ಕರೆಯನ್ನು ಕೂಡ ವಿರೋಧಿಸುವುದಾಗಿ ಎ.ಐ.ಡಿ. ಡಬ್ಲ್ಯು.ಎ. ಹೇಳಿದೆ. ಮುಂಬರುವ ಚುನಾವಣೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸುವ ಏಕಮಾತ್ರ ಪ್ರಶ್ನೆಯಿರುವ ಚುನಾವಣೆಯಲ್ಲ, ಮಹಿಳೆಯರಿಗೆ ಸ್ಥಾನಗಳ ಮೀಸಲಾತಿ ಕೇಳುವುದು ಬೇರೆ ವಿಷಯ. ಆದರೆ ಒಮ್ಮೆ ಚುನಾವಣೆಯ ಪ್ರಕಟಣೆ ಬಂತೆಂದರೆ ಮಹಿಳೆಯರು ಯಾವುದೇ ಅಭ್ಯರ್ಥಿಯನ್ನು ಬೆಂಬಲಿಸಬೇಕಾದ್ದು ಆತ ಅಥವಾ ಆಕೆ ಪ್ರತಿನಿಧಿಸುವ ವೇದಿಕೆಯ ಧೋರಣೆಗಳ ಆಧಾರದ ಮೇಲೆಯೇ ಹೊರತು ಅಭ್ಯರ್ಥಿ ಪುರುಷನೋ, ಮಹಿಳೆಯೊ ಎಂಬ ಆಧಾರದ ಮೇಲಲ್ಲ ಎಂದು ಎ.ಐ.ಡಿ.ಡಬ್ಲ್ಯು.ಎ ಸ್ಪಷ್ಟಪಡಿಸಿದೆ.

(ಐ.ಎನ್. ಎಸ್.)

ಲೋಕಸಭಾ ಚುನಾವಣೆ ರಾಜಕೀಯ ಪಕ್ಷಗಳಿಗೆ ಮಹಿಳೆಯರ ಪ್ರಶ್ನೆ

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಪಕ್ಷಗಳು ಹಾಗೂ ಅಭ್ಯರ್ಥಿಗಳಿಂದ ಜನವಾದಿ ಮಹಿಳಾ ಸಂಘಟನೆ, ಸಂಯುಕ್ತ ಮಹಿಳಾ ಸಂಘಟನೆ, ಸುಮಂಗಲಿ ಸೇವಾಶ್ರಮ, ಮಹಿಳಾ ದಕ್ಷತಾ ಸಮಿತಿ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ ಹಾಗೂ ವೈ.ಡಬ್ಲ್ಯು.ಸಿ ಹಾಗೂ ಅಖಿಲ ಭಾರತ ಮಹಿಳಾ ಕಾನ್‌ಫರನ್ಸ್ ಮಹಿಳಾ ಸಂಘಟನೆಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ತಾವು ಬಯಸುವುದಾಗಿ ಹೇಳಿದೆ.

1. ಅ) ಮಹಿಳಾ ಮೀಸಲಾತಿ ಮಸೂದೆಯು ಜಾರಿ 12 ನೇ ಲೋಕಸಭೆಯ ಮೊದಲ ಅಧಿವೇಶನದಲ್ಲಿ ಅಧ್ಯತೆ ಪಡೆಯುವಂತೆ ಮಾಡಬೇಕೆನ್ನುವುದು ನಮ್ಮ ಆಗ್ರಹ- ನೀವು ಅದಕ್ಕೆ ಬದ್ಧರಾಗಿ ನಡೆದುಕೊಳ್ಳುವಿರೇ?

ಆ) ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿರುವ " ಮಹಿಳಾ ಮೀಸಲಾತಿ ಶಾಸನ" ದ ಜಾರಿಗೆ ಬದ್ಧರಾಗಿ ನಿಮ್ಮ ಪಕ್ಷದ ಸಂಸದರು ನಡೆದುಕೊಳ್ಳುವಂತೆ ಕ್ರಮವಹಿಸುವಿರೇ? ಪ್ರಥಮ ಅಧಿವೇಶನದಲ್ಲಿ ಈ ಮಸೂದೆಯ ಜಾರಿಯ ವಚನಕ್ಕೆ ನಿಮ್ಮ ಪಕ್ಷ ಬದ್ಧವೇ?

2. ಮಹಿಳಾ ಮೀಸಲಾತಿ ಮಸೂದೆ ಮಹಿಳೆಯರಿಗೆ ರಾಜಕೀಯ ಅಧಿಕಾರ ನೀಡುವಂತೆ, ದೇಶದುದ್ದಗಲಕ್ಕೂ ಇರುವ 30 ಮಿಲಿಯಕ್ಕಿಂತಲೂ ಹೆಚ್ಚಿರುವ ಮಹಿಳೆಯರ ಬದುಕಿನ ಭದ್ರತೆಗೆ ಆಧಾರವಾಗಬಲ್ಲ ಕೃಷಿ ಕೂಲಿಕಾರ ಮಸೂದೆಯ ಕುರಿತು ನಾವು ನಿಮ್ಮಿಂದ ಸ್ಪಷ್ಟ ಉತ್ತರಗಳನ್ನು ಬಯಸುತ್ತೇವೆ. ಕೃಷಿಯೇ ಪ್ರಧಾನವಾದ ನಮ್ಮ ದೇಶದಲ್ಲಿ ಸ್ವಾತಂತ್ರ್ಯದ 50 ನೇ ವರ್ಷವನ್ನು ಆಚರಿಸುತ್ತಿರುವ ಸಂದರ್ಭದಲ್ಲಿಯೂ ಕೃಷಿ ಕೂಲಿಕಾರರ ಬದುಕಿನ ಕುರಿತು ನಿರ್ದಿಷ್ಟ ಹೆಜ್ಜೆಗಳನ್ನಿಡದಿರುವುದು ವಿಪರ್ಯಾಸ. ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಕೂಡ ಶಿಫಾರಸು ಮಾಡಿರುವಂತೆ ಈ ವರ್ಗದ ಜನರಿಗೆ ರಕ್ಷಣಾತ್ಮಕ ಕಾನೂನುಗಳನ್ನು ಜಾರಿಗೆ ತರಲು ನಿಮ್ಮ ಪಕ್ಷ ಮತ್ತು ಸಂಸದರು ಬದ್ಧರಾಗಬೇಕು.

3. ಮುಂಬರುವ ಚುನಾವಣೆಯನ್ನು ಪುರುಷ ಮತ್ತು ಮಹಿಳೆಯರ ಮಧ್ಯದ ಅಸಮಾನತೆಯನ್ನು ಹೋಗಲಾಡಿಸುವ ನಮ್ಮ ಹೋರಾಟದ ಒಂದು ಭಾಗವಾಗಿ ನಾವು ನೋಡುತ್ತೇವೆ ಮತ್ತು ರಾಜಕೀಯ ಪಕ್ಷಗಳಲ್ಲಿ ಈಗಿರುವ "ಮಹಿಳೆಯರ ಸಮಸ್ಯೆಗಳು ಮಹಿಳೆಯರಿಗೆ ಸೇರಿದ್ದು" ಎಂಬ ಧೋರಣೆಯನ್ನು ಬದಲಾಯಿಸಿಕೊಂಡು ಮಹಿಳೆಯರ ಸಮಸ್ಯೆಗಳು ದೇಶದ ಇತರ ಸಮಸ್ಯೆಗಳಷ್ಟೇ ಪ್ರಮುಖವಾದುದೆಂದು ಪರಿಗಣಿಸಿ ಒಟ್ಟಾರೆ ಪರಿಹಾರ ಹುಡುಕುವತ್ತ ಗಂಭೀರ ಪ್ರಯತ್ನಗಳಾಗಬೇಕು.

ಮುಖವಾಡ ಕಳಚಿ ಬಿತ್ತು!

ಸಿಪಿಐ(ಎಂ)ನ ಕೇಂದ್ರ ಸಮಿತಿ ಪತ್ರಿಕೆ

'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ಸಂಪಾದಕೀಯ

ಚುನಾವಣೆ ಸಮೀಪಿಸಲಾರಂಭಿಸಿದಂತೆ ಬಿಜೆಪಿಯ 'ಮುಖೌಟಾ' (ಮುಖವಾಡ) ಕಳಚಿಬೀಳುತ್ತಿದೆ- ತನ್ನ ದುಷ್ಟ ಮುಖ ತೋರುತ್ತಿದೆ. ಬಿಜೆಪಿಯ ನಿಜಮುಖವನ್ನು ತೋರುತ್ತಿರುವವರು ಬೇರಾರೂ ಅಲ್ಲ, ಸ್ವತಃ ಶ್ರೀವಾಜಪೇಯಿಯವರೆ! ಬಿ.ಜೆ.ಪಿ ಇಂಟರ್‌ನೆಟ್‌ನಲ್ಲಿ ಪಡೆದ ವೆಬ್‌ಸೈಟ್‌ನಲ್ಲಿ ಹಾಕಿದ ಲೇಖನ "ಸಂಘ ನನ್ನ ಆತ್ಮ"ದಲ್ಲಿ ವಾಜಪೇಯಿಯವರು ಭಾರತದಲ್ಲಿ ಒಂದು ಮತೀಯ ಹಿಂದೂ ರಾಷ್ಟ್ರವನ್ನು ಸ್ಥಾಪಿಸುವ ಗೋಲ್ವಾಲ್ಕರ್ ಕಣ್ಣೋಟವನ್ನು ಮುಂದಿಟ್ಟಿದ್ದಾರೆ.

ಇದು ತನ್ನ ಲೇಖನ ಅಲ್ಲ ಎಂದು ಶ್ರೀವಾಜಪೇಯಿಯವರು ಹೇಳಿದ ಮೇಲೂ ಬಿಜೆಪಿಯ ವೆಬ್‌ಸೈಟ್‌ನಲ್ಲಿ ಈ ಲೇಖನ ಮುಂದುವರಿಯಿತು.

ಇದರಲ್ಲಿ ಆರ್.ಎಸ್.ಎಸ್.ನ್ನು ಹೊಗಳುತ್ತಾ ಅವರು ಅದರ ದ್ವಿವಿಧ ಗುರಿಯನ್ನು ವಿವರಿಸುತ್ತಾರೆ- ಮೊದಲನೆಯದಾಗಿ ಹಿಂದೂಗಳನ್ನು ಸಂಘಟಿಸುವುದು ಮತ್ತು ಎರಡನೆಯದಾಗಿ ಹಿಂದೂವೇತರರನ್ನು ಅಂತರ್ಗತವಾಗಿಸುವುದು. ಗೋಲ್ವಾಲ್ಕರ್ ರವರ ಅವರು (ಅಂದರೆ ಹಿಂದೂ ವೇತರರು) ತಮ್ಮ ಜನಾಂಗೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಭಿನ್ನತೆಗಳನ್ನು ಉಳಿಸಿಕೊಳ್ಳುವವರೆಗೆ ಅವರು ವಿದೇಶೀಯರಲ್ಲದೆ ಬೇರೇನೂ ಅಲ್ಲ ಎಂಬ ಮಾತನ್ನು ನೆನಪಿಸುವಂತೆ ಶ್ರೀವಾಜಪೇಯಿಯವರು ಮುಸ್ಲಿಮರ ಬಗ್ಗೆ ತಮ್ಮ ನಿಲುವನ್ನು ವಿವರಿಸುತ್ತಾರೆ. ಅವರ ಲೇಖನದ ಈ ವಾಕ್ಯಗಳನ್ನೇ ನೋಡಿ-

"ಈ ದೇಶದ ಮುಸ್ಲಿಮರನ್ನು ಮೂರು ರೀತಿಗಳಲ್ಲಿ ಕಾಣಬಹುದು. ಒಂದು -ತಿರಸ್ಕಾರದಿಂದ. ಅಂದರೆ ಅವರು ತಾವಾಗಿಯೇ ಬದಲಾಗದಿದ್ದರೆ ಅವರಷ್ಟಕ್ಕೆ ಬಿಟ್ಟುಬಿಡಿ. ಎರಡನೆಯದಾಗಿ - ಪುರಸ್ಕಾರ ಅರ್ಥಾತ್ ಅವರನ್ನು ಸಂತೃಪ್ತಗೊಳಿಸಲು ಪ್ರಯತ್ನಿಸುವುದು. ಅಂದರೆ ಕಾಂಗ್ರೆಸ್ (ಐ) ಮತ್ತು ಅವರಂತೆ ಇತರರು ಮಾಡುವಂತೆ ಲಂಚ ನೀಡುವುದು. ಮೂರನೇ ದಾರಿ ಯೆಂದರೆ ಪರಿಷ್ಕಾರ. ಅಂದರೆ ಅವರನ್ನು ಬದಲಿಸುವುದು. ಅರ್ಥಾತ್ ಅವರಿಗೆ 'ಸಂಸ್ಕಾರ'ಗಳನ್ನು ಒದಗಿಸಿ ಅವರನ್ನು ಮುಖ್ಯಧಾರೆಗೆ ತರುವುದು. ನಾವು ಅವರಿಗೆ ಸರಿಯಾದ 'ಸಂಸ್ಕಾರ'ಗಳನ್ನು ಕೊಟ್ಟು ಬದಲಿಸಬಯಸುತ್ತೇವೆ"

ನೇರ ಪದಗಳಲ್ಲಿ ಹೇಳುವುದಾದರೆ ಗೋಲ್ವಾಲ್ಕರ್ ಉವಾಚದಂತೆ ಮುಸಲ್ಮಾನರು ಮುಸಲ್ಮಾನರಾಗಿ ಉಳಿಯಬಾರದು! ಧರ್ಮನಿರಪೇಕ್ಷತೆಯ ಎಂತಹ ವಿಶಿಷ್ಟ ವಿಕೃತಿ!"

ಧಾರ್ಮಿಕ ಮೂಲಭೂತವಾದ ಹಾಗೂ ಹಿಂದೂವೇತರರ ಬಗ್ಗೆ ಉನ್ಮತ್ತ ಅಸಹನೆಗೆ ದನಿ ನೀಡುತ್ತಾ ಶ್ರೀವಾಜಪೇಯಿಯವರು ದೇಶದ ಅಲ್ಪಸಂಖ್ಯಾತರಿಗೆ ಸ್ಪಷ್ಟವಾಗಿ ಒಂದು ಬೆದರಿಕೆ ಹಾಕಿದ್ದಾರೆ.

ಈ ಬೆದರಿಕೆಯ ಎಳೆಯನ್ನು ಹೆಕ್ಕಿಕೊಂಡ ಶ್ರೀಮತಿ ಉಮಾ ಭಾರತಿ ಆರ್.ಎಸ್.ಎಸ್.ನ ಮುಖವಾಣಿ 'ಪಾಂಚಜನ್ಯ' ದ ಇತ್ತೀಚಿನ ಲೇಖನ ವೊಂದರಲ್ಲಿ ಹೀಗಂದಿದ್ದಾರೆ - "ಅವರ (ಅಂದರೆ ಮುಸ್ಲಿಮರ) ಭದ್ರತೆಯ, ರಕ್ಷಣೆಯ ಗ್ಯಾರಂಟಿಯನ್ನು ಕೇವಲ ಹಿಂದೂಗಳು ಮಾತ್ರ ಕೊಡಬಲ್ಲರು. ಅವರು ಹಿಂದೂಗಳೊಂದಿಗೆ ಉತ್ತಮ ಸಂಬಂಧ ಗಳನ್ನು ಹೊಂದಿದ್ದಾಗ ಮಾತ್ರ ಇದು ಸಾಧ್ಯ." ಇದರ ಸರಳ ಅರ್ಥವಿಷ್ಟೇ - ಮುಸ್ಲಿಮರು ಬಿಜೆಪಿಗೆ ಮತನೀಡದಿದ್ದರೆ ಪರಿಣಾಮಗಳನ್ನು ಎದುರಿಸಲು ಅವರು ಸಿದ್ಧರಾಗಬೇಕು!

ಇಡೀ ಭಾರತೀಯ ಹಿಂದೂಗಳ ಪರವಾಗಿ ಮಾತನಾಡುವ ಹಕ್ಕು ಕೇವಲ ತಮ್ಮದು ಎಂಬ ಅಹಂಭಾವ ಬಿಜೆಪಿಯದ್ದು! ಸ್ವತಂತ್ರ ಭಾರತದ ಸ್ವರೂಪ ಹೇಗಿರಬೇಕು ಎಂಬ ಸಮರ ಹಿಂದೂ ರಾಷ್ಟ್ರದ ಪ್ರತಿಪಾದಕರು ಮತ್ತು ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ಆಧುನಿಕ ಭಾರತದ ಪುರೋಗಾಮಿ ಕಣ್ಣೋಟದ ಪ್ರತಿಪಾದಕರ ನಡುವೆ ನಡೆಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳೋಣ. ಈ ಸಮರ ನಾವು ನಮ್ಮ ದೇಶದ ಸಂವಿಧಾನವನ್ನು ಅಂಗೀಕರಿಸಿದಾಗ ಇತ್ಯರ್ಥವಾಯಿತು. ಆಗ ಹಿಂದೂ ರಾಷ್ಟ್ರ ಸಿದ್ಧಾಂತವನ್ನು ನಾವು ನಿರ್ಣಾಯಕವಾಗಿ ತಿರಸ್ಕರಿಸಿದೆವು. ಹಿಂದೂ ರಾಷ್ಟ್ರದ ಪ್ರತಿಪಾದಕರಿಗೆ ಎಷ್ಟು ರೇಗಿ ಹೋಯಿತೆಂದರೆ ಅವರು ಅದಕ್ಕೆ ಪ್ರತಿಯಾಗಿ ಮಹಾತ್ಮಾ ಗಾಂಧಿಯವರ ಜೀವವನ್ನೇ ಬಲಿತೆಗೆದು ಕೊಂಡರು.

ಇಂದು ಮತ್ತೊಮ್ಮೆ, ಮುಂಬರುವ ಚುನಾವಣೆಗಳಲ್ಲಿ ಆರ್. ಎಸ್. ಎಸ್.ನ ಹಿಂದೂ ರಾಷ್ಟ್ರದ ಕಣ್ಣೋಟ ಅದರ ನಿಜವಾದ ಅಜೆಂಡಾ. ಹಿಂದೆ ಸದಾ ಜಾತ್ಯಾತೀತತೆಗೆ ಸವಾಲು ಬಂದಾಗಲೆಲ್ಲಾ ಜನ ನಮ್ಮ ಸಮಾಜವನ್ನು ಛಿದ್ರಗೊಳಿಸುವ, ದೇಶವನ್ನು ನಾಶ ಮಾಡುವ ಕೋಮುವಾದಿ ಶಕ್ತಿಗಳನ್ನು ನಿರ್ಣಾಯಕವಾಗಿ ತಿರಸ್ಕರಿಸುವಂತೆ ಈ ಬಾರಿಯೂ ಮಾಡುತ್ತಾರೆ ಎಂದು ಬಿಜೆಪಿಗೆ ಹೇಳಬೇಕಾಗುತ್ತದೆ. ಭಾರತ ಒಂದು ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣತಂತ್ರವಾಗಿ ಉಳಿದಿರುವುದೇ ಬಹುಪಾಲು ಹಿಂದೂಗಳು ತಮ್ಮ ಹಿಂದೂವೇತರ ದೇಶಬಾಂಧವರೊಂದಿಗೆ ಹಿಂದೂರಾಷ್ಟ್ರದ ತತ್ವವನ್ನು ತಿರಸ್ಕರಿಸಿರುವುದರಿಂದಲೇ. ಈ ಬಾರಿ ಕೂಡ ಬಹುಪಾಲು ಭಾರತೀಯ ಜನತೆ ಮತ್ತೊಮ್ಮೆ ಬಿಜೆಪಿಯ ಈ ಅಡಗಿಸಿಟ್ಟ ಅಜೆಂಡಾವನ್ನು ತಿರಸ್ಕರಿಸುತ್ತಾರೆ.

ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ - ಉನ್ನಿ



ದೇಶವನ್ನು, ಆರ್ಥಿಕವನ್ನು ಉಳಿಸಲು ಕಾಂಗ್ರೆಸ್, ಬಿಜೆಪಿ ಕೂಟಗಳನ್ನು ಸೋಲಿಸಿ

ದೇಶದ ಕಾರ್ಮಿಕರಿಗೆ ಸಿ.ಐ.ಟಿ.ಯು. ಕರೆ

ಮುಂಬರುವ ಚುನಾವಣೆಗಳು ದೇಶದ ಅದೃಷ್ಟವನ್ನು ನಿರ್ಧರಿಸು ವಂತಹವು. ಆದ್ದರಿಂದ ಕೋಟಿಗೂ ಹೆಚ್ಚು ಮತದಾರರ ಒಂದು ಪ್ರಮುಖ ವಿಭಾಗವಾದ ಕಾರ್ಮಿಕ ವರ್ಗ ಈ ಚುನಾವಣಾ ಸಮರದಲ್ಲಿ ಒಂದು ಮಹತ್ವಪೂರ್ಣ ಪಾತ್ರ ವಹಿಸಬೇಕು ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿ.ಐ.ಟಿ.ಯು. ದೇಶದ ಎಲ್ಲಾ ಕಾರ್ಮಿಕರಿಗೆ ಕರೆ ನೀಡಿದೆ.

ಬಂಡವಾಳಶಾಹಿ ಪಕ್ಷಗಳು ಅಧಿಕಾರ ಗಿಟ್ಟಿಸಲು ಈಗ ನಡೆಸುತ್ತಿರುವ ನೀತಿಬಾಹಿರ ಪ್ರಯತ್ನಗಳನ್ನು ದೇಶ ಹಿಂದೆಂದಿಗೂ ಕಂಡಿರಲಿಲ್ಲ. ತಮ್ಮ ನಗ್ನ ಸಂದರ್ಭಸಾಧಕತನವನ್ನು ಮುಚ್ಚಿ ಹಾಕಲು ಏನೇನೋ ತರ್ಕ ಒಡ್ಡುತ್ತಿದ್ದಾರೆ. ನಿಜವಾದ ಸಮಸ್ಯೆಗಳಿಂದ ಜನಗಳ ಗಮನವನ್ನು ಬೇರೆಡೆಗೆ ಸೆಳೆದು ಜನಗಳೊಂದಿಗೆ ಕಣ್ಣಾಮುಚ್ಚಾಲೆ ಮಾಡುವ ವ್ಯವಸ್ಥಿತ ಪ್ರಯತ್ನಗಳು ನಡೆಯುತ್ತಿವೆ. ಧಾರ್ಮಿಕ, ವಿಭಜನಕಾರಿ, ಸಂಕುಚಿತ ಮತ್ತು ಮೂಲ ಭೂತವಾದಿ ಘೋಷಣೆಗಳನ್ನು ಜನಗಳತ್ತ ಎಸೆಯಲಾಗುತ್ತಿದೆ. ಸುಳ್ಳು ಭರವಸೆಗಳ ಮಹಾಪೂರಬಂದಿದೆ. ಕಾರ್ಮಿಕ ವರ್ಗ ಈ ಆಟವನ್ನು ಅರಿತು, ಪ್ರಸ್ತುತ ಸನ್ನಿವೇಶದ ಮೌಲ್ಯಮಾಪನ ಮಾಡಿ ಇತ್ತೀಚಿನ ಅನುಭವಗಳನ್ನು ನೆನಪಿಸಿಕೊಂಡು ಭವಿಷ್ಯದ ಬಗ್ಗೆ ತನ್ನ ಕಣ್ಣೋಟವನ್ನು ರೂಪಿಸಿಕೊಳ್ಳಬೇಕು ಎಂದು ಸಿ.ಐ.ಟಿ.ಯು ದೇಶದ ಕಾರ್ಮಿಕರಿಗೆ ಕರೆನೀಡಿದೆ.

ದೇಶದ ಶೋಚನೀಯ ಆರ್ಥಿಕ ಪರಿಸ್ಥಿತಿಯ ಒಂದು ಸ್ಥೂಲ ಚಿತ್ರ ನೀಡುತ್ತಾ ಇದರ ಜೊತೆಗೆ ಉನ್ನತ ಸ್ಥಾನಗಳಲ್ಲಿರುವ ಪುಢಾರಿಗಳ ಭ್ರಷ್ಟಾಚಾರ, ರಾಜಕೀಯದ ಅಪರಾಧೀಕರಣ ದೇಶದ ಮತ್ತು ಜನಗಳ ಪರಿಸ್ಥಿತಿಯನ್ನು ಮತಷ್ಟು ಹದಗೆಡಿಸಿದೆ ಎಂದಿರುವ ಸಿಐಟಿಯು ಮನವಿ "ದೇಶ ಒಂದು ಗಂಭೀರ ಆರ್ಥಿಕ ಹಿಂಜರಿತದ ಮೂಲಕ ಹಾದು ಹೋಗು ತ್ತಿದೆ, ಈಗಿನ ಧೋರಣೆಗಳನ್ನು ಮುಂದುವರೆಸಿದರೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆ" ಎಂದಿದೆ. ದಕ್ಷಿಣ ಪೂರ್ವ ಏಶ್ಯಾ ಮತ್ತು ವಿಶ್ವದಲ್ಲಿ ಆರ್ಥಿಕ ಹಿಂಜರಿತ ಇದನ್ನು ಇನ್ನಷ್ಟು ಉಲ್ಬಣ ಗೊಳಿಸಲಿದೆ. ಇಂತಹ ಸನ್ನಿವೇಶದಲ್ಲಿ ಬಡತನ ಮತ್ತು ದಾರಿದ್ರ್ಯವನ್ನು ನಿರ್ಮೂಲ ಮಾಡುವ ಹೋರಾಟಕ್ಕೆ ಮತ್ತಷ್ಟು ಗಂಭೀರ ಹಿನ್ನಡೆಯಾಗಬಹುದು. ಆದ್ದರಿಂದ ಕಾರ್ಮಿಕ ವರ್ಗ ಮೂಕಪ್ರೇಕ್ಷಕನಾಗಿರಲು ಸಾಧ್ಯವಿಲ್ಲ. ಅದು ಎಡ, ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳೊಂದಿಗೆ ಕೈಜೋಡಿಸ ಬೇಕು. ಏಕೆಂದರೆ ಈ ಶಕ್ತಿಗಳು ಮಾತ್ರವೇ ಕಾರ್ಮಿಕರಿಗೆ ಮತ್ತು ಶ್ರಮಜೀವಿ ವಿಭಾಗ ಗಳಿಗೆ ನ್ಯಾಯ ದೊರಕಿಸುವತ್ತ ಸಾಗಬಲ್ಲವು" ಎಂದಿದೆ.

ಮತಕೇಳಲು ಕಾಂಗ್ರೆಸ್ಸಿಗೆ ಹಕ್ಕಿಲ್ಲ ಬಿಜೆಪಿ-ನಾಣ್ಯದ ಇನ್ನೊಂದು ಮುಖ

ದೇಶವನ್ನು ಈಗಿನ ವಿನಾಶಕಾರಿ ಸ್ಥಿತಿಗೆ ತಂದಿಟ್ಟ, ಉನ್ನತ ಮುಖಂಡರು ಗಂಭೀರ ಭ್ರಷ್ಟಾಚಾರದ ಹಗರಣಗಳಲ್ಲಿ ಸಿಲುಕಿ ಕೊಂಡಿರುವ ಕಾಂಗ್ರೆಸ್ ಪಕ್ಷಕ್ಕೆ ಮತ್ತೆ ಜನಗಳಿಂದ ಅಧಿಕಾರ ಕೇಳುವ ಹಕ್ಕು ಕಿಂಚಿತ್ತೂ ಇಲ್ಲ. ಅದರ ಆರ್ಥಿಕ ಕಾರ್ಯಕ್ರಮವೆಂದರೆ ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶವನ್ನು ಮಾರಾಟ ಮಾಡುವುದು. ಅದು ದೊಡ್ಡ ಬಂಡವಾಳಿಗರು ಮತ್ತು ಭೂಮಾಲಕರನ್ನು ಕೊಬ್ಬಿಸಿ ಬಹುಪಾಲು ಜನಗಳ ಬಡತನ ಹೆಚ್ಚಲು ಕಾರಣವಾಗಿದೆ. ಆದ್ದರಿಂದ ಈ ಚುನಾವಣೆಯಲ್ಲಿ ಕಾರ್ಮಿಕರು ಮತ್ತು ಶ್ರಮಜೀವಿಗಳು ಕಾಂಗ್ರೆಸ್ ಸಂಪೂರ್ಣ ವಾಗಿ ಸೋಲುವಂತೆ ಮಾಡಬೇಕು ಎಂದು ಸಿಐಟಿಯು ಕರೆ ನೀಡಿದೆ.

ಆಳುವ ವರ್ಗಗಳ ಇನ್ನೊಂದು ಕೂಟದ ನೇತೃತ್ವದಲ್ಲಿರುವ ಬಿಜೆಪಿ ಎಲ್ಲಾ ರೀತಿಯ ಮೋಸ, ವಂಚನೆ, ಸಮಯ ಸಾಧಕತನಗಳಿಂದ ಅಧಿಕಾರ ಗಿಟ್ಟಿಸುವ ಪ್ರಯತ್ನದಲ್ಲಿದೆ. ಆದರೆ ಅದರ ಸುಳ್ಳು ಭರವಸೆಗಳು ಅದೊಂದು ಅರೆ - ಫ್ಯಾಸಿಸ್ಟ್, ಮೂಲಭೂತವಾದಿ ಕಾರ್ಯ ಕ್ರಮವಿರುವ ಪಕ್ಷ, ಅದಕ್ಕಾಗಿ ಜನಗಳನ್ನು ಧಾರ್ಮಿಕ ಆಧಾರದಲ್ಲಿ ವಿಭಜಿಸಿ ಹಿಂದುಗಳು ಮತ್ತು ಅಲ್ಪಸಂಖ್ಯಾತರ ನಡುವೆ ಜಗಳ ಹುಟ್ಟಿಸುವ ಪಕ್ಷ ಎಂಬುದನ್ನು ಮರೆಮಾಚಲಾರದು. ಅಷ್ಟೇ ಅಲ್ಲ, ಈ ಪಕ್ಷ ನಾಚಿಕೆಯಿಲ್ಲದೆ ಉದಾರೀಕರಣದ ಪರವಾಗಿ ಬಂಡವಾಳ ಶಾಹಿಗಳು, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಭೂಮಾಲಕರ ಪರವಾಗಿ ಕೈಯೆತ್ತಿರುವ ಪಕ್ಷ. ಉದಾರೀಕರಣ ನೀತಿಗಳನ್ನು ಆರಂಭಿಸಿ ದಾಗ ತನ್ನ ನೀತಿಗಳನ್ನು ಕಾಂಗ್ರೆಸ್(ಐ) ಕದ್ದೊಯ್ದಿದೆ ಎಂದಿದ್ದ ಪಕ್ಷ ಇದು. ಈಗ ಚುನಾವಣೆ ಮುಂದಿರುವಾಗ ಮತದಾರ ರಲ್ಲಿ ಗೊಂದಲ ಉಂಟು ಮಾಡಲು ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧವಾದ, ಪರಸ್ಪರ ವಿರುದ್ಧವಾದ ಹೇಳಿಕೆಗಳನ್ನು ನೀಡುತ್ತಿದೆ. *ಇಂತಹ ಸಮಯಸಾಧಕ, ಅಪಾಯಕಾರಿ ಪ್ರತಿಗಾಮಿ ಪಕ್ಷವನ್ನು ಕಾರ್ಮಿಕ ವರ್ಗ ಸೋಲಿಸದಿದ್ದರೆ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವ ಹೋರಾಟಕ್ಕೆ ಅವಕಾಶವೊದಗಿಸುವ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಹಂದರವನ್ನೇ ಅದು ನಾಶಮಾಡುತ್ತದೆ* ಎಂದು ಸಿಐಟಿಯು ಹೇಳಿದೆ.


ಈ ಎರಡೂ ಪಕ್ಷಗಳು ಒಂದೆ ನಾಣ್ಯದ ಎರಡು ಮುಖಗಳು. ವಿದೇಶೀ ಶಕ್ತಿಗಳು ಮತ್ತು ದೇಶೀ ಬಂಡವಾಳಶಾಹಿ ಗಳು ಅವುಗಳಿಗೆ ನೇರ ಬೆಂಬಲ ನೀಡುತ್ತಿವೆ. ಇದರಿಂದ ಇವು ಇನ್ನಷ್ಟು ಅಪಾಯಕಾರಿ. ಇಂತಹ ಸನ್ನಿವೇಶದಲ್ಲಿ ಸಂಯುಕ್ತ ರಂಗ ಮಾತ್ರವೇ, ಅದಕ್ಕೆ ಸ್ಪಷ್ಟ ಬಹುಮತ ನೀಡಿದರೆ ಕೇಂದ್ರದಲ್ಲಿ ಒಂದು ಸ್ಥಿರ ಸರ್ಕಾರ ನೀಡಬಲ್ಲದು ಎಂಬುದು ತನ್ನ ದೃಢ ಅಭಿಪ್ರಾಯ ಎಂದಿರುವ ಸಿಐಟಿಯು ಆದ್ದರಿಂದ ಅದು ಕಾಂಗ್ರೆಸ್ಸಿನ ಬೆಂಬಲವನ್ನು ಅವಲಂಬಿಸದಂತಾಗಲು ಸ್ಪಷ್ಟ ಬಹುಮತ ದೊಂದಿಗೆ ಅಧಿಕಾರಕ್ಕೆ ತರಬೇಕು ಎಂದು ಕಾರ್ಮಿಕ ವರ್ಗಕ್ಕೆ ಮನವಿ ಮಾಡಿದೆ.

ಎಡಪಕ್ಷಗಳೇ ಏಕೈಕ ಗ್ಯಾರಂಟಿ

ಹೊಸ ಲೋಕಸಭೆಯಲ್ಲಿ ಎಡಪಕ್ಷ ಗಳು ಹೆಚ್ಚಿನ ಪ್ರಾತಿನಿಧ್ಯ ಹೊಂದುವಂತೆ ಕಾರ್ಮಿಕ ವರ್ಗ ಸಕ್ರಿಯವಾಗಿ ದುಡಿಯಬೇಕು. ಏಕೆಂದರೆ ಸಂಸತ್ತಿನಲ್ಲಿ ಕಾರ್ಮಿಕ ವರ್ಗ ಹಾಗೂ ಇತರ ಜನವಿಭಾಗಗಳ ಹಿತಾಸಕ್ತಿಗಳನ್ನು ರಕ್ಷಿಸಲು ನಿರಂತರವಾಗಿ ಹೋರಾಡುತ್ತಾ ಬಂದಿರುವುದು ಎಡ ಪಕ್ಷಗಳು ಮಾತ್ರ ಎಂಬುದು ನಮ್ಮ ನಿಜ ಅನುಭವ. *ಕೇಂದ್ರದಲ್ಲಿ ಮುಂಬರುವ ಸರಕಾರ ಜನ-ಪರ ಮತ್ತು ಕಾರ್ಮಿಕ ವರ್ಗ ಪರವಾದ ಧೋರಣೆಗಳನ್ನು ಪಾಲಿಸು ವಂತಾಗಬೇಕಾದರೆ ಎಡ ಪಕ್ಷಗಳ ಎಂ.ಪಿ.ಗಳ ಒಂದು ಬಲಿಷ್ಟ ತಂಡವೇ ಏಕೈಕ ಗ್ಯಾರಂಟಿ.* ಆದ್ದರಿಂದ ಕಾರ್ಮಿಕ ವರ್ಗ ಸಂಯುಕ್ತ ರಂಗದ ಪರವಾಗಿ ನಿರ್ಣಾಯಕವಾಗಿ ಮತ ನೀಡುವಾಗಲೇ ಎಡರಂಗದ ಪಕ್ಷಗಳು ಸಂಸತ್ತಿನಲ್ಲಿ ಪ್ರಬಲ ಶಕ್ತಿಯಾಗಿರುವಂತೆ ಮಾಡಬೇಕಾದ್ದು ಅಗತ್ಯ ಎಂದು ಸಿಐಟಿಯು ಒತ್ತಿ ಹೇಳಿದೆ.

ಕಾರ್ಮಿಕ ವರ್ಗ ಸಂಯುಕ್ತ ರಂಗವನ್ನು ಬೆಂಬಲಿಸುವಾಗಲೇ ಉದಾರೀಕರಣ ಮತ್ತು ಜಾಗತೀಕರಣ ಧೋರಣೆಗಳ ವಿರುದ್ಧವೂ ಪ್ರಚಾರ ನಡೆಸಬೇಕು ಹಾಗೂ ಹೊಸ ಸಂಯುಕ್ತ ರಂಗ ಸರಕಾರ ಒಂದು ಸ್ವಾವಲಂಬೀ ಆರ್ಥಿಕಕ್ಕಾಗಿ ಹೋರಾಡ ಬೇಕು ಹಾಗೂ ಐಎಂಎಫ್ - ವಿಶ್ವ ಬ್ಯಾಂಕ್ ಹೇರಿದ ನೀತಿಗಳನ್ನು ವಿರೋಧಿಸ ಬೇಕು ಎಂದು ಪ್ರತಿಪಾದಿಸಬೇಕು.

ಕಾರ್ಮಿಕ ವರ್ಗ ಮತ್ತು ಶ್ರಮಜೀವಿ ಜನಗಳು ತಮ್ಮ ಚಾರಿತ್ರಿಕ ಜವಾಬ್ದಾರಿ ಯನ್ನು ಅರಿತರೆ ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಅವರೊಂದು ಮಹತ್ವದ ಪಾತ್ರ ವಹಿಸಬಲ್ಲರು ಎಂದು ವಿಶ್ವಾಸ ವ್ಯಕ್ತಪಡಿಸಿರುವ ಸಿಐಟಿಯು ಭಾರತದ ಕಾರ್ಮಿಕ ವರ್ಗ ಅದು ಯಾವುದೇ ಕಾರ್ಮಿಕ ಸಂಘಟನೆಗೆ ಸೇರಿರಲಿ ಸನ್ನಿವೇಶದ ಸವಾಲುಗಳನ್ನು ಎದುರಿಸಲು ಸಡ್ಡು ಹೊಡೆದು ನಿಂತು ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಸೋಲಿಸಲು ಸರ್ವ ಪ್ರಯತ್ನ ನಡೆಸಬೇಕು, ಈ ನಿರ್ಣಾಯಕ ಘಟ್ಟದಲ್ಲಿ ದೇಶವನ್ನು ಮುಂದಕ್ಕೊಯ್ಯಲು ಸಂಯುಕ್ತ ರಂಗಕ್ಕೆ ಮತನೀಡಿ ಅದು ಭವ್ಯ ವಿಜಯವನ್ನು ಪಡೆಯುವಂತೆ ಮಾಡ ಬೇಕು, ಎಲ್ಲಾ ಶ್ರಮಜೀವಿಗಳ ಆಕಾಂಕ್ಷೆ ಗಳನ್ನು ಬಿಂಬಿಸಲು ಎಡಪಕ್ಷಗಳ ಅಭ್ಯರ್ಥಿ ಗಳನ್ನು ದೊಡ್ಡ ಸಂಖ್ಯೆಯಲ್ಲಿ ಆರಿಸಿ ಕಳಿಸಬೇಕು ಎಂದು ಮನವಿ ಮಾಡಿದೆ. ದೇಶವನ್ನು ಅದರ ಆರ್ಥಿಕವನ್ನು, ಜನಗಳನ್ನು ಹಾಗೂ ಕಾರ್ಮಿಕ ವರ್ಗವನ್ನು ಉಳಿಸುವ ಈ ಚಾರಿತ್ರಿಕ ಕರ್ತವ್ಯವನ್ನು ಈಡೇರಿಸುವಲ್ಲಿ ಕಾರ್ಮಿಕ ವರ್ಗ ತನ್ನ ಕೈಲಾದ ಕಾಣಿಕೆ ನೀಡುವಂತಾಗಲಿ ಎಂದು ಸಿಐಟಿಯು ಹಾರೈಸಿದೆ.



ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್

ಚುನಾವಣಾ ಸಮೀಕ್ಷೆ.................. ಯು.ಬಸವರಾಜು

ಬಳ್ಳಾರಿ:ಸಂಯುಕ್ತ ರಂಗಕ್ಕೊಂದು ಹೊಸವರ್ಷದ ಕೊಡುಗೆ ಪಡೆಯಲು ಜನತಾದಳ ಸಿದ್ಧವಾಗಬೇಕು

ಕಳೆದ 10 ಲೋಕಸಭಾ ಚುನಾವಣೆ ಗಳಲ್ಲಿ ಬರೀ ಕಾಂಗೈನ ಅಭ್ಯರ್ಥಿಗಳನ್ನೇ ಆರಿಸಿ ಕಾಂಗ್ರೆಸ್ ಪಕ್ಷದ ಭದ್ರಕೋಟೆ ಯಂದೇ ಹೆಸರುವಾಸಿಯಾದ ಬಳ್ಳಾರಿ ಲೋಕಸಭಾ ಕ್ಷೇತ್ರವು, ಇದೀಗ ಮೊಟ್ಟ ಮೊದಲಬಾರಿಗೆ 1998 ಫೆಬ್ರವರಿ 22 ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ, ಜನ ವಿರೋಧಿ ಆರ್ಥಿಕ ನೀತಿಗಳನ್ನು ಜಾರಿಗೆ ತಂದ, ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿ ತೇಲಾಡಿದ ಕೋಮು ವಾದಿಗಳಿಗೆ, ಮತೀಯ ವಾದಿಗಳಿಗೆ ಕುಮ್ಮಕ್ಕು ನೀಡಿದ, ದೇಶದಾದ್ಯಂತ ಜನ ಬೆಂಬಲ ಕಳೆದುಕೊಳ್ಳುತ್ತ ಚಿಂದಿ, ಚಿಂದಿ ಯಾಗುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಮತ್ತೊಂದು ಹೊಡೆತವನ್ನು ನೀಡಿ ಸೋಲಿಸಿ ಹೊಸ ವರ್ಷದ ಕಾಣಿಕೆಯಾಗಿ ಸಂಯುಕ್ತ ರಂಗಕ್ಕೊಂದು ಕೊಡುಗೆ ನೀಡಲು ತುದಿಗಾಲ ಮೇಲೆ ನಿಂತಿದೆ.

ಕಳೆದ 1996ರ ಲೋಕಸಭಾ ಚುನಾವಣೆಯಲ್ಲಿ ಕೇವಲ 4 ಸಾವಿರ ಮತಗಳ ಅಂತರದಿಂದ ಕಾಂಗೈ ಪಕ್ಷವು ಈ ಕ್ಷೇತ್ರವನ್ನು ತನ್ನ ತೆಕ್ಕೆಯೊಳಗೆ ಉಳಿಸಿ ಕೊಂಡಿತ್ತು. 1991ರ ಲೋಕಸಭಾ ಚುನಾವಣೆಯಲ್ಲಿ ಇದೇ ಕ್ಷೇತ್ರವನ್ನೂ 80 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಗೆದ್ದುಕೊಂಡಿತ್ತು. ಹೀಗಾಗಿ 1991 ರಿಂದ 1996ರ ಚುನಾವಣೆಯ ಕಾಲಾವಧಿಯೊಳಗೆ ಲಕ್ಷಾಂತರ ಮತದಾರರು ವಿರೋಧಿ ಅಭ್ಯರ್ಥಿಯನ್ನೂ ನಿಲ್ಲಿಸಿದ ಜನತಾ ದಳ ಪಕ್ಷದೆಡೆಗೆ ಸಾಗಿಬಂದಿರುವುದನ್ನು ಈ ಅಂಶ ತೋರಿಸುತ್ತದೆ. ವಾಸ್ತವದಲ್ಲಿ ಈ ಕ್ಷೇತ್ರದ ಮತದಾರರು 1996 ರ ಚುನಾವಣೆ ಯಲ್ಲಿಯೇ ಜನತಾದಳದ ಬುಟ್ಟಿಗೆ ಈ ಸ್ಥಾನವನ್ನು ಹಾಕಲು ತಯಾರಿದ್ದರು. ಆದರೆ ಜನತಾದಳವು ತನ್ನ ಅತ್ಮಹತ್ಯಾ ನಿಲುವಿ ನಿಂದಾ ಗಿಯೇ ಸೋಲನ್ನ ನುಭವಿಸಿತು. ಅವರ ಈ ಸೋಲಿಗೆ 2 ಪ್ರಮುಖ ಕಾರಣಗಳನ್ನು ಗುರುತಿಸ ಬಹುದು. 1) ಬಳ್ಳಾರಿ ನಗರ, ಕುರುಗೋಡು ಹಾಗೂ ಶಿರುಗುಪ್ಪ ವಿಧಾನ ಸಭಾ ಕ್ಷೇತ್ರಗಳ ಜನತೆ ಬಳ್ಳಾರಿ ಲೋಕಸಭಾ ಕ್ಷೇತ್ರದ ಸರಿಸುಮಾರು ಅರ್ಧದಷ್ಟಿದ್ದು, ಈ ಪ್ರದೇಶದ ರೈತರು 1995 ನೇ ವರ್ಷದ ಕೊನೆಯಲ್ಲಿ ತಮ್ಮ ಲಕ್ಷಾಂತರ ಎಕರೆ ಪ್ರದೇಶದಲ್ಲಿ ಬೆಳೆದು ನಿಂತ ಒಣ ಮೆಣಸಿನಕಾಯಿ, ಹತ್ತಿ, ನೆಲ್ಲು, ಸೂರ್ಯ ಕಾಂತಿ ಬೆಳೆಗಳಿಗೆ ತುಂಗಭದ್ರ ಆಡಳಿತ ಮಂಡಳಿಯು ನೀರಿನ ಅಭಾವ ಉಂಟು ಮಾಡಿದ್ದು, ಇದರಿಂದಾಗಿ ನೂರಾರು ಕೋಟಿ ರೂಪಾಯಿಯ ಬೆಳೆಯು ಹಾಳಾಗಿ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿ ಪ್ರತಿ ಎಕರೆಗೆ ಕನಿಷ್ಠ ಸರಾಸರಿ 10 ಸಾವಿರದಿಂದ 15 ಸಾವಿರ ರೂಪಾಯಿ ನಷ್ಟು ನಷ್ಟ ಅನುಭವಿಸಿ ಸಾಲದ ರೂಪದಲ್ಲಿ ಬಿದ್ದು ದಿವಾಳಿಯಾಗುವ ಭಯದಿಂದ ತುಂಗಭದ್ರ ನದಿಯಿಂದ ನೀರು ಬಿಟ್ಟು ರಕ್ಷಿಸುವಂತೆ, ತುಂಗಭದ್ರ ಆಡಳಿತ ಹಾಗೂ ಜಿಲ್ಲಾ-ರಾಜ್ಯ ಆಡಳಿತವನ್ನು ಒತ್ತಾಯಿಸಿ ವಾರಗಟ್ಟಲೇ ಚಳುವಳಿ, ಬಳ್ಳಾರಿ ಬಂದ್ ನಡೆದಾಗ, ಬಳ್ಳಾರಿ ಜಿಲ್ಲೆಯ ಆಡಳಿತ ವಿವೇಚನೆಯಿಂದ, ಸಮಾಧಾನದಿಂದ ಹೆಜ್ಜೆಯಿಡಲು ಸೂಚಿಸ ಬಹುದಾದ ಜಾಗದಲ್ಲಿ ಜಿಲ್ಲೆಯ ಉಸ್ತುವಾರಿ ಸಚಿವ, ರಾಜ್ಯ ಸರ್ಕಾರ ದುಡುಕಿ ಚಳುವಳಿನಿರತ ಹತ್ತಾರು ಸಾವಿರ ಜನರ ಮೇಲೆ ಪೋಲೀಸ್ ಬಲದಿಂದ ಲಾಠಿ ಪ್ರಹಾರ ನಡೆಸಿದುದೇ ಅಲ್ಲದೇ ಚದುರುತಿದ್ದ ಜನರ ಬೆನ್ನಟ್ಟಿ ಓಡಿಸಿಕೊಂಡು ಹೋಗಿ ಹಿಡಿದು ಹೊಡೆದು, ಹುಡು-ಹುಡುಕಿ ಎಳೆತಂದು ಲಾಕಪ್‌ನಲ್ಲಿ ಥಳಿಸಿದುದು... ಒಂದು ಕಾರಣವಾದರೇ, ಮತ್ತೊಂದು ಜಿಲ್ಲೆಯ ಬಂಡವಾಳಶಾಹಿ ಭೂಮಾಲಕ ರಾಜಕೀಯ ಪಕ್ಷಗಳಿಂದ, ಆಡಳಿತದಿಂದ ಭ್ರಮನಿರಸನ ಹೊಂದಿ ಬೇಸತ್ತು ಜನತೆಗೆ ನೇತೃತ್ವದ ನೀಡಿ ಸರಿದಾರಿ ಯತ್ತ ಕೊಂಡೊಯ್ಯುತ್ತಿರುವ ಸುಮಾರು ಜಿಲ್ಲೆಯಲ್ಲಿ 40 ಸಾವಿರದಷ್ಟು ಜನ ಬೆಂಬಲ ಹೊಂದಿರುವ ಸಿ.ಪಿ.ಐ.(ಎಂ) ಪಕ್ಷದ ಬೆಂಬಲ ವನ್ನು ಜನತಾದಳ ಪಡೆಯದೇ ಉದಾಸೀನ ಮಾಡಿದುದೇ...2ನೇ ಕಾರಣವಾಗಿದೆ.

ಈಗ ಒಂದೆಡೆ ನೀರಿನ ಸಮಸ್ಯೆಯನ್ನು - ಚಳುವಳಿಯಿಲ್ಲದೇ ತಾತ್ಕಾಲಿಕವಾಗಿ ಶಾಂತ ರೀತಿಯಿಂದ ಬಗೆಹರಿಸಿದುದು ಮತ್ತೊಂದೆಡೆ ಸಿಪಿಐ(ಎಂ) ತನ್ನ 5 ನೇ ಜಿಲ್ಲಾ ಸಮ್ಮೇಳನದಲ್ಲಿ ಸಂಯುಕ್ತ ರಂಗದ ಅಭ್ಯರ್ಥಿಯನ್ನು ಗೆಲ್ಲಿಸುವ ದೃಢ ನಿರ್ಧಾರವನ್ನು ತೆಗೆದುಕೊಂಡು, ತನ್ನೆಲ್ಲಾ ಘಟಕಗಳಿಗೆ ಈ ದಿಕ್ಕಿನಲ್ಲಿ ಕಾರ್ಯಪ್ರವೃತ್ತ ರಾಗುವಂತೆ ಕರೆ ನೀಡಿರುವುದು ಇವೆರಡು ಸಂಯುಕ್ತ ರಂಗದ ಗೆಲುವಿನ ಕಾರಣಗಳಾಗ ಲಿವೆ. ಇದರ ಜೊತೆಯಲ್ಲಿ ಕಾಂಗೈ ಪಕ್ಷದೊಳಗೆ ಕಳೆದ 5-6 ವರ್ಷಗಳಿಂದ ಬೆಳೆದು ಬರುತ್ತಿ ರುವ ಮುಸುಕಿನೊಳಗಿನ ಗುದ್ದಾಟ ಇತ್ತೀಚೆಗೆ ಸ್ಫೋಟಗೊಂಡು ಬೀದಿಗೆ ಬಂದಿದೆ. ಬೊಮ್ಮನ ಹಳ್ಳಿಯಲ್ಲಿ ಪಾರ್ಲಿಮೆಂಟ್ ಸದಸ್ಯರಿಗೆ ಪೋಲೀಸ್ ರಕ್ಷಣೆ ಕೂಡ ಬೇಕಾದಷ್ಟು ಮಟ್ಟಿಗೆ ಬೀದಿ ರಂಪವಾಗಿದೆ. ಇದೇ ಲೋಕಸಭಾ ಕ್ಷೇತ್ರವನ್ನು 3 ಬಾರಿ ಕಾಂಗೈ ಪಕ್ಷಕ್ಕೆ ಗೆದ್ದು ಕೊಟ್ಟು ಕೇಂದ್ರ ಸರ್ಕಾರದ ಮಂತ್ರಿಯೂ ಆಗಿದ್ದ ಮಾಜಿ ಶಾಸಕಿ ಶ್ರೀಮತಿ ಬಸವ ರಾಜೇಶ್ವರಿಯವರು ತಮ್ಮ ಬೆಂಬಲಿಗರೊಂದಿಗೆ ಕಾಂಗೈ ಅಭ್ಯರ್ಥಿ ಶ್ರೀಮಾನ್ ಕೆ.ಸಿ. ಕೊಂಡಯ್ಯನವರ ವಿರುದ್ಧ ಸೆಡ್ಡು ಹೊಡೆದಿರುವುದು ಕಾಂಗೈನಿಂದ ಮಾಜಿ ಕೆ.ಸಿ.ಪಿ.ಯವರು ಕೆ.ವಿ.ಪಿ.ಯಾಗಿ ಹೊರ ಬಂದು ಆ ಪಕ್ಷವನ್ನು ಸೀಳಿಕೊಂಡಿ ರುವುದು ಕೊಟ್ಟೂರು, ಕುರುಗೋಡು, ಹಡಗಲಿ ಕ್ಷೇತ್ರಗಳಲ್ಲಿ ಬಲಹೀನಗೊಳಿಸಿ ರುವುದು ಇದೆಲ್ಲವೂ ಕಾಂಗೈ ಸೋಲಿಗೆ ಮುಳು ವಾಗದೇ ಜನತಾದಳದ ಗೆಲುವಿಗೆ ಭಾರೀ ಬೋನಸ್ ಆಗಲಿದೆ.

ಈ ಬಾರಿಯೂ ಮಹಿಳಾ ಮತದಾರರ ಸಂಖ್ಯೆಯೇ ಹೆಚ್ಚಿರುವ 11,77,795 ಮತ ದಾರರು ಜಿಲ್ಲೆಯ ಹೊಸಪೇಟೆಯ ವಿಧಾನ ಸಭಾ ಕ್ಷೇತ್ರವನ್ನೂ ಹೊರತು ಪಡಿಸಿ ಉಳಿದ ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ, ಕೊಟ್ಟೂರು, ಸಂಡೂರು, ಬಳ್ಳಾರಿ, ಕುರುಗೋಡು, ಶಿರುಗುಪ್ಪಾಗಳ ಒಟ್ಟು 8 ವಿಧಾನ ಸಭಾ ಕ್ಷೇತ್ರಗಳನ್ನು ಜನತಾದಳ ಗೆದ್ದಿದ್ದೆ. (ವಾಸ್ತವವಾಗಿ ಮೂರನ್ನೂ ಕಾಂಗ್ರೆಸ್ ಗೆದ್ದಿದೆ. ಬಳ್ಳಾರಿ ನಗರದ ದಿವಾಕರ ಬಾಬು ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದು ಕೆಲವು ದಿನ ಜನತಾದಳ ಬೆಂಬಲಿಸಿ ಇದೀಗ ಕಾಂಗೈ ಸೇರಿ ಕೊಂಡಿದ್ದಾರೆ.)

ಹೀಗೆ ಶಾಸನ ಸಭಾ ಕ್ಷೇತ್ರಗಳಲ್ಲಿ ಸಮ-ಸಮ ಬಲವನ್ನು ಗಳಿಸಿದ್ದರೂ ಜಿಲ್ಲಾ ಪಂಚಾಯತ್ ಹಾಗೂ ಬಹಳಷ್ಟು ತಾಲೂಕಾ ಪಂಚಾಯತ್‌ಗಳನ್ನು ಜನತಾ ದಳಕ್ಕೆ ಗೆಲ್ಲಿಸಿಕೊಟ್ಟು ಮುಂಬರುವ ಲೋಕ ಸಭೆಗೆ ತಾನು ಕಳುಹಿಸಲಿರುವ ಪಕ್ಷದ ಕುರಿತು ಜನತೆ ಮುನ್ಸೂಚನೆ ನೀಡಿತು.

ಮಾತ್ರವಲ್ಲ ಮೊನ್ನೆ ನಡೆದ ವಿಧಾನ ಪರಿಷತ್ತು ಚುನಾವಣೆಯಲ್ಲಿ ಜಿಲ್ಲಾದ್ಯಂತ ಮತ ನೀಡಿದ ಗ್ರಾಮ ಪಂಚಾಯತ್ ಸದಸ್ಯ ರಲ್ಲಿ 150ಕ್ಕೂ ಹೆಚ್ಚು ಕಾಂಗೈ ಬೆಂಬಲಿಗ ಸದಸ್ಯರೇ ಇದ್ದಾರೆಂದು ಅಂದಾಜಿದ್ದ ರೂ(ಜನತಾದಳ ಒಗ್ಗೂಡಿ ಕೆಲಸ ಮಾಡಿ ದುದು-ಕಾಂಗೈ ಒಡೆದ ಮನೆಯಾಗಿರುವುದು) ಜನತಾದಳದ ಅಭ್ಯರ್ಥಿ ಗೆದ್ದು ಬಂದಿರು ವುದು ಎಲ್ಲವು ಸಂಯುಕ್ತ ರಂಗದ ಬುಟ್ಟಿಗೆ ಬಳ್ಳಾರಿ ಎಂಬುದನ್ನೂ ಸ್ಪಷ್ಟ ಪಡಿಸಿದೆ.

1991ನೇ ಲೋಕ ಸಭಾ ಚುನಾವಣೆ ಯಲ್ಲಿ ಕಾಂಗೈ ಪಕ್ಷದಿಂದ ಅತೃಪ್ತಗೊಂಡು ಸಿಡಿದು ಹೊರಬಂದ ಕುರುಬ ಜನಾಂಗದ ನಾಯಕರನ್ನು ಅಭ್ಯರ್ಥಿಯನ್ನಾಗಿಸಿಕೊಂಡು ಬಿ.ಜೆ.ಪಿ.ಯು 70 ಸಾವಿರ ಮತಗಳನ್ನು ಪಡೆದು ಜಿಲ್ಲೆಯ ನಾಗರೀಕರು ಹುಬ್ಬೇರಿಸು ವಂತೆ ಮಾಡಿತ್ತು. ಆದರೆ 1996 ರ ಲೋಕ ಸಭಾ ಚುನಾವಣೆಯಲ್ಲಿ ಕೇವಲ 4000 ಮತ ಪಡೆದು ಹೀನಾಯವಾದ ಹಿನ್ನಡೆಯನ್ನೂ ಅನುಭವಿಸಿತು. ಈ ಕ್ಷೇತ್ರದ ಹರಪನ ಹಳ್ಳಿ, ಹ.ಬೊಮ್ಮನ ಹಳ್ಳಿ, ಬಳ್ಳಾರಿ, ಶಿರುಗುಪ್ಪ ದಲ್ಲಿ ಆರ್.ಎಸ್.ಎಸ್.-ವಿಶ್ವ ಹಿಂದೂ ಪರಿಷತ್ ಚಟುವಟಿಕೆಗಳನ್ನು ನಡೆಸುತ್ತಾ ಇತ್ತೀಚೆಗೆ ಶಿರುಗುಪ್ಪಾದಲ್ಲಿ ನಡೆದ ಕೋಮು ಗಲಭೆಯ ಲಾಭ ಪಡೆಯುವ ಲೆಕ್ಕಾಚಾರ

ಪುಟ 7 ನೋಡಿ

ಕಾಶ್ಮೀರದಲ್ಲಿ ಭಯೋತ್ಪಾದಕರಿಂದ ನರಮೇಧ

ಜಮ್ಮು ಮತ್ತು ಕಾಶ್ಮೀರದ ಶ್ರೀನಗರದ ಹೊರವಲಯದ ಗಂದೇಲ್‌ಬಾರ್‌ನಲ್ಲಿ ಭಯೋತ್ಪಾದಕರು ಜನವರಿ 25 ರ ರಾತ್ರಿ 23 ಮಂದಿ ಕಾಶ್ಮೀರಿ ಪಂಡಿತರನ್ನುಕೊಂದು ಹಾಕಿದರು. ಮೃತರಲ್ಲಿ ನಾಲ್ಕು ಮಕ್ಕಳು ಮತ್ತು ಒಂಬತ್ತು ಮಂದಿ ಮಹಿಳೆಯರು.

ಭಾರೀ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಭಯೋತ್ಪಾದಕರು ವಂಧಮಾ ಗ್ರಾಮಕ್ಕೆ ನುಗ್ಗಿ ಮನೆಗಳಿಂದ ಮಕ್ಕಳು, ಮಹಿಳೆಯರು ಮತ್ತು ಪುರುಷರನ್ನು ಹೊರಗೆಳೆದು 21 ಜನರನ್ನು ಗುಂಡಿಟ್ಟು ಕೊಲೆ ಮಾಡಿದರು. ಅನಂತರ ದುಷ್ಕರ್ಮಿಗಳು ಮನೆಯೊಂದಕ್ಕೆ ಬೆಂಕಿ ಹಚ್ಚಿದ್ದರಿಂದ ಒಳಗಡೆಯಿದ್ದ ಇಬ್ಬರು ಮಕ್ಕಳು ಮತ್ತು ನಾಲ್ವರು ಮಹಿಳೆಯರು ಜೀವಂತ ಸುಟ್ಟುಹೋದರು. ಇವರು ಮನೆಯಿಂದ ಹೊರಗೆ ಬಾರದಂತೆ ದುರುಳರು ಬಾಗಿಲಿಗೆ ಬೀಗ ಹಾಕಿದ್ದರು.

ಹತ್ಯಾಕಾಂಡ ನಡೆಸಿ ಹಿಂದಿರುಗುವ ಮುಂಚೆ ಈ ಭಯೋತ್ಪಾದಕರು ಪ್ರಾರ್ಥನಾ ಮಂದಿರವೊಂದಕ್ಕೆ ಬೆಂಕಿ ಹಚ್ಚಿ ಪರಾರಿಯಾದರು.

ಮೃತಪಟ್ಟ ನಾಲ್ಕುಮಕ್ಕಳ ಪೈಕಿ ನಾಲ್ಕು ವರ್ಷ ಪ್ರಾಯದ ಬಾಲಕನ ದೇಹದಲ್ಲಿ 18 ಗುಂಡುಗಳು ಹೊಕ್ಕಿರುವುದು ಈ ದುರುಳರ ಅಮಾನವೀಯತೆಗೆ ಹಿಡಿದ ಕನ್ನಡಿಯಾಗಿದೆ.

ಮುಖ್ಯಮಂತ್ರಿ ಡಾ.ಫರೂಖ್ ಅಬ್ದುಲ್ಲಾ ಅವರ ಕ್ಷೇತ್ರದಲ್ಲೆ ಈ ಹೇಯ ಕೃತ್ಯ ನಡೆದಿದೆ. ಗಣರಾಜ್ಯೋತ್ಸವದ ಮುಂಚಿನ ದಿನ ನಡೆಸಲಾದ ಈ ಅಮಾನುಷ ಕೃತ್ಯಕ್ಕೆ ತಾನು ಹೊಣೆಯೆಂದು ಇದುವರೆಗೆ ಯಾರೂ ಹೇಳಿಕೊಂಡಿಲ್ಲ.

ಭಾರತದ ಸುಭದ್ರತೆಯನ್ನು ಬಯಸದ ಹೊರಗಿನ ಶಕ್ತಿಗಳ ಕುಮ್ಮಕ್ಕಿನಿಂದ ಈ ಹತ್ಯಾಕಾಂಡ ನಡೆದಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಲೋಕಸಭೆ ಚುನಾವಣೆ ನಡೆಯಲಿರುವ ಈ ಅವಧಿಯಲ್ಲಿ ಈ ನರಮೇಧ ನಡೆದಿರುವುದಕ್ಕೆ ಇನ್ನೂ ಹೆಚ್ಚಿನ ಅರ್ಥವಿದೆ. ಚುನಾವಣೆಗೆ ಅಡ್ಡಿ ಉಂಟುಮಾಡಲು ಉಗ್ರಗಾಮಿಗಳು ಮತ್ತು ಗಡಿಯಾಚೆಯಿಂದ ನುಸುಳಿರುವ ಅವರ ಸಹವರ್ತಿಗಳು ಈ ಕೃತ್ಯ ನಡಿಸಿದ್ದಾರೆ ಎಂದು ಮುಖ್ಯಮಂತ್ರಿ ಫರೂಕ್ ಅಬ್ದುಲ್ಲಾ ಹೇಳಿದ್ದಾರೆ. ಕಾಶ್ಮೀರಿ ಪಂಡಿತರ ಈ ಹತ್ಯಾಕಾಂಡಕ್ಕೆ ದೇಶಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ನರಮೇಧವನ್ನು ಪ್ರತಿಭಟಿಸಿ ಜ. 28 ರಂದು ಶ್ರೀನಗರದಲ್ಲಿ ಯಶಸ್ವಿ ಬಂದ್ ಅನ್ನು ಆಚರಿಸಲಾಯಿತು.

ಜೆಎನ್‌ಯು ಕುಲಪತಿಯ ಜಾತಿ ರಾಜಕೀಯ

ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ವಿದ್ಯಾರ್ಥಿ ಸಂಘದ ಅಧ್ಯಕ್ಷ ಬಟ್ಟಿಲಾಲ್ ಬೈರ್ ವಾ ಮತ್ತು ಇನ್ನೊಬ್ಬ ವಿದ್ಯಾರ್ಥಿ ಮನೋಜ್ ಪುರೋಹಿತ ಅವರನ್ನು ಸುಳ್ಳು ಆರೋಪದ ಮೇಲೆ ಅಮಾನತು ಮಾಡಿರುವ ಎಎನ್‌ಯು ಕುಲಪತಿಯವರ ಸರ್ವಾಧಿಕಾರಿ ಕ್ರಮವನ್ನು ಭಾರತ ವಿದ್ಯಾರ್ಥಿ ಫೆಡರೇಶನ್‌ನ ಕೇಂದ್ರ ಸಮಿತಿ ಕಟುವಾಗಿ ಖಂಡಿಸಿದೆ.

ವಿವಿ ಕ್ಯಾಂಪಾಸ್‌ಗೆ ಭಾರೀ ಪ್ರಮಾಣದ ಪೋಲೀಸರನ್ನು ಕರೆಸಿ ಶಾಂತಿಯುತವಾಗಿ ಪ್ರದರ್ಶನ ನಡೆಸುತ್ತಿದ್ದ ವಿದ್ಯಾರ್ಥಿಗಳನ್ನು ಪ್ರಚೋದಿಸಲು ಕುಲಪತಿ ಪ್ರಯತ್ನಿಸಿದ್ದನ್ನು ಕೂಡ ಎಸ್.ಎಫ್. ಐ. ಖಂಡಿಸಿದೆ.

ಪ್ರಜಾಸತ್ತಾತ್ಮಕ ವೇದಿಕೆಗಳನ್ನು ನಾಶ ಪಡಿಸಲು ಹಾಗೂ ವಿದ್ಯಾರ್ಥಿಗಳನ್ನು ಬಲಿ ಪಶು ಮಾಡಲು ಕುಲಪತಿ ಯಾವ ಹಾದಿಯನ್ನು ತುಳಿಯುತ್ತಿದ್ದಾರೆ ಎನ್ನುವುದಕ್ಕೆ ಅವರ ಈ ಕ್ರಮಗಳು ಸಾಕ್ಷಿಯಾಗಿವೆ ಎಂದು ಎಸ್.ಎಫ್.ಐ ಹೇಳಿದೆ.

ಕುಲಪತಿ ಮೇಲೆ ವಿದ್ಯಾರ್ಥಿ ಸಂಘ ಗಂಭೀರವಾದ ಭ್ರಷ್ಟಾಚಾರದ ಆರೋಪಗಳನ್ನು ಮಾಡಿರುವ ಹಿನ್ನೆಲೆಯಲ್ಲಿ ಸಂಘದ ವಿರುದ್ಧ ಕುಲಪತಿ ಇಂಥ ಕ್ರಮಗಳನ್ನು ಕೈಗೊಂಡಿದ್ದಾರೆ.

ಕುಲಪತಿ ವಿರುದ್ಧ ಅಕಾಡೆಮಿಕ್ ಸಮುದಾಯ ನಡೆಸಿರುವ ಹೋರಾಟಕ್ಕೆ ಎಸ್.ಎಫ್.ಐ ಕೇಂದ್ರ ಸಮಿತಿ ತನ್ನ ಪೂರ್ಣ ಬೆಂಬಲವನ್ನು ವ್ಯಕ್ತ ಪಡಿಸಿದೆ.

ಸಿಪಿಐ(ಎಂ)ಖಂಡನೆ

ಜೆಎನ್‌ಯು ವಿದ್ಯಾರ್ಥಿ ಸಂಘದ ಪ್ರಪ್ರಥಮ ದಲಿತ ಅಧ್ಯಕ್ಷ ಬಟ್ಟಿಲಾಲ್ ಬೈರ್ ವಾ ಮತ್ತು ಎಸ್.ಎಫ್.ಐ ಜೆಎನ್‌ಯು ಘಟಕದ ಕಾರ್ಯದರ್ಶಿ ಮನೋಜ್ ಮೇಲೆ ಕುಲಪತಿ ಕೈಗೊಂಡ ಸೇಡಿನ ಹಾಗೂ ದುರುದ್ದೇಶದ ಕ್ರಮಕ್ಕೆ ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿ ಆಕ್ರೋಶ ವ್ಯಕ್ತಪಡಿಸಿದೆ.

ಜೆಎನ್‌ಯುನಂಥ ಪ್ರತಿಷ್ಠಿತ ವಿಶ್ವವಿದ್ಯಾಲಯದ ಕುಲಪತಿ ಇಂಥ ಕೀಳು ಮಟ್ಟದ ಜಾತಿ ರಾಜಕೀಯಕ್ಕೆ ಇಳಿಯಬಾರದಿತ್ತು ಎಂದು ರಾಜ್ಯ ಸಮಿತಿ ಹೇಳಿದೆ. ಇದರಿಂದ ವಿ.ವಿಯ ಜನ ತಾಂತ್ರಿಕ ಪರಂಪರೆಗೆ ಧಕ್ಕೆಯುಂಟಾಗಿದೆ ಎಂದು ಅದು ಖೇದ ವ್ಯಕ್ತಪಡಿಸಿದೆ.

12 ನೇ ಲೋಕಸಭೆ

ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಸಿಪಿಐ(ಎಂ) ಅಭ್ಯರ್ಥಿಗಳ ಪಟ್ಟಿ

	ಕೇರಳ:	
1.	ಕಾಸರಗೋಡು	ಟಿ. ಗೋವಿಂದನ್*
2.	ಬಡಗರ	ಪ್ರೊ.ಎಂ.ಕೆ.ಪ್ರೇಮಜಂ(ಮಹಿಳೆ)**
3.	ಮಂಜೇರಿ	ಸಲಾವುದ್ದೀನ್
4.	ಒಟ್ಟಪಾಲಂ (ಪರಿಶಿಷ್ಟಮೀಸಲು)	ಎ. ಅಜಯಕುಮಾರ್*
5.	ಪಾಲ್ಘಾಟ್	ಎನ್.ಎನ್.ಕೃಷ್ಣದಾಸ್*
6.	ಮುಕುಂದಪುರಂ	ಪಿ.ಗೋವಿಂದ ಪಿಳ್ಳೆ.
7.	ಕೊಟ್ಟಾಯಂ	ಕೆ. ಸುರೇಶ್ ಕುರೂಪ್
8.	ಅಲೆಪ್ಪಿ	ಸಿ.ಎಸ್.ಸುಜಾತ (ಮಹಿಳೆ)
9.	ಚಿರಯಿಂಕಿಲ್	ವರ್ಕಳ ರಾಧಾಕೃಷ್ಣನ್*
10.	ಎರ್ನಾಕುಲಂ	ಸೆಬಾಸ್ಟಿನ್ ಪಾಲ್ (ಬೆಂಬಲಿತ ಪಕ್ಷೇತರ)
11.	ಮಾವೆಳ್ಳಿಕರ	ಪ್ರೊ. ನೈನಾನ್ ಕೋಶಿ (ಬೆಂಬಲಿತ ಪಕ್ಷೇತರ)
	ಅಸ್ಸಾಂ	
12.	ಬಾರ್ಪೇಟ	ಉದ್ಧಬ್ ಬರ್ಮನ್*
13.	ಸಿಲ್ಚಾರ್	ನೂರುಲ್ ಹುಡಾ
	ತ್ರಿಪುರಾ	
14.	ಪಶ್ಚಿಮ ತ್ರಿಪುರಾ	ಸಮರ ಚೌಧರಿ**
15.	ಪೂರ್ವ ತ್ರಿಪುರಾ	ಬಜುಬಾನ್ ರಿಯಾಂಗ್*
	ಹರ್ಯಾಣ	
16.	ಹಿಸ್ಸಾರ್	ಪೂತ್‌ಸಿಂಗ್ ಫೆವೂಕಂಡ
	ಪಶ್ಚಿಮ ಬಂಗಾಳ	
17.	ಜಲಪಾಯ್ ಗುರಿ	ಮಿನತಿ ಸೇನ್ (ಮಹಿಳೆ)**
18.	ಡಾರ್ಜಿಲಿಂಗ್	ಆನಂದ ಪಾಠಕ್*
19.	ರಾಯ್ ಗಂಜ್	ಸುಬ್ರತಾ ಮುಖರ್ಜಿ*
20.	ಮಾಲ್ಡಾ	ಜೀವನ್ ಮೈತ್ರಾ
21.	ಜಂಗಿಪುರ	ಅಬ್ದುಲ್ ಹಸ್ನತ್ ಖಾನ್
22.	ಮುರ್ಶಿದಾಬಾದ್	ಮೈನುಲ್ ಹಸನ್**
23.	ಕೃಷ್ಣನಗರ್	ಅಜಯ ಮುಖರ್ಜಿ*
24.	ನಬದ್ವೀಪ (ಪರಿಶಿಷ್ಟ)	ಅಸೀಂ ಬಾಲಾ*
25.	ಮಥುರಾಪುರ(ಪರಿಶಿಷ್ಟ)	ರಾಧಿಕಾರಂಜನ್ ಪ್ರಾಮಾಣಿಕ್*
26.	ಡೈಮಂಡ್ ಹಾರ್ಬರ್	ಶ್ರಮಿಕ್ ಲಾಹಿರಿ*
27.	ಜಾಧವ್‌ಪುರ	ಮಾಲಿನಿ ಭಟ್ಟಾಚಾರ್ಯ(ಮಹಿಳೆ)
28.	ಬರಾಕ್ ಪುರ	ತರಿತ ತೋಪದಾರ್*
29.	ಡಂಡಂ	ನಿರ್ಮಲ್ ಚಟರ್ಜಿ*
30.	ಕಲ್ಕತ್ತಾ ಈಶಾನ್ಯ	ಪ್ರಶಾಂತ ಚಟರ್ಜಿ
31.	ಕಲ್ಕತ್ತಾ ದಕ್ಷಿಣ	ಪ್ರಶಾಂತ ಸೂರ್
32.	ಹೌರಾ	ಸ್ವದೇಶ ಚಕ್ರವರ್ತಿ
33.	ಉಲುಬೆರಿಯಾ	ಹನನ್ ಮೊಲ್ಲಾ*
34.	ಸೆರಾಂಪುರ	ಸುದರ್ಶನ ರಾಯ್ ಚೌಧರಿ
35.	ಹೂಗ್ಲಿ	ರೂಪಚಂದ್ ಪಾಲ್*
36.	ಅರಾಮ್‌ಬಗ್	ಅನಿಲ್ ಬಸು
37.	ತಮುಲ್ಲುಕ್	ಲಕ್ಷ್ಮಣ್ ಸೇಠ್
38.	ಕೊಂಟಯ್	ಸುಧೀರ್ ಗಿರಿ*
39.	ಝರಗ್ರಾಮ್(ಪ.ಪಂಗಡ)	ರೂಪಚಂದ್ ಮುಖರ್ಜಿ*
40.	ಬಂಕುರಾ	ಬಸುದೇವ ಆಚಾರ್ಯ*
41.	ದುರ್ಗಾಪುರ(ಎಸ್ ಸಿ)	ಸುನೀಲ್ ಖಾನ್
42.	ವಿಷ್ಣುಪುರ(ಎಸ್.ಟಿ)	ಸಂಧ್ಯಾ ಚೌಧರಿ (ಮಹಿಳೆ)*
43.	ಅಸನ್ ಸೋಲ್	ವಿಕಾಸ್ ಚೌಧರಿ**
44.	ಬರ್ದ್ವಾನ್	ನಿಖಿಲ್ ಸುರ್*
45.	ಕಟ್ವಾ	ಮೆಹಬೂಬ್ ಝಹೆದಿ*
46.	ಬೋಲ್‌ಪುರ	ಸೋಮನಾಥ ಚಟರ್ಜಿ*
47.	ವೀರ್‌ಭೂಮ್(ಎಸ್.ಸಿ)	ರಾಮಚಂದ್ರ ದೋಮೆ*
48.	ಅಂಡಮಾನ್ ನಿಕೋಬಾರ್	ತಪನ್ ಕುಮಾರ್ ಬೆಪಾರಿ
	ಆಂಧ್ರಪ್ರದೇಶ	
49.	ಖಮ್ಮಾಮ್	ಟಿ.ವೀರಭದ್ರಂ (ಹಾಲಿ ಸಂಸದ್)*
50.	ಮಿರ್ಯಾಲಗುಡಂ	ಸೀತಾರಾಮುಲು
51.	ನೆಲ್ಲೂರು(ಎಸ್.ಸಿ)	ಪಿ.ಸ್ವರ್ಣಲತಾ (ಮಹಿಳೆ)
	ಪಂಜಾಬ್	
52.	ಸಂಗ್ರೂರು	ಚಾಂದ್ ಸಿಂಗ್ ಚೋಪ್ರಾ.
53.	ಫಿಲ್ಲೌರ್ (ಎಸ್.ಸಿ)	ಡಾ. ಹರ್ಜಿಂದರ್ ಜಬು
54.	ಹೋಷಿಯಾರ್ ಪುರ	ರಘುನಾಥ್ ಸಿಂಗ್
	ರಾಜಾಸ್ಥಾನ	
55.	ಬಿಕಾನೇರ್	ಶಿವೋಪತ್ ಸಿಂಗ್(ಮಾಜಿ ಸಾಂಸದ)
56.	ಸಿಕಾರ್	ಅಮ್ರರಾಮ(ಹಾಲಿ ಶಾಸಕ)
	ಮಧ್ಯಪ್ರದೇಶ	
57.	ರೇವಾ	ರಾಮಲಖನ್ ಶರ್ಮಾ (ಹಾಲಿಶಾಸಕ)

ಸೂಚನೆ:
* ಹಾಲಿ ಗೆದ್ದಿರುವ ಸ್ಥಾನ
** ಹಾಲಿ ಸ್ಥಾನ ಆದರೆ ಹೊಸ ಅಭ್ಯರ್ಥಿ.

(ಮುಂದುವರಿಯುವುದು)

ಚುನಾವಣೆ ನೋಟ

ಎಲ್ಲರ ಮನೆ ದೋಸೆ ತೂತೇ............

ಲೋಕಸಭೆಗೆ ನಡೆಯಲಿರುವ ಚುನಾವಣೆ ಹಿನ್ನೆಲೆಯಲ್ಲಿ ಅಭ್ಯರ್ಥಿಗಳ ಆಯ್ಕೆ ಇವೇ ಮೊದಲಾದ ವಿಚಾರಗಳಲ್ಲಿ ಬಂಡವಾಳಶಾಹಿ ವರ್ಗವನ್ನು ಪ್ರತಿನಿಧಿಸುವ ಎಲ್ಲಾ ಪಕ್ಷಗಳಲ್ಲಿ ಭಿನ್ನಮತ, ವೈಮನಸ್ಯ ಕಂಡುಬಂದಿದೆ. ಇದು ಬೀದಿ ಜಗಳ, ರಂಪದ ರೂಪವನ್ನು ಪಡೆದಿದೆ. ಕಾಂಗ್ರೆಸ್, ಬಿಜೆಪಿ, ಬಿಎಸ್‌ಪಿ.... ಹೀಗೆ ಪಕ್ಷ ಬೇದ ಇಲ್ಲಿ ಇಲ್ಲವೇ ಇಲ್ಲ. 'ಎಲ್ಲರ ಮನೆಯ ದೋಸೆ ತೂತೇ.....' ಎಂಬ ನಾಣ್ಣುಡಿಯನ್ನು ನೆನಪಿಸುವ ಈ ವಿದ್ಯಮಾನ 'ಐಕ್ಯರಂಗ' ಕ್ಕೆ ಲಭ್ಯವಾದ ಮಾಹಿತಿಗಳನ್ನು ತಿಳಿದುಕೊಳ್ಳೋಣ, ಬನ್ನಿ.....

ಕಾಂಗ್ರೆಸ್ ಕಚೇರಿಗೆ ಬೆಂಕಿ

ಹೈದರಾಬಾದ್ ವರದಿ: ಕಾಂಗ್ರೆಸ್ ಪಕ್ಷದ ಕಚೇರಿಗೆ ಬೆಂಕಿ ಎಂದಾಕ್ಷಣ ಇದೇನೋ ಅವಘಡ ಅಥವಾ ರಾಜಕೀಯ ವೈರಿಗಳ ಕೃತ್ಯ ಇರಬಹುದು ಎಂಬ ಭಾವನೆ ಬರುವುದು ಸಹಜ. ಆದರೆ ಆಂಧ್ರಪ್ರದೇಶಕ್ಕೆ ಸಂಬಂಧಿಸಿದ ಈ ಸುದ್ದಿಗೆ ಸಂಬಂಧಿಸಿ ಈ ಎರಡೂ ಊಹೆಗಳು ತಪ್ಪು.

ಹಾಗಾದರೆ ಇನ್ನೇನು ? ಸ್ವತಃ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರೇ ತಮ್ಮ ಪಕ್ಷದ ಕಚೇರಿಗೆ ಕೊಳ್ಳಿಯಿಟ್ಟ ಪ್ರಥಮ ಪ್ರಕರಣ ಇದು. ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಸುಧಾಕರ ರೆಡ್ಡಿಗೆ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಕೊಡಲಿಲ್ಲವೆಂದು ಕುಪಿತರಾದ ಯುವ ಕಾಂಗ್ರೆಸ್ ಕಾರ್ಯಕರ್ತರು ಜನವರಿ ೨೫ ರಂದು ಪಕ್ಷದ ಕಚೇರಿಯ ಪೀಠೋಪಕರಣಗಳಿಗೆ ಬೆಂಕಿ ಹಾಕಿ ದೊಂಬಿ ನಡೆಸಿದರು.

ಯುವ ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ಕಚೇರಿಯಾದ 'ಗಾಂಧೀ ಭವನ'ದ ಬಳಿ ಬೆಳಿಗ್ಗೆಯಿಂದಲೇ ಜಮಾಯಿಸಿ ಪಕ್ಷದ ವರಿಷ್ಠರ ವಿರುದ್ಧ ಘೋಷಣೆಗಳನ್ನು ಕೂಗಿದರು. ಅನಂತರ ಕಚೇರಿಯನ್ನು ಪ್ರವೇಶಿಸಿ ಪೀಠೋಪಕರಣ ಹಾಗೂ ಕಾಗದಪತ್ರಗಳಿಗೆ ಬೆಂಕಿಯಿಟ್ಟರು. ಅದಾದ ಮೇಲೆ ಹೊರಬಂದ ಕಾರ್ಯಕರ್ತರು ಮಾಜಿ ಮಂತ್ರಿ ಚಂದ್ರಶೇಖರ ಅವರ ಕಾರಿಗೆ ಬೆಂಕಿ ಹಾಕಿದರು.

ಖಮ್ಮಾವಾರ್ ಕ್ಷೇತ್ರದಿಂದ ಸ್ಪರ್ಧಿಸಲು ಸುಧಾಕರ ರೆಡ್ಡಿ ಬದಲು ರಾಜ್ಯದ ಮಾಜಿ ಮುಖ್ಯಮಂತ್ರಿ ಭಾಸ್ಕರ ರೆಡ್ಡಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ. ಹಾಗಂತ ಸುಧಾಕರ್‌ಗೆ ಟಿಕೆಟ್ ಕೊಟ್ಟಿಲ್ಲ ಎಂದಲ್ಲ, ಹೈದರಾಬಾದ್ ಟಿಕೆಟ್ ಅವರಿಗೆ ಸಿಕ್ಕಿದೆ. ಆದರೆ ತಾನು ಹೈದರಾಬಾದಿನಿಂದ ಸ್ಪರ್ಧಿಸುವುದಿಲ್ಲ ಎಂದು ಸುಧಾಕರ ರೆಡ್ಡಿ ಹೇಳಿದ್ದಾರೆ. ಹೈದರಾಬಾದಿನಲ್ಲಿ ಗಾಂಧೀ ಭವನಕ್ಕೆ ಬೆಂಕಿಯಿಟ್ಟ ಪ್ರಕರಣ ಕಾಂಗ್ರೆಸ್, ಮುಖ್ಯವಾಗಿ ಯುವಕಾಂಗ್ರೆಸ್ 'ಸಂಸ್ಕೃತಿಯ' ಮುಂದುವರಿಕೆಯ ಭಾಗವಾಗಿದೆ ಎಂದು ನಿಸ್ಸಂಕೋಚವಾಗಿ ಹೇಳಬಹುದು.

ಟಿಕೆಟ್ ಹಂಚಿಕೆ ಮತ್ತು ಹಣದ ಥೈಲಿ

ಜೈಪುರ: ಪಕ್ಷದ ಟಿಕೆಟ್‌ಗಳನ್ನು ಹಂಚಲು ನಾಯಕರು ಭಾರೀ ಮೊತ್ತದ ಹಣವನ್ನು ಪಡೆದಿದ್ದಾರೆ... ಬಹುಷಃ ಕಾಂಗ್ರೆಸ್ ಗೆ ಸಂಬಂಧಿಸಿ ಈ ಆರೋಪ ಮಾಡಿದರೆ ಅದು ಅಷ್ಟು ವಿಶೇಷ ಎನಿಸುತ್ತಿರಲಿಲ್ಲ. ಆದರೆ ಈ ಅಪಾದನೆ ಬಂದಿರುವುದು ಶಿಸ್ತುಬದ್ಧ, ತತ್ವಬದ್ಧ ಎಂದು ಬೊಗಳೆ ಕೊಚ್ಚುತ್ತಲೇ ('ಕೊಚ್ಚೆ' ತಿನ್ನುತ್ತಿರುವ) ಭಾರತೀಯ ಜನತಾ ಪಕ್ಷದ ವಿರುದ್ಧ. ಅದೂ ಸ್ವತಃ ಆ ಪಕ್ಷದವರಿಂದಲೇ.

ಬಿಜೆಪಿ ಅಧಿಕಾರದಲ್ಲಿರುವ ರಾಜಸ್ತಾನದಿಂದ ಬಂದಿರುವ ವರದಿಯಿದು. ಕನಿಷ್ಠ ಅರ್ಧ ಡಜನ್ ಲೋಕಸಭಾ ಸ್ಥಾನಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ವಿರುದ್ಧ ಕಾರ್ಯಕರ್ತರಲ್ಲಿ ಬೇಗುದಿಯಿದ್ದು ಅವರಿಗೆ ಟಿಕೆಟ್ ನೀಡಿದ್ದನ್ನು ಪ್ರತಿಭಟಿಸಿ ಬೀದಿಗೆ ಇಳಿದಿದ್ದಾರೆ. ಆಯ್ಕೆ ಮಾಡಿರುವ ಹುರಿಯಾಳುಗಳನ್ನು ಬದಲಾಯಿಸುವಂತೆ ಒತ್ತಡ ಹೇರುತ್ತಿದ್ದಾರೆ.

ಸವಾಯಿ ಮಾಧೋಪುರ (ಮೀಸಲು) ಕ್ಷೇತ್ರದಲ್ಲಿ ರಮೇಶ್ ಚಾಂದ್ ಮೀನಾರನ್ನು ಕಣಕ್ಕಿಳಿಸಿರುವುದನ್ನು ವಿರೋಧಿಸಲು ನೂರಾರು ಬಿಜೆಪಿ ಕಾರ್ಯಕರ್ತರು ಜೈಪುರದಲ್ಲಿರುವ ಪಕ್ಷದ ರಾಜ್ಯ ಕೇಂದ್ರ ಕಚೇರಿ ಬಳಿ ಜಮಾಯಿಸಿದರು. ಅವರು ರಸ್ತೆ ಸಂಚಾರಕ್ಕೆ ಅಡ್ಡಿಯುಂಟುಮಾಡಿದರು. ಇನ್ನೂ ನೂರಾರು ಜನರು ಟ್ರಕ್ ಮತ್ತಿತರ ವಾಹನಗಳಲ್ಲಿ ಬರುತ್ತಿದ್ದು ಅವರನ್ನು ಪೋಲೀಸರು ಬಂಧಿಸುತ್ತಿದ್ದಾರೆ ಎಂದು ಪ್ರಧಾನರೊಬ್ಬರು ಆಪಾದಿಸಿದ್ದಾರೆ!

ರಮೇಶ್ ಚಾಂದ್ ಮೀನಾರ್ ಗೆ ಟಿಕೆಟ್ ನೀಡಿದ್ದನ್ನು ವಿರೋಧಿಸುತ್ತಿರುವವರಿಗೆ 'ನಾಯಕತ್ವ' ಕೊಟ್ಟಿರುವವರು ಅದೇ ಕ್ಷೇತ್ರದ ಮಾಜಿ ಸಂಸತ್ ಸದಸ್ಯರಾದ ಡಾ. ಕಿಶೋರಿ ಲಾಲ್ ಮೀನಾ ಮತ್ತು ಕುಂಜಿಲಾಲ್ ಮೀನಾ. ತಮಾಷೆಯೆಂದರೆ ಇವರಿಬ್ಬರು ಕೂಡಾ ಈ ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ!

ಬಹುಶಃ ಈ ಇಬ್ಬರು ಮೀನಾಗಳಲ್ಲಿ ಯಾರೊಬ್ಬರಿಗಾದರೂ ಟಿಕೆಟ್ ಸಿಕ್ಕರೂ ಇನ್ನೊಬ್ಬರಲ್ಲಿ ಅತೃಪ್ತಿ ಇದ್ದೇ ಇರುತ್ತದೆ ! ಆಗ...... ಅವರ ಕಾಲು ಇವರು ಎಳೆಯುವುದು, ಇವರ ಕಾಲು ಅವರು ಎಳೆಯುವುದು..... ಈ ಆಟ ಇಲ್ಲಿ ಮಾಮೂಲು. ಹಾಂ, ಅಂದ ಹಾಗೆ ಐದಾರು ಕ್ಷೇತ್ರಗಳಲ್ಲಿ ಟಿಕೆಟ್ ನೀಡಲು ಪಕ್ಷದ ನಾಯಕರು ತುಂಬಾ ಹಣ ಪಡೆದಿದ್ದಾರೆ ಎಂದು ಪ್ರತಿಭಟನಕಾರರು ಆಪಾದಿಸಿದ್ದಾರೆ.

ರಾಜಸ್ತಾನದಲ್ಲಿ ಬಿಜೆಪಿ ಬಂಡಾಯದ ಇನ್ನೂ ಒಂದೆರಡು ಪ್ರಕರಣಗಳನ್ನು ಗಮನಿಸಿ.

ಆಳ್ವಾರ್ ಕ್ಷೇತ್ರದಲ್ಲಿ ಜಸ್ವಂತ್ ಯಾದವ್‌ರನ್ನು ಅಭ್ಯರ್ಥಿಯಾಗಿ ಆಯ್ಕೆಮಾಡಿರುವುದನ್ನು ಪ್ರತಿಭಟಿಸಿ ತಾನು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಸಂಸತ್ ಸದಸ್ಯೆ ಮಹೇಂದ್ರ ಕುಮಾರಿ ಘೋಷಿಸಿದ್ದಾರೆ.

ರಾಜ್ಯದ ಪಶುಸಂಗೋಪನೆ ಖಾತೆ ಮಂತ್ರಿ ಜಸ್ವಂತ್ ಸಿಂಗ್ ವೈಷ್ಣೋ ದೇವಿ ಅವರನ್ನು ಜೋಧ್‌ಪುರದಿಂದ ಕಣಕ್ಕಿಳಿಸುವುದಕ್ಕೆ ಬಿಜೆಪಿ ಕಾರ್ಯಕರ್ತರಲ್ಲಿ ಭಾರೀ ಅತೃಪ್ತಿಯಿದೆ. ಅಭ್ಯರ್ಥಿಯನ್ನು ಬದಲಾಯಿಸದಿದ್ದರೆ ಚುನಾವಣೆಯನ್ನೇ ಬಹಿಷ್ಕರಿಸುವುದಾಗಿ ಅನೇಕ ಬೆಂಬಲಿಗರು ಹೇಳಿದ್ದಾರೆ. ರಾಜ್ಯ ವಿಧಾನಸಭೆಯಲ್ಲಿ ಪಕ್ಷೇತರ ಶಾಸಕನಾಗಿದ್ದು ಸಾರಿಗೆ ಮಂತ್ರಿಯಾಗಿರುವ ರೋಹಿತೇಶ ಕುಮಾರ ಶರ್ಮಾರನ್ನು ದೌಸಾ ಕ್ಷೇತ್ರದಲ್ಲಿ ಅಭ್ಯರ್ಥಿ ಮಾಡಿರುವುದಕ್ಕೂ ಕಾರ್ಯಕರ್ತರಲ್ಲಿ ಆಕ್ರೋಶ ಭುಗಿಲೆದ್ದಿದೆ.

ಬಿಎಸ್‌ಪಿಯಲ್ಲೂ ಅಸಮಾಧಾನದ ಹೊಗೆ

ಲಖನೌ: ತಾನೊಂದೇ ದೇಶದ ದಲಿತರ ಸಂರಕ್ಷಕ ಎಂದು ಡಂಗುರ ಸಾರಿಸುತ್ತಾ ಮನುವಾದಿ-ಕೋಮುವಾದಿಗಳೊಂದಿಗೆ ಕೈಜೋಡಿಸುತ್ತಾ ಅಧಿಕಾರಕ್ಕಾಗಿ ಕುಟಿಲ ರಾಜಕೀಯ ಮಾಡುತ್ತಿರುವ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಕೂಡ ಆಂತರಿಕ ಅತೃಪ್ತಿಯಿಂದ ನಲುಗುತ್ತಿದೆ.

ಮೇಲ್ಜಾತಿಯ ಜನರನ್ನು, ಅದರಲ್ಲೂ ವಿಶೇಷವಾಗಿ ಯಾವುದೇ ಬೆಂಬಲವಿಲ್ಲದ ಅಥವಾ ಅಲ್ಪಸ್ವಲ್ಪ ಮಾತ್ರ ಬೆಂಬಲವಿರುವ, ಶ್ರೀಮಂತ ಕೈಗಾರಿಕೋದ್ಯಮಿಗಳನ್ನು ಚುನಾವಣೆಯಲ್ಲಿ ನಿಲ್ಲಿಸಲು ಬಿಎಸ್‌ಪಿ ನಾಯಕತ್ವ ನಿರ್ಧರಿಸಿರುವುದಕ್ಕೆ ಕಾರ್ಯಕರ್ತರು ಹಾಗೂ ಸ್ಥಳೀಯ ನಾಯಕರಲ್ಲಿ ಭಾರೀ ಅತೃಪ್ತಿ ಉಂಟಾಗಿದೆ. ಮೀರತ್-ಮವಾನಾ ಲೋಕಸಭೆ ಕ್ಷೇತ್ರದಲ್ಲಿ ಸ್ಪರ್ಧಿಸಲು ಮಾಜಿ ಮೇಯರ್ ಅರುಣ್ ಜೈನ್‌ಗೆ ಬಿಎಸ್‌ಪಿ ಟಿಕೆಟ್ ನೀಡಿದೆ. ಇದನ್ನು ವಿರೋಧಿಸಿ ಮಾಜಿ ಶಾಸಕ ಹಾಗೂ ಪಕ್ಷದ ಪ್ರಮುಖ ನಾಯಕ ಚರಣ್ ಸಿಂಗ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೇ ರಾಜೀನಾಮೆ ನೀಡಿದ್ದಾರೆ. ಅವರ ಅನೇಕ ಬೆಂಬಲಿಗರೂ ಬಿಎಸ್‌ಪಿ ಬಿಟ್ಟಿದ್ದಾರೆ.

ಪಕ್ಷದ ನಿಧಿಗೆ ಭಾರೀ ಮೊತ್ತದ ಹಣ ಕೊಡುವವರಿಗೆ ಪಕ್ಷದ ಟಿಕೆಟ್‌ಗಳನ್ನು ಹಸ್ತಾಂತರಿಸಲಾಗುತ್ತಿದೆ ಎಂದು ಚರಣ್ ಸಿಂಗ್ ಬಿಎಸ್‌ಪಿ ಅಧ್ಯಕ್ಷ ಕಾನ್ಶಿರಾಂ ಮತ್ತು ಉಪಾಧ್ಯಕ್ಷೆ ಮಾಯಾವತಿ ವಿರುದ್ಧ ಆರೋಪ ಮಾಡಿದ್ದಾರೆ. ವಾಣಿಜ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಭಾರೀ ದುಡ್ಡು ಮಾಡುತ್ತಿರುವ ಕುಳಗಳಾದ ಜೈನ್‌ಗೆ ರಾಜಕೀಯ ಅಥವಾ ಸಮಾಜಸೇವೆಯ ಗಂಧಗಾಳಿಯೇ ಇಲ್ಲ. ಅಂಥವರಿಗೆ ಲೋಕಸಭೆಗೆ ಸ್ಪರ್ಧಿಸುವ ಅರ್ಹತೆಯೇ ಇಲ್ಲ ಎಂದು ಸಿಂಗ್ ಹೇಳಿದ್ದಾರೆ.

ಬಿಎಸ್‌ಪಿಯನ್ನು ಕಟ್ಟಿಬೆಳೆಸಲು ಶ್ರಮಿಸಿದವರನ್ನು ಕಡೆಗಣಿಸಿ ಯಾರ್ಯಾರಿಗೋ ಸ್ಪರ್ಧಿಸಲು ಅವಕಾಶ ನೀಡಲಾಗುತ್ತಿದೆ ಎಂದು ಕಾರ್ಯಕರ್ತರು ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಲೋಕಸಂಚಾರ

ಶರತ್ ಚಂದ್ರ

ಮಾಜಿ ದ.ಆಫ್ರಿಕಾ ಅಧ್ಯಕ್ಷ ಕೋರ್ಟಿನ ಮುಂದೆ

ದ.ಆಫ್ರಿಕಾದ ಮಾಜಿ ಅಧ್ಯಕ್ಷ ಬೋತಾ ಪ್ರಾದೇಶಿಕ ಕೋರ್ಟಿನ ಮುಂದೆ ಹಾಜರಾಗಬೇಕಾಗಿದೆ. ವರ್ಣಭೇದ ಆಳ್ವಿಕೆ ಕಾಲದಲ್ಲಿ SSC (State Security Council) ಯ ಮೂಲಕ ವಿರೋಧಿಗಳನ್ನು ಕ್ರೂರರೀತಿಯಲ್ಲಿ ನಡೆಸಿಕೊಂಡ, ಮುಗಿಸಿದ ರೀತಿಯಲ್ಲಿ, ಬೋತಾರ ಪಾತ್ರದ ಬಗ್ಗೆ ವಿಚಾರಿಸಲು ಅವರಿಗೆ TRC (Truth and Reconcilation Commission ವರ್ಣಭೇದ ಆಳ್ವಿಕೆ ಕಾಲದ ಅಪರಾಧಗಳ ಬಗ್ಗೆ ವಿಚಾರಣೆಗೆ ಇರುವ ಆಯೋಗ) ಸಮನ್ಸ್ ಕೊಟ್ಟಿತ್ತು. ಬೋತಾ ಅದನ್ನು ಮನ್ನಿಸದ್ದರಿಂದ ಅವರ ಮೇಲೆ ಪ್ರಾದೇಶಿಕ ಕೋರ್ಟಿನಲ್ಲಿ ಕೇಸು ಹಾಕಲಾಗಿದೆ. TRC ಒಂದು ಸರ್ಕಸ್ ಎಂದು ಗೇಲಿ ಮಾಡಿದ ಈ ಮಹಾನು ಭಾವ ವರ್ಣಭೇದ ಆಳ್ವಿಕೆ ಕಾಲದ ಎಲ್ಲಾ ಪಾತಕಗಳಿಗೆ ಮೂಲಕಾರಣ ಪುರುಷ. ಪ್ರಾದೇಶಿಕ ಕೋರ್ಟಿನ ಮುಂದೆಯೂ ವಿಳಂಬ ನೀತಿ ಮೂಲಕ ಕೋರ್ಟಿನ ಆಗು ಹೋಗುಗಳು ನಡೆಯದಂತೆ ಪ್ರಯತ್ನಿಸಿದ ಬೋತಾನ ಸರ್ಕಸ್ , ಬಿಳಿಯರು ತಮ್ಮ ಸವಲತ್ತುಗಳನ್ನು ಸುಲಭ ವಾಗಿ, ಶಾಂತಿಯುತವಾಗಿ ಬಿಡಲು ತಯಾರಿಲ್ಲ ಎಂದು ಪುನಃ ತೋರಿಸಿಕೊಟ್ಟಿದೆ.

ಢಾಕಾದಲ್ಲಿ ತ್ರಿಪಕ್ಷೀಯ ಶೃಂಗಸಭೆ

ಢಾಕಾದಲ್ಲಿ ಇತ್ತೀಚೆಗೆ ಭಾರತ, ಪಾಕಿಸ್ತಾನ, ಬಾಂಗ್ಲಾದೇಶದ ಪ್ರಧಾನಿಗಳು ಭಾಗವಹಿಸಿದ ಮಹತ್ವಪೂರ್ಣ ತ್ರಿಪಕ್ಷೀಯ ಶೃಂಗಸಭೆ ನಡೆಯಿತು. ಬಾಂಗ್ಲಾದೇಶದ ಪ್ರಧಾನಿ ಹಸೀನಾರು ಕರೆದಿದ್ದ ಈ ಶೃಂಗ ಸಭೆಯಲ್ಲಿ ಈ ಮೂರು ದೇಶಗಳ ಸುಮಾರು 170 ವಾಣಿಜ್ಯೋದ್ಯಮಿಗಳು ಭಾಗವಹಿಸಿದ್ದು ವಿಶೇಷವಾಗಿತ್ತು. ಈ ಮೂರು ದೇಶಗಳ ನಡುವೆ ಕೈಗಾರಿಕಾ, ವಾಣಿಜ್ಯ ಸಂಬಂಧಗಳನ್ನು ಬಲಪಡಿಸುವ, ಸಹಕಾರ ಹೆಚ್ಚಿಸುವ ಬಗ್ಗೆ ಶೃಂಗಸಭೆ ಚರ್ಚಿಸಿತು.

ಕ್ಲಿಂಟನ್ ರ ಲೈಂಗಿಕ ಹಗರಣಗಳು

ಅಮೆರಿಕದ ಅಧ್ಯಕ್ಷ ಕ್ಲಿಂಟನ್ ರ ವಿರುದ್ಧ ಪೌಲಾ ಜೋನ್ಸ್ ಎಂಬಾಕೆ ಲೈಂಗಿಕ ಉಪಟಳದ ಬಗ್ಗೆ ಹಾಕಿರುವ ಮೊಕದ್ದಮೆಯು ವಿಚಾರಣೆ ಮುಂದುವರಿಯುತ್ತಿದ್ದಂತೆ, ಕ್ಲಿಂಟನ್ ರ ಇನ್ನೂ ಹೆಚ್ಚಿನ ಇಂತಹ ಪ್ರಕರಣಗಳ ಬಗ್ಗೆ ದೂರುಗಳು ಬರಲಾರಂಭಿಸಿವೆ. ಕ್ಲಿಂಟನ್ ಈ ಮೊಕದ್ದಮೆಯಲ್ಲಿ ನೀಡಿದ ಹೇಳಿಕೆಗಳು ಹಗರಣಗಳ ತೀವ್ರತೆಯನ್ನ ಇನ್ನೂ ಹೆಚ್ಚಿಸಿದೆ. ಕ್ಲಿಂಟನ್‌ರ ಲೈಂಗಿಕ ಹಗರಣಗಳು ಎಷ್ಟು ತೀವ್ರವಾಗಿವೆ ಯೆಂದರೆ, ಅವರನ್ನು ಅಧ್ಯಕ್ಷ ಪದದಿಂದ ಕಿತ್ತು ಹಾಕುವ, ರಾಜೀನಾಮೆಗೆ ಒತ್ತಾಯಿಸುವವರೆಗೆ ಹೋಗಿದೆ. ಅಧ್ಯಕ್ಷ ಕ್ಲಿಂಟನ್ ಲೈಂಗಿಕ ಹಗರಣದ ಆಪಾದನೆ ಯಿಂದ ಆಂತರಿಕವಾಗಿ ಎದುರಿಸುತ್ತಿರುವ ಈ ರಾಜಕೀಯ ಬಿಕ್ಕಟ್ಟಿನಿಂದ ಪಾರಾಗಲು ಇರಾಕ್ ಮೇಲೆ ಮಿಲಿಟರಿ ದಾಳಿಗೆ ಆಜ್ಞೆ ಮಾಡ ಬಹುದೆಂದು ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ.

ಇರಾಕ್ ಮೇಲೆ ಅಮೆರಿಕನ್ ಆಕ್ರಮಣಕ್ಕೆ ಸಿದ್ಧತೆ

ಅಮೆರಿಕ ಇರಾಕ್ ಮೇಲೆ ಕೆಲವೇ ವಾರಗಳಲ್ಲಿ ಪುನಃ ಆಕ್ರಮಣ ನಡೆಸಲು ಸಿದ್ಧತೆ ನಡೆಸಿದೆ. ಇದಕ್ಕೆ ಅದು ಭದ್ರತಾ ಸಮಿತಿಯ ಅಸ್ತು ಪಡೆಯಲು ಪ್ರಯತ್ನಿಸುತ್ತಿದೆ. ಅದು ಸಾಧ್ಯವಾಗದಿದ್ದರೆ ಏಕಪಕ್ಷೀಯವಾಗಿ ಮಿಲಿಟರಿ ಕಾರ್ಯಾಚರಣೆ ಕೈಗೊಳ್ಳುವುದು ಎಂದು ವರದಿಯಾಗಿದೆ. ಅಧ್ಯಕ್ಷ ಕ್ಲಿಂಟನ್ ಲೈಂಗಿಕ ಹಗರಣದ ಆಪಾದನೆಯಿಂದ ಆಂತರಿಕವಾಗಿ ಎದುರಿಸುತ್ತಿರುವ ರಾಜಕೀಯ ಬಿಕ್ಕಟ್ಟಿನಿಂದ ಪಾರಾಗಲು ಇದು ಒಳ್ಳೆಯ ಉಪಾಯ ಎಂದು ಅವರ ಸಲಹಾಗಾರರು ಅಭಿಪ್ರಾಯಪಟ್ಟಿದ್ದಾರೆ ಎಂದೂ ವರದಿಯಾಗಿದೆ.

ಇರಾಕ್‌ನಲ್ಲಿ ವಿಶ್ವ ಸಂಸ್ಥೆಯ ಅಸ್ತ್ರ ಪರೀಕ್ಷಣಾ ತಂಡದ ನಾಯಕ ಬಟ್ಲರ್ ಪ್ರಧಾನ ಕಾರ್ಯದರ್ಶಿ ಗಳಿಗೆ ಸಲ್ಲಿಸಿದ ವರದಿಯಲ್ಲಿ, ಇರಾಕಿ ಸರ್ಕಾರದ ಅಸಹಕಾರದ ಬಗ್ಗೆ ದೂರಿದ್ದಾರೆ. ಕೆಲವು ಜಾಗಗಳಿಗೆ ಪ್ರವೇಶಕ್ಕೆ ನಿರ್ಬಂಧ , ಪರೀಕ್ಷಣಾ ಕೆಲಸ ಮುಗಿಸಲು ಕಾಲಾವಧಿಯ ನಿರ್ಧಾರಕ್ಕೆ ಒತ್ತಾಯ, ತಂಡದ ಪರೀಕ್ಷಣೆಗೆ ಒಳಪಡಿಸಲು ಇನ್ನು ಯಾವುದೇ ಹೊಸ ಜಾಗ ಇಲ್ಲ - ಇವು ಗಳಿಂದಾಗಿ ತಂಡ ತನ್ನ ಕೆಲಸ ಮುಂದುವರಿಸಲು ಸಾಧ್ಯವಾಗುತ್ತಿಲ್ಲ ಎಂದು ಬಟ್ಲರ್ ತಮ್ಮ ವರದಿಯಲ್ಲಿ ಹೇಳಿದ್ದಾರೆ. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಪ್ರಸಕ್ತ ಅಧ್ಯಕ್ಷರ ಜತೆ ಇರಾಕಿ ವಿದೇಶ ಮಂತ್ರಿಯ ಮಾತುಕತೆ ಗಳಲ್ಲೂ, ಇವೇ ವಿಷಯಗಳಲ್ಲದೆ, ತಂಡ ಅಮೇರಿಕನ್ನರಿಂದ ತುಂಬಿರುವುದು, ಪರೀಕ್ಷಣಾ ತಂಡದ ಕೆಲಸ ಅನಿರ್ದಿಷ್ಟ ವಾಗಿ ಮುಂದುವರಿಯುತ್ತಿರುವುದು, ಇರಾಕ್‌ನ ಯಾವುದೇ ಸಮಸ್ಯೆಗಳ ಬಗ್ಗೆ ನಿರ್ಲಕ್ಷ- ಇವುಗಳ ಬಗೆಗೂ ದೂರಿದ್ದಾರೆ. ಇರಾಕ್ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸಲ್ಲಿಸಿದ ಮನವಿ ಯಲ್ಲಿ ಪರೀಕ್ಷಣಾ ತಂಡದ ಕೆಲಸ ಸಾಕು ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಬಟ್ಲರ್ ವರದಿ ಹಾಗೂ ಇರಾಕಿ ಮನವಿಯ ಬಗ್ಗೆ ಈಗಾಗಲೇ ಅನೌಪಚಾರಿಕ ಚರ್ಚೆ ನಡೆದಿದ್ದು, ಮಾಮೂಲಿನಂತೆ, ಅಮೆರಿಕ ಮತ್ತು ಬ್ರಿಟನ್ ಮಿಲಿಟರಿ ಕಾರ್ಯಾಚರಣೆಗೆ ಒತ್ತಾಯಿಸುತ್ತಿದ್ದರೆ, ಇತರ ಸದಸ್ಯ ದೇಶಗಳು ವಿರೋಧಿಸುತ್ತಿವೆ. ಅಮೆರಿಕಕ್ಕೆ ಪರೀಕ್ಷಣಾ ತಂಡದ ಜತೆ ಇರಾಕಿನ ಅಸಹಕಾರ ನುಂಗಲಾರದ ತುತ್ತಾಗಿದೆ.

ಜಿಂಬಾಬ್ವೆಯಲ್ಲಿ ಗಲಭೆಗಳು - ತುರ್ತು ಪರಿಸ್ಥಿತಿ

ಜಿಂಬಾಬ್ವೆಯ ರಾಜಧಾನಿ ಹರಾರೆಯಲ್ಲಿ ಕಳೆದ ಎರಡು ತಿಂಗಳಲ್ಲಿ ಎರಡನೇ ಬಾರಿ, ಭಾರಿ ಪ್ರಮಾಣದ ಗಲಭೆಗಳು ನಡೆದಿವೆ. ಹೆಚ್ಚುತ್ತಿರುವ ಆಹಾರದ ಬೆಲೆಗಳು ಗಲಭೆಗಳ ಹಿಂದಿರುವ ಮೂಲ ಕಾರಣ ಎನ್ನಲಾಗಿದೆ. ಜಿಂಬಾಬ್ವೆಯ ಮುಖ್ಯ ಆಹಾರ ಜೋಳದ ಮಾರಾಟದ ಬೆಲೆ ಶೇಕಡಾ 82 ರಷ್ಟು ಏರಿದ್ದು ಕಳೆದ ವಾರದ ಗಲಭೆಗಳಿಗೆ ಕಾರಣ. ಸಾವಿರಾರು ಉದ್ರಿಕ್ತ ಬಡಜನರು ರಾಜಧಾನಿ ಹರಾರೆಯ ಅಂಗಡಿಗಳಿಗೆ ನುಗ್ಗಿ ಆಹಾರ ಪದಾರ್ಥಗಳನ್ನು ಲೂಟಿ ಮಾಡಿದರು. ವಾಹನಗಳು, ಅಂಗಡಿಗಳು, ಕಾರ್ಖಾನೆ ಗಳನ್ನು ನಾಶ ಮಾಡಲು ಪ್ರಯತ್ನಿಸಿದರು. ಉದ್ರಿಕ್ತ ಜನರನ್ನು ಹತೋಟಿಗೆ ತರಲು ಜಿಂಬಾಬ್ವೆ ಬ್ರಿಟನ್ ನಿಂದ ಸ್ವತಂತ್ರವಾದ 17 ವರ್ಷಗಳಲ್ಲಿ ಮೊದಲ ಬಾರಿಗೆ, ಮುಗಾಬೆ ಸರ್ಕಾರ ಸೈನ್ಯವನ್ನು ಬಳಸಬೇಕಾಯಿತು. ಕಂಡಲ್ಲಿ ಗುಂಡು ಆಜ್ಞೆ ಮಾಡಬೇಕಾ ಯಿತು. ಈ ಗಲಭೆಗಳ ನಂತರ ಜೋಳದ ಬೆಲೆ ಏರಿಕೆ ವಾಪಸು ತೆಗೆದುಕೊಂಡರೂ, ಸರ್ಕಾರ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದೆ.

1995ರಲ್ಲಿ ನಡೆದ ಪಾರ್ಲಿಮೆಂಟರಿ ಮತ್ತು 1996ರ ಅಧ್ಯಕ್ಷೀಯ ಚುನಾವಣೆಗಳಲ್ಲಿ, ಮುಗಾಬೆಯವರ ಪಕ್ಷ ZANU-PF ಮತ್ತು ಮುಗಾಬೆ ಅನುಕ್ರಮವಾಗಿ ಭಾರಿ ಬಹುಮತದಿಂದ ಗೆದ್ದಿದ್ದರೂ, ಆ ಮೇಲೆ ಹಲವು ಕಾರಣಗಳಿಂದ ಜನರ ಅತೃಪ್ತಿ ಬೆಳೆಯುತ್ತಿದೆ. ಜಿಂಬಾಬ್ವೆ ಬ್ರಿಟನ್ ನಿಂದ ಸ್ವತಂತ್ರವಾದ 17 ವರ್ಷಗಳ ನಂತರವೂ ಜನರ ಜೀವನ ಮಟ್ಟದಲ್ಲಿ ಗಮನಾರ್ಹ ಬದಲಾವಣೆ ಆಗಿಲ್ಲ. ಜಿಂಬಾಬ್ವೆಯ ಮೂಲಭೂತ ಸಮಸ್ಯೆಗಳಾದ ಭೂಸುಧಾರಣೆ ಇತ್ಯಾದಿಗಳ ಬಗ್ಗೆ ಏನೂ ಮಾಡದ ಸರ್ಕಾರ ಇತ್ತೀಚೆಗೆ ಐಎಂಎಫ್ ಒತ್ತಡಕ್ಕೆ ಬಲಿಬಿದ್ದು ಆಹಾರದ ಬೆಲೆಗಳ ಏರಿಕೆ, ತೆರಿಗೆಗಳ ಏರಿಕೆಗಳಿಂದಾಗಿ ಜನ ಕುಪಿತರಾಗಿದ್ದಾರೆ. ಮುಗಾಬೆ ವ್ಯಾಪಕವಾಗಿ ಕಳೆದುಕೊಳ್ಳುತ್ತಿದ್ದಾರೆ. ತೆರಿಗೆಗಳ ಏರಿಕೆಗಳ ವಿರುದ್ಧ ಇತ್ತೀಚೆಗೆ ಕೇಂದ್ರೀಯ ಟ್ರೇಡ್ ಯೂನಿಯನ್‌ಗಳು ಸಾರ್ವತ್ರಿಕ ಮುಷ್ಕರಕ್ಕೆ ಕರೆಕೊಟ್ಟಿವೆ. ಸರ್ಕಾರ ಮತ್ತು ಆಳುವ ಪಕ್ಷದ ಬಗ್ಗೆ ಅವಿಶ್ವಾಸ ಜನರಲ್ಲಿ ವ್ಯಾಪಕವಾಗಿದೆ.

ಜಿಂಬಾಬ್ವೆಯ ಆರ್ಥಿಕ ಸಮಸ್ಯೆ ಹಾಗೂ ದೇಶದ ಬಹುಸಂಖ್ಯಾತ ಕರಿಯರ ಆಕಾಂಕ್ಷೆ ಪೂರೈಸಲು ಬೇಕಾದ ಭೂಸುಧಾರಣೆ ಬಹಳ ವಿಳಂಬವಾಗಿ ಇತ್ತೀಚೆಗೆ ತರಲು ಪ್ರಯತ್ನಿಸಿದರೂ, ಅದರಲ್ಲೂ ಬಹುಸಂಖ್ಯಾತ ಜನರನ್ನು ಆಣಿ ನೆರೆಸದೆ ಹಿಂಜರಿತ ಉಂಟಾಗಿದೆ. ಕೇವಲ ಎರಡು ಶೇಕಡಾ ಜನ ದೇಶದ ಮೂರನೇ ಎರಡರಷ್ಟು ಭೂಮಿಯ ಒಡೆತನ ಹೊಂದಿರುವ ಜಿಂಬಾಬ್ವೆಯಲ್ಲಿ ಭೂಸುಧಾರಣೆಯ ತುರ್ತು ಅಗತ್ಯದ ಬಗ್ಗೆ ಯಾವುದೇ ಅನುಮಾನವಿಲ್ಲ. 1500 ದೊಡ್ಡ ಎಸ್ಟೇಟ್(ಸುಮಾರು 12 ದಶಲಕ್ಷ ಎಕರೆ)ಗಳನ್ನು ವಹಿಸಿಕೊಂಡು, ಅದನ್ನು ಭೂಹೀನರಿಗೆ ಹಂಚುವ ಮುಗಾಬೆ ಸರ್ಕಾರದ ಇತ್ತೀಚಿನ ಕ್ರಮಕ್ಕೆ ವ್ಯಾಪಕವಾಗಿ ಆಣಿನೆರೆಸಲು ವಿಫಲವಾಗಿದೆ. ಹಿಂದೆ ಭೂಸುಧಾರಣೆಯ ಬಗ್ಗೆ ಅಸಡ್ಡೆ, ಸರ್ಕಾರ ವಹಿಸಿಕೊಂಡ ಭೂಹಂಚಿಕೆ ಯಲ್ಲಿ ಲೋಪದೋಷ, ಈಗ ಇದು ಕಣ್ಣೊರೆಸುವ ಕ್ರಮ ಎಂಬ ಅವಿಶ್ವಾಸ - ಇವೆಲ್ಲದರಿಂದ ಉಂಟಾಗಿರುವ ಕರಿಯರ ನಿರ್ಲಕ್ಷ ಹಾಗೂ ಸರ್ಕಾರದ ವಿರುದ್ಧ ಇರುವ ಸಾಮಾನ್ಯ ಅತೃಪ್ತಿ ಬಳಸಿ ಬಿಳಿ ಭೂ ಒಡೆಯರು ಭೂಸುಧಾರಣೆಗೆ ತಡೆಯೊಡ್ಡುತ್ತಿದ್ದಾರೆ. ಸರ್ಕಾರ ಎಲ್ಲಾ ಜನವಿಭಾಗಗಳಿಂದ ಬೆಂಬಲ ಕಳೆದುಕೊಂಡಿದೆ. ಮುಗಾಬೆ ಸರ್ಕಾರ ಇದನ್ನರಿತು ಐಎಂಎಫ್ ನೀತಿಗಳನ್ನು ಬಿಟ್ಟುಕೊಡದಿದ್ದರೆ ತೀವ್ರ ಬಿಕ ಟ್ಟು ಎದುರಿಸಬೇಕಾದೀತು.

ಇಂಡೋನೇಶ್ಯಾ, ಫಿಲಿಪ್ಪೀನ್ಸ್‌ನಲ್ಲಿ ಐಎಂಎಫ್ ಶರತ್ತು ಚುನಾವಣಾ ವಿಷಯ

ಇಂಡೋನೇಶ್ಯಾ ಮತ್ತು ಫಿಲಿಪ್ಪೀನ್ಸ್ ಗಳಲ್ಲಿ ಅಧ್ಯಕ್ಷೀಯ ಚುನಾವಣೆ ಬಿಸಿ ಆರಂಭವಾಗಿದ್ದು, ಈ ಎರಡೂ ದೇಶಗಳಲ್ಲಿ ಇತ್ತೀಚಿನ ಆರ್ಥಿಕ ಬಿಕ್ಕಟ್ಟು ಮತ್ತು ಅದರ ಪರಿಹಾರಕ್ಕೆ ಕೊಡುವ ಸಾಲಕೆ ಐಎಂಎಫ್ ಶರತ್ತುಗಳು ಚುನಾವಣಾ ವಿಷಯಗಳಾಗಲಿವೆ. ಇಂಡೋನೇಶ್ಯಾದಲ್ಲಿ 1965ರಲ್ಲಿ ಸಿಐಎ ಬೆಂಬಲದಿಂದ ಮಿಲಿಟರಿ ಕ್ಷಿಪ್ರಕ್ರಾಂತಿ ಮೂಲಕ ಅಧಿಕಾರಕ್ಕೆ ಬಂದ ಸುಹಾರ್ತೋ ಏಳನೇ ಬಾರಿ ಅಧ್ಯಕ್ಷ ಸ್ಥಾನಕೆ ಸ್ಪರ್ಧಿಸುತ್ತಿದ್ದಾರೆ. ಆರೋಗ್ಯ ಸ್ಥಿತಿಯಿಂದಾಗಿ ಹಾಗೂ ಆರ್ಥಿಕ ಬಿಕ್ಕಟ್ಟಿಗೆ ಜವಾಬ್ದಾರಿ ವಹಿಸಿ ಸುಹಾರ್ತೋ ಪುನಃ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬಾರದು ಎಂಬ ಜನ ಅಭಿಪ್ರಾಯ ರೂಪುಗೊಳ್ಳುತ್ತಿದೆ. ಈಗ ಕಳೆದ ಕೆಲವು ತಿಂಗಳುಗಳಲ್ಲಿ ಇಂಡೋನೇಶ್ಯಾದ ರೂಪಯ್ಯಾ ಬೆಲೆ ಐದನೇ ಒಂದು ಭಾಗಕ್ಕೆ (ಡಾಲರಿಗೆ 2400 ರೂಪಯ್ಯಾದಿಂದ ಡಾಲರಿಗೆ 12000 ರೂಪಯ್ಯಾಗೆ) ಇಳಿದಿದೆ. ಐಎಂಎಫ್ ಶರತ್ತುಗಳು ಪರಿಸ್ಥಿತಿಯನ್ನು ಇನ್ನೂ ಹದಗೆಡಿಸುತ್ತದೆ ಎಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಆದರೆ ಇಂಡೋನೇಶ್ಯಾದ ಸಂವಿಧಾನದ ಪ್ರಕಾರ ಅಧ್ಯಕ್ಷರನ್ನು ಚುನಾಯಿಸುವುದು ಪಾರ್ಲಿಮೆಂಟು. ಇಂಡೋನೇಶ್ಯಾದ ಪಾರ್ಲಿಮೆಂಟು ಸುಹಾರ್ತೋರ ಮಿಲಿಟರಿ ಹಾಗೂ ಇತರ ಬೆಂಬಲಿಗರಿಂದ ತುಂಬಿದೆ. ಆದರೂ ಈ ಇಂಡೋನೇಶ್ಯಾದ ನಿಯಂತ್ರಿತ ವ್ಯವಸ್ಥೆ ವಿರುದ್ಧ ಜನ ಬೀದಿಗಿಳಿಯುವ ಎಲ್ಲಾ ಸಾಧ್ಯತೆಗಳು ಇವೆ.

ಫಿಲಿಪ್ಪೀನ್ಸ್‌ನಲ್ಲಿ ಅಧ್ಯಕ್ಷರನ್ನು ಹಾಗೂ ಪಾರ್ಲಿಮೆಂಟನ್ನು ನೇರವಾಗಿ ಚುನಾಯಿಸುವ ಪದ್ಧತಿ ಇದ್ದು ಇತ್ತೀಚಿನ ಆರ್ಥಿಕ ಬಿಕ್ಕಟ್ಟು ಮತ್ತು ಐಎಂಎಫ್ ಶರತ್ತುಗಳು ಚುನಾವಣಾ ವಿಷಯ ಗಳಾಗಲಿವೆ. ಆದರೆ ಇದರ ಬಗ್ಗೆ ದೃಢ ನಿಲುವು ತೆಗೆದುಕೊಂಡು ಈ ದೇಶದ ವ್ಯವಸ್ಥೆ ಪ್ರಶ್ನಿಸಬಲ್ಲ ಎಡಶಕ್ತಿಗಳು ಫಿಲಿಪ್ಪೀನ್ಸ್‌ನಲ್ಲಿ ಕಾನೂನುಬದ್ಧ ಪಕ್ಷಗಳಲ್ಲ. ಆದರೂ ಈ ವ್ಯವಸ್ಥೆ ವಿರುದ್ಧ ಜನ ಬಂಡೇಳುವ ಎಲ್ಲಾ ಸಾಧ್ಯತೆಗಳು ಇವೆ.

ಪ. ಏಶ್ಯಾ - ಕ್ಲಿಂಟನ್ ಸಂಧಾನ ವಿಫಲ

ಪ್ಯಾಲೆಸ್ತೈನ್ - ಇಸ್ರೇಲ್ ನಡುವೆ ಒಸ್ಲೋ ಶಾಂತಿ ಒಪ್ಪಂದ ಜಾರಿಯಾಗು ವುದೂ ಇಲ್ಲ. ಶಾಂತಿ ನೆಲೆಸುವುದೂ ಇಲ್ಲ. ಆ ಬಗ್ಗೆ ಇಸ್ರೇಲ್‌ನ ಹಟಮಾರಿ ನೀತಿ ಬದಲಾಯಿಸಲು ಬೇಕಾದ ಒತ್ತಡ ಹಾಕಲು ಶಕ್ತವಾದ ಏಕಮಾತ್ರ ದೇಶ ಅಮೆರಿಕಾ ಆ ಬಗ್ಗೆ ಏನೂ ಮಾಡುವುದಿಲ್ಲ. ಪ್ಯಾಲೆಸ್ತೈನ್ ಮಾತ್ರ ಆ ಒಪ್ಪಂದ ಕ್ಕೆ ಬದ್ಧವಾಗಿರುವಂತೆ ಒತ್ತಡ ಹಾಕುತ್ತಿರುತ್ತದೆ. ಇರಾಕ್ ಮೇಲೆ ಕೊಲ್ಲಿ ಯುದ್ಧದ ನಂತರ ಹೊರಿಸಿರುವ ಅಂತ ರ್‍ರಾಷ್ಟ್ರೀಯ ಒಪ್ಪಂದ ಜಾರಿಗೊಳಿಸಲು ಮಿಲಿಟರಿ ಕಾರ್ಯಾಚರಣೆಗೆ ತುದಿಗಾಲಲ್ಲಿ ನಿಂತಿರುವ ಅಮೆರಿಕಾ, ಇಸ್ರೇಲ್ ಶಾಂತಿ ಒಪ್ಪಂದ ಜಾರಿ ಬಗ್ಗೆ ಹಟಮಾರಿ ನೀತಿ ವಿರುದ್ಧ ಕಿರುಬೆರಳು ಎತ್ತದು. ಅಮೆರಿಕದ ಈ ಎರಡು ನೀತಿಗಳ ನಡುವಣ ವೈರುಧ್ಯ ಕಣ್ಣುಕುಕ್ಕುವಂತಿದೆ.

ಈ ಬಗ್ಗೆ ಯಾರಿಗಾದರೂ ಅನುಮಾನ ಇದ್ದರೆ, ವಾಶಿಂಗ್ ಟನ್‌ನಲ್ಲಿ ಕ್ಲಿಂಟನ್ ಹಾಗೂ ಆತನ ವಿದೇಶಿ ಕಚೇರಿಯ ಅಧಿಕಾರಿಗಳು ಇಸ್ರೇಲ್ ನ ಪ್ರಧಾನಿ ನೆತನ್ಯಾಹು, ಪ್ಯಾಲೆಸ್ತೈನ್ ಅಧ್ಯಕ್ಷ ಅರಾಫತ್ ಜತೆ ನಡೆಸಿದ ವಿಫಲ ಸಂಧಾನ ಇನ್ನೊಂದು ಪುರಾವೆ ಒದಗಿಸಿದೆ.

ಒಸ್ಲೋ ಶಾಂತಿ ಒಪ್ಪಂದದ ಪ್ರಕಾರ ಈ ಹೊತ್ತಿಗೆ ಇಸ್ರೇಲ್ ಪ್ಯಾಲೆಸ್ತೈನ್‌ನ ಆಕ್ರಮಿತ ಪಶ್ಚಿಮ ದಂಡೆಯ ಸುಮಾರು 40 ಶೇಕಡಾ ಪ್ರದೇಶಗಳಿಂದ ತನ್ನ ಪಡೆಗಳನ್ನು ಹಿಂತೆಗೆಯಬೇಕು. ಈ ವರ್ಷದ ಜೂನ್ ಹೊತ್ತಿಗೆ ಇನ್ನೂ 30ಶೇಕಡಾ ಪ್ರದೇಶಗಳಿಂದ ತನ್ನ ಪಡೆಗಳನ್ನು ಹಿಂತೆಗೆಯಬೇಕು. ಪ್ಯಾಲೆಸ್ತೈನ್ ಇದು ಜಾರಿಯಾಗ ಬೇಕೆಂದು ಒತ್ತಾಯಿಸುತ್ತಿದೆ. ಇಸ್ರೇಲ್ ಯಾವುದೇ ತನ್ನ ಪಡೆಗಳನ್ನು ಹಿಂತೆಗೆ ಯುವ ಮೊದಲು, ಪಶ್ಚಿಮ ದಂಡೆಯ ಕೆಲವು ಆಯಕಟ್ಟಿನ ಪ್ರದೇಶಗಳನ್ನು ಇಸ್ರೇಲ್ ಗೆ ಬಿಟ್ಟುಕೊಡಬೇಕೆಂದು ಹಟ ಹಿಡಿದಿದೆ. ಇದು ಒಪ್ಪಂದದ ಉಲ್ಲಂಘನೆ. ಅಮೆರಿಕ ಒಪ್ಪಂದದ ಪೂರ್ಣ ಜಾರಿಗೆ ಒತ್ತಾಯಿಸದೆ, 12 ಶೇಕಡಾ ಪ್ರದೇಶಗಳಿಂದ ತನ್ನ ಪಡೆಗಳನ್ನು ಹಿಂತೆಗೆ ಯಬೇಕು ಎಂಬ ಮಧ್ಯ ದಾರಿ ಹಿಡಿಯಲು ಪ್ರಯತ್ನಿಸಿ ಅದರಲ್ಲೂ ಇಸ್ರೇಲ್‌ನ್ನು ಒಪ್ಪಿಸುವಲ್ಲಿ ವಿಫಲವಾಗಿದೆ. ಅಮೆರಿಕದ ಇರಾಕ್ ಹಾಗೂ ಇಸ್ರೇಲ್ ನೀತಿಗಳ ನಡುವಣ ಈ ವೈರುಧ್ಯ ಕಣ್ಣುಕುಕ್ಕುವಂತಿದೆ.

ಬಳ್ಳಾರಿ:ಸಂಯುಕ್ತ ರಂಗಕ್ಕೊಂದು ಹೊಸವರ್ಷದ ಕೊಡುಗೆ!

ಪುಟ 5 ರಿಂದ

ಅದಕ್ಕಿದ್ದರೂ

ಕುಲ-ಕುಲವೆಂದು ಹೊಡೆದಾಡದಿರಿ,
ನಿಮ್ಮ ಕುಲದ ನೆಲೆಯನೇನಾದರು
ಬಲ್ಲಿರಾ! ಬಲ್ಲಿರಾ!

ಎಂದು ಸೌಹಾರ್ದತೆಯನ್ನು ಸಾರಿದ ಮಹಾ ಮಹಿಮರಾದ ಕನಕದಾಸರ ಹೆಸರನ್ನೂ ಬಳಸಿಕೊಂಡು ಕಸದಲ್ಲಿ ಕಲಸಿ, ಆತನು ನಂಬಿದ ವಿಚಾರಗಳಿಗೆ ಬೆಂಕಿ ಹಚ್ಚುವ ಮೂಲಕ ಹಿಂದೂ ಸಂಸ್ಕೃತಿಯ ರಕ್ಷಕನೆಂಬ ಡೋಂಗಿತನ ಅಥವಾ ಪೊಳ್ಳುತನವನ್ನು ಮತ್ತೊಮ್ಮೆ ಬಯಲು ಮಾಡಿಕೊಂಡು ಕುರುಬ ಜನಾಂಗದ ಯುವಜನರನ್ನು ಕನಕ ಯುವಸೇನೆಯ ಹೆಸರಿನಲ್ಲಿ ಸಂಘಟನೆಗೆ ತೊಡಗಿದ್ದರೂ, ರಾಜ್ಯ ರೈತ ಸಂಘದ ಒಡಕಿನ ಲಾಭ ಸೇರಿದರೂ, ಕಳೆದೆರಡು ವರ್ಷಗಳ ಹಿಂದೆ ಬಳ್ಳಾರಿ ನಗರದಲ್ಲಿ ರಾಜ್ಯ ಮಟ್ಟದ ಆರ್.ಎಸ್.ಎಸ್.ನ ಸಾವಿರಾರು ಕಾರ್ಯಕರ್ತರ ಕವಾಯಿತು ಪ್ರದರ್ಶನವನ್ನು ಸಂಘಟಿಸಲು ಹಣಕಾಸಿನ ನೆರವು ನೀಡಿ ಬಹಿರಂಗ ವೇದಿಕೆಯಲ್ಲಿ ಭಾಗವಹಿಸಿದ ತಾನೊಬ್ಬ ಕೋಮುವಾದಿ ಹಾಗೂ ಬಿ.ಜೆ.ಪಿ. ಪರ ವ್ಯಕ್ತಿಯೆಂದು ಖಡಾಖಂಡಿತ ಕಾರ್ಮಿಕ ವಿರೋಧಿಯೆಂದು ಜಿಲ್ಲೆಯ ಜನತೆಗೆ ಮುಖ ತೋರಿಸಿದ ನಗರದ ಪ್ರಮುಖ ವಾಣಿಜ್ಯೋದ್ಯಮಿ ಬಿ.ಎಸ್.ಎ.ಎಲ್. ಕೈಗಾರಿಕೆಯ ಪ್ರಮುಖ ವಾರಸುದಾರ ಶ್ರೀಯುತ ಮಾಧವರವರನ್ನು ಬಿ.ಜೆ.ಪಿ. ಪರವಾಗಿ 3 ನೇ ಅಭ್ಯರ್ಥಿಯಾಗಿ ಕಣಕ್ಕಿಳಿಸಿ ಕೋಟ್ಯಾಂತರ ಹಣ ಸುರಿದರೂ, ಅದು ಮಾತ್ರವಲ್ಲಾ, ಜಿಲ್ಲೆಯ ಲೋಕಶಕ್ತಿಯ ಬೆಂಬಲ ಪಡೆದರೂ... ಅಬ್ಬಬ್ಬಾ ಎಂದರೂ 25 ಸಾವಿರ ಮತಗಳನ್ನು ಪಡೆದು ಠೇವಣಿ ಉಳಿಸಿ ಕೊಂಡರದೇ ದೊಡ್ಡ ಸಾಧನೆ ಯಾಗಲಿದೆ ಬಿ.ಜೆ.ಪಿ.ಗೆ. ಅದಲ್ಲದೇ.. ಬಿ.ಜೆ.ಪಿ.-ಲೋಕಶಕ್ತಿ ಹೊಂದಾಣಿಕೆಯಂತೆ ಲೋಕಶಕ್ತಿಯಿಂದ ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀಯುತ ಎನ್.ತಿಪ್ಪಣ್ಣ ನವರು ಕಣಕ್ಕಿಳಿದರೂ-(ಕಳೆದ ಬಾರಿ ಇವರೇ ಜನತಾದಳದ ಪರವಾಗಿ ಸ್ಪರ್ಧಿಸಿ ಗೆಲುವಿನ ಅಂಚಿನವರೆಗೆ ಬಂದು ಸೋತಿದ್ದರು) - ಲಿಂಗಾಯತ ವಲಯವೇ ಒಂದಾಗಿ ಇವರನ್ನೂ ಗೆಲ್ಲಿಸಬಹುದು ಇಲ್ಲವೇ ಜನತಾದಳದ ಅಭ್ಯರ್ಥಿಯ ಸೋಲಿಗೆ ಕಾರಣವಾಗಬಹುದೆಂದು ಹಲವಾರು ವಲಯಗಳಲ್ಲಿ ಚರ್ಚಿಸಲ್ಪಡುತ್ತಿದ್ದರೂ ಬಿ.ಜೆ.ಪಿ. ಅಭ್ಯರ್ಥಿ ಪಡೆಯಬಹುದಾದಕ್ಕಿಂತ ಹೆಚ್ಚಿನ ಮತಗಳನ್ನೇನು ಗಳಿಸಲಾರರು. (ಜನತಾದಳಕ್ಕೆ ಪ್ರತಿಷ್ಠೆಯ ಕಣವಾಗಿರವಾಗ) ಜಿಲ್ಲೆಯ ಆಳುವ ವರ್ಗಗಳಾದ ಭೂಮಾಲಿಕರು, ಬಂಡವಾಳದಾರರು ಗುತ್ತಿಗೆದಾರರು, ಬಡ್ಡಿ ವಾಪಾರಿಗಳು, ದಲ್ಲಾಲರುಗಳಲ್ಲಿ ಬಹುಸಂಖ್ಯಾತರು ಅಲ್ಪಸಂಖ್ಯಾತ ಜನಾಂಗವೇ ಆಗಿದ್ದು ಉಳಿದವರಲ್ಲಿ ಬಹುಸಂಖ್ಯಾತರು ರೆಡ್ಡಿ-ಕಮ್ಮ ಜನಾಂಗದವರಾಗಿದ್ದಾರೆ. ಅಲ್ಪಸ್ವಲ್ಪ ಕುರುಬ-ವಾಲ್ಮೀಕಿ ಇತರೆ ಜನಾಂಗವಿದ್ದಾರೆ.

ಇದರಲ್ಲಿ ಬಹು ಸಂಖ್ಯಾತ ಲಿಂಗಾಯುತ ಆಳುವ ವರ್ಗದ ಜನರು ಹೆಚ್ಚಿನವರು ಜನತಾದಳದಲ್ಲಿಯೇ ಉಳಿದವರು ಹಾಗೂ ಇತರೇ ರೆಡ್ಡಿ-ಕಮ್ಮಾಗಳು ಕಾಂಗ್ರೆ ಪಕ್ಷದಲ್ಲಿದ್ದಾರೆ. ಉಳಿದರವರು ಅದರಲ್ಲಿ ಸ್ವಲ್ಪ-ಇದರಲ್ಲೂ ಇದ್ದಾರೆ.

ಒಟ್ಟಾರೇ ಜಿಲ್ಲೆಯ ಆಳುವ ವರ್ಗದ ಪ್ರಭಾವ ವಲಯ ಬಹುಮಟ್ಟಿಗೆ ಲಿಂಗಾಯತ ಜನಾಂಗವನ್ನು ಪ್ರತಿನಿಧಿಸಿ ಈಗೀಗ ಕೈಗಾರೀಕಿಕರಣಗೊಳ್ಳುತ್ತಿರುವ ಹಿಂದುಳಿದ ಜಿಲ್ಲೆಯ ಬಹುಸಂಖ್ಯಾತ ನಾಗರೀಕರ-ಮತದಾರರ ಮೇಲೆ ಹಿಡಿತ ಹೊಂದಿದ್ದಾರೆಂಬುದೇನೋ ನಿಜವೇ. ಆದರೂ, ಇವರೆಲ್ಲರನ್ನು ಒಗ್ಗೂಡಿಸಿ (ಪಕ್ಷಬೇದ ಮರೆತು) ತಮ್ಮ ಹಿಂದೆ ಅಣಿನೆರೆಸಿಕೊಳ್ಳಬಲ್ಲಷ್ಟು-ಅವರೆಲ್ಲರಿಗೆ ಮುಖಂಡತ್ವ ನೀಡಿ ಗೆಲ್ಲುವಷ್ಟು ಪ್ರಭಾವಿ ರಾಜಕೀಯ ನಾಯಕರೇನು ಶ್ರೀಮಾನ್ ಎನ್. ತಿಪ್ಪಣ್ಣನವರು ಅಲ್ಲವೆಂಬುದೂ ಅವರು ಜನತಾದಳದೊಳಗೆ ಉಂಟುಮಾಡ ಬಹುದಾದ ಬಿರುಕು ಭಾರೀ ಗಂಡಾಂತರ ಕಾರಿಯಾಗಿಯೇನು ಆಗಿರಲಾರದೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಇದೀಗ ಜನತಾದಳದ ಮಹಾಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ನೆಟ್ಟಿಕಲ್ಲಪ್ಪ ನವರಿಗೆ ಬಳ್ಳಾರಿ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ನೀಡಿದ್ದು ಇದೊಂದು ಪ್ರತಿಷ್ಠೆಯ ಕ್ಷೇತ್ರವೆಂದು ಎಂ.ಪಿ. ಪ್ರಕಾಶ್‌ರವರು ಮುನ್ನಡೆಯಲ್ಲಿ ಗೆಲುವು ಕಟ್ಟಿಟ್ಟ ಬುತ್ತಿ.

ವಿಶ್ವ

ಪುಸ್ತಕ ಪರಿಚಯ

ಅಮರ ಚೆ-ಬದುಕೊಂದು ವೀರಗಾಥೆ

ಅರ್ನೆಸ್ಟೊ ಚೆಗುವಾರ ಲೇ: ಐಲಾವ್ರೆತ್ಸ್ಕಿ, ಬೆಲೆ. 40 ರೂ. ನವಕರ್ನಾಟಕ ಪಬ್ಲಿಕೇಶನ್ ಬೆಂಗಳೂರು.

ಚೆಗುವಾರ ಲೇ: ಡಾ.ಜಿ.ರಾಮಕೃಷ್ಣ , ಬೆಲೆ.4 ರೂ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ನಮ್ಮ ಪ್ರತಿಯೊಂದು ಕ್ರಿಯೆಯೂ ಸಾಮ್ರಾಜ್ಯಶಾಹಿಯ ವಿರೋಧದ ಘೋಷಣೆ......... ನಾವೆಲ್ಲ ಮಡಿಯಬೇಕಾಗಿ ಬಂದರೂ ಸ್ವಾಗತಿಸೋಣ ಅದಕ್ಕೆ ಒಂದೇ ಶರತ್ತು ನಮ್ಮ ಯುದ್ಧದ ಘೋಷಣೆಯು ಇನ್ನೊಂದು ಗ್ರಹಣಯೋಗ್ಯವಾದ ಕಿವಿಗೆ ಬಿದ್ದಿರಬೇಕು. ಮತ್ತು ತಮ್ಮ ಅಸ್ತ್ರಗಳನ್ನು ಹಿಡಿಯಲು ಇನ್ನೊಂದು ಕೈ ಮುಂದೆ ಬಂದಿರಬೇಕು. ಇದು ಏಷ್ಯ - ಆಫ್ರಿಕಾ-ದಕ್ಷಿಣ ಅಮೇರಿಕಾ ದೇಶಗಳ ಕ್ರಾಂತಿಕಾರಿ ಯುವಕರ ಸಮ್ಮೇಳನಕ್ಕೆ ಚೆ ಕಳುಹಿಸಿದ ಸಂದೇಶದ ಒಂದು ಭಾಗ.

ಹೌದು ಚೆ- ಅರ್ನೆಸ್ಟೋ ಚೆಗುವಾರ-ಲ್ಯಾಟಿನ್ ಅಮೇರಿಕಾದ ಅರ್ಜೆಂಟೈನಾದಲ್ಲಿ ಹುಟ್ಟಿ ವಿಶ್ವದ ಮಾನವ ಕುಲದ ವಿಮೋಚನೆಗಾಗಿ ದುಡಿದವರು. ಸಾಮ್ರಾಜ್ಯಶಾಹಿಯ ಕಪಿಮುಷ್ಟಿಯಲ್ಲಿ ಸಿಕ್ಕಿ ನಲುಗಿಹೋಗುತ್ತಿರುವ ಬಡರಾಷ್ಟ್ರಗಳಿಗೆ ಬಿಡುಗಡೆಯ ಸಂದೇಶ ಕೊಟ್ಟವರು. ಈ ವಿಶ್ವದಲ್ಲಿ ಪ್ರತಿಯೊಂದು ಸಲ ಅನ್ಯಾಯವಾಗುವಾಗಲೂ ನೀವು ಕೋಪದಿಂದ ಖಂಡಿಸ ಬಲ್ಲಿರಿ ಎಂದಾದರೆ ನಾವು ಸಂಗಾತಿಗಳು-ಮತ್ತು ಅದೇ ಹೆಚ್ಚು ಮುಖ್ಯವಾದದ್ದು ಎಂದು ಹೇಳಿ, ಕೊನೆಯ ಉಸಿರಿರುವವರೆಗೂ ಇಂತಹ ಸಂಗಾತಿಗಳಿಗಾಗಿ ಹಂಬಲಿಸಿದವರು ಮತ್ತು ಅನೇಕ ಸಂಗಾತಿಗಳೊಂದಿಗೆ ಕೂಡಿ ಸಾಮ್ರಾಜ್ಯಶಾಹಿ ಸರ್ವಾಧಿಕಾರದ ವಿರುದ್ಧ ಹೋರಾಡಿದವರು ಕ್ರಾಂತಿಕಾರಿ ಚೆಗುವಾರ.

ಕ್ರಾಂತಿಕಾರಕ ಹೋರಾಟ ಎನ್ನುವುದಕ್ಕೆ ಸಂವಾದಿ ಪದವೇ ಚೆಗುವಾರ ಅನ್ನುವಷ್ಟರ ಮಟ್ಟಿಗೆ ಕ್ರಾಂತಿಕಾರಕವಾಗಿದ್ದ ಅವರ ಬದುಕನ್ನು ಈ ಮೇಲಿನ ಎರಡು ಪುಸ್ತಕಗಳು ಸಮರ್ಥವಾಗಿ ಪಂಚಯಿಸುತ್ತವೆ.

ಐಲಾವ್ರೆತ್ಸ್ಕಿಯವರು ಅನೇಕ ದಾಖಲೆ, ಪತ್ರಿಕಾ ವರದಿ, ಸ್ನೇಹಿತರ, ಸಂಬಂಧಿಕರ ಸಂದರ್ಶನ ಮತ್ತು ಹೋರಾಟದಲ್ಲಿ ಆತನೊಂದಿಗೆ ಬಾಗಿಯಾದ ಸಂಗಾತಿಗಳ ಅನುಭವದ ಆಧಾರದಲ್ಲಿ ವಿಸ್ತೃತವಾಗಿ ಚರ್ಚಿಸಿದ್ದಾರೆ. ಚೆ ಅವರ ಬಾಲ್ಯ, ಗೇರಿಲ್ಲಾ ಹೋರಾಟ, ಕ್ಯೂಬಾದ ಸಚಿವ, ಬೊಲಿವಿಯಾದ ಗೇರಿಲ್ಲಾ ಹೋರಾಟ, ಆರ್ಥಿಕ ಮತ್ತು ರಾಜಕೀಯ ವಿಚಾರಧಾರೆ, ಜೀವನದ ಕೊನೆಗಳನ್ನು ವಿವರಿಸಿದ್ದಾರೆ. ಇದರಲ್ಲಿ ಬೊಲಿವಿಯನ್ ದಿನಚರಿಯ ಟಿಪ್ಪಣಿಗಳೂ ಸೇರಿದೆ. ಡಾ.ಜಿ.ರಾಮಕೃಷ್ಣ ಕೂಡ ತೀರಾ ಆಪ್ತವಾಗಿ ಸಂಕ್ಷಿಪ್ತವಾಗಿ ಚೆ ಯವರನ್ನು ಕೆತ್ತಿ ನಿಲ್ಲಿಸಿದ್ದಾರೆ. ಲೇಖಕರೂ ಕೂಡ ಚೆಯ ಸಂಗಾತಿಯಾಗಿ ಹೆಮ್ಮೆಯಿಂದ ವಿವರಿಸುವಷ್ಟು ಲವಲವಿಕೆ ಬರಹದಲ್ಲಿದೆ.

ಫಿಡೆಲ್ ಕ್ಯಾಸ್ಟ್ರೊರೊಂದಿಗೆ ಸೇರಿ ಕ್ಯೂಬಾದ ಕ್ರಾಂತಿಗಾಗಿ ಗೇರಿಲ್ಲಾ ಯುದ್ಧದಲ್ಲಿ ನಿರತ ಆದ ಇವರು ವೃತ್ತಿಯಲ್ಲಿ ಒಬ್ಬ ವೈದ್ಯರಾಗಿದ್ದರು. ಕ್ಯಾಸ್ಟ್ರೋ ಗುಂಪಿನಲ್ಲಿ ಒಬ್ಬ ವೈದ್ಯರಾಗಿ ಸೇರಿ ನಂತರ ತುಕಡಿಯ ಕಮಾಂಡರ್ ಆಗಿ ಕ್ಯೂಬಾದ ವಿಮೋಚನೆಯಲ್ಲಿ ಮಹತ್ವದ ಪಾತ್ರವಹಿಸಿದರು. ಕ್ರಾಂತಿಯ ನಂತರ ಕ್ಯೂಬಾಕ್ಕೆ ಅಂತರಾಷ್ಟ್ರೀಯ ಮನ್ನಣೆ ದೊರಕುವ ಪ್ರಮುಖ ಜವಾಬ್ದಾರಿ ಹೊತ್ತು ವಿದೇಶಾಂಗ ಸಚಿವರಾಗಿ ಯೋಜನಾ ಆಯೋಗದ ಮುಖ್ಯಸ್ಥರಾಗಿ, ಕೈಗಾರಿಕಾ ಸಚಿವರಾಗಿ ರಾಷ್ಟ್ರೀಯ ಬ್ಯಾಂಕಿನ ಗೌರ್ನರ್ ಆಗಿ ಸಮಾಜವಾದವನ್ನು ನೆಲೆಗೊಳಿಸಿದರು. ಕ್ಯೂಬಾವನ್ನು ಕಟ್ಟಿ ನಿಲ್ಲಿಸಿದರು. ದಿಢೀರನೆ ಈ ಎಲ್ಲಾ ಪದವಿಯನ್ನು ಬಿಟ್ಟು ಲ್ಯಾಟಿನ್ ಅಮೇರಿಕಾದ ಇನ್ನೊಂದು ಸಂತ್ರಸ್ತ ಬೊಲಿವಿಯಾದ ವಿಮೋಚನೆಗಾಗಿ ಗೆರಿಲ್ಲಾ ಯುದ್ಧ ಸಂಘಟಿಸಲು ಮುಂದಾದರು.

"ಈಗ ಜಗತ್ತಿನ ಬೇರೆ ಭಾಗದಲ್ಲಿ ತನ್ನ ಅಲ್ಪ ಸೇವೆಗಳ ಅಗತ್ಯ ಇದೆ. ಅದು ತನ್ನಿಂದ ಸಾಧ್ಯ" ಎಂದು ಕ್ಯಾಸ್ಟ್ರೋಗೆ ಪತ್ರ ಬರೆದು ಕ್ಯೂಬಾವನ್ನು ನೀವು ಸಮರ್ಪಕವಾಗಿ ಮುನ್ನಡೆಸುತ್ತೀರಿ ಎಂಬ ವಿಶ್ವಾಸ ತನಗಿದೆಯೆಂದು ತಿಳಿಸಿದರು. ಒಬ್ಬ ಅಸ್ತಮಾ ರೋಗಿಯಾಗಿದ್ದರೂ ಅವರ ಹೋರಾಟಕ್ಕೆ ಅದು ಅಡ್ಡಿ ಬರಲಿಲ್ಲ.

ಬೊಲಿವಿಯನ್ ಕಾಡಿನಲ್ಲಿ ಯುದ್ಧ ನಿರತ ಆಗಿದ್ದಾಗ ಅಮೇರಿಕಾದ ಕೈಗೊಂಬೆಯಾಗಿದ್ದ ಮಿಲಿಟರಿ ಸರ್ವಾಧಿಕಾರಿಯು ಗುಂಡಿಗೆ ಬಲಿಯಾದರು ಎನ್ನುವುದಕ್ಕಿಂತ 'ತಾಯ್ನಾಡು ಇಲ್ಲವೆ ಮರಣ' ಎನ್ನುವ ಘೋಷಣೆಗೆ ಹೊಸ ಅರ್ಥ ಕೊಟ್ಟರು. ಈ ಹೆಮ್ಮೆಯ ಕಮ್ಯುನಿಸ್ಟ್ ಹುತಾತ್ಮ ಆದ 30ನೇ ವರ್ಷವನ್ನು ಇಂದು ಜಗತ್ತಿನೆಲ್ಲೆಡೆ ಆಚರಿಸುತ್ತಿದ್ದೇವೆ.

'ಆರ್ಥಿಕ ಸ್ವಾತಂತ್ರ್ಯದ ವಿನಾ ರಾಷ್ಟ್ರೀಯ ಸಾರ್ವಭೌಮತೆಯನ್ನು ಕುರಿತು ಊಹಿಸಲೂ ಸಾಧ್ಯ ಇಲ್ಲ" ಎಂದು ಹೇಳುತ್ತಿದ್ದ 'ಚೆ' ಶಾಂತಿಯುತ ರಚನಾತ್ಮಕ ಕಾರ್ಯದ ಬಗ್ಗೆ ಮತ್ತು ಶಾಂತಿ ಸ್ಥಾಪನೆಯ ಬಗ್ಗೆ ಮಾತನಾಡುತ್ತಿದ್ದರು. ಅವರು ಮಾಡಿದ ಕಾರ್ಯ ಅವರ ಇಡೀ ಜೀವನ ಬಂಡವಾಳಶಾಹಿ ನಿರಂಕುಶ ಪ್ರಭುತ್ವದ ಭಗ್ನಾವಶೇಷಗಳ ಮೇಲೆ ನ್ಯಾಯವಾದ ಸಮಾಜವಾದಿ ಸಮಾಜ ನಿರ್ಮಾಣ ಮಾಡುವುದಕ್ಕೆ ಮುಡಿಪಾಗಿತ್ತು' ಎಂದು ಲೇಖಕರು ಹೇಳುತ್ತಾರೆ. ಅದಕ್ಕಾಗಿ 'ಚೆ' ಮಾಡಿದ ವಿವಿಧ ಹೋರಾಟಗಳನ್ನು ವಿವರಿಸುತ್ತಾರೆ. ಹಾಗಾಗಿಯೇ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ 'ನಾವು ಶಾಂತಿಗಾಗಿ ಹೋರಾಡುತ್ತಿರುವವರ ಪರವಾಗಿ ಇದ್ದೇವೆ' ಎಂದು ಘೋಷಿಸಿದರು.

'ಕವಿಯಲ್ಲದ ಒಬ್ಬ ಕ್ರಾಂತಿಕಾರಿ ನಾನು' ಎಂದ ಹೇಳುತ್ತಿದ್ದ ಚೆ ಅದ್ಭುತ ಅಧ್ಯಯನ ಶೀಲ. ವೈರಿಗಳ ನಡುವೆ ಅಪಾಯದಲ್ಲಿರುವಾಗಲೇ ಅನೇಕ ಒಳ್ಳೆಯ ಪುಸ್ತಕಗಳನ್ನು ಓದಿ ಮುಗಿಸಿದ. ಯಾವಾಗಲೂ ಅವನ ಜೊತೆ ಪುಸ್ತಕಗಳ ಕಂತೆಗಳೇ ಇರುತ್ತಿದ್ದವು" ಆತ ಬರೆದ ಹತ್ತಾರು ಪುಸ್ತಕಗಳು ಇಂದಿಗೂ ಮಾರ್ಗದರ್ಶಿಯಾಗಿದೆ.

'ಚೆ' ಅವರ ಸಾವಿನ ಬಗ್ಗೆ ಬರೆಯುತ್ತಾ ಜಿ.ರಾಮಕೃಷ್ಣ ಅವರು ಹೀಗೆ ಹೇಳುತ್ತಾರೆ. "ಕ್ರಾಂತಿಕಾರಿಯೊಬ್ಬ ಸೋಲಬಹುದು, ಸೆರೆಸಿಕ್ಕಬಹುದು, ಸಾಯಬಹುದು, ಸಾಯುವುದರಲ್ಲಿ ಅವರ ಅಮರತ್ವವಿದೆ. ಅದಕ್ಕಿಂತಲೂ ಹೆಚ್ಚಾಗಿ ಅವನೊಬ್ಬನನ್ನು ಸಾಯಿಸುವುದರಿಂದ ಕ್ರಾಂತಿಯ ಬಿರುಗಾಳಿಯನ್ನು ತಡೆಗಟ್ಟಿದಂತೆ ಆಗುವುದಿಲ್ಲ, ಸಮಾಜದಲ್ಲಿರುವ ವೈರುಧ್ಯಗಳನ್ನು ಅಳಿಸಿಹಾಕಲು ಇನ್ನೊಬ್ಬ 'ಚೆ' ಬರುತ್ತಾನೆ. ಮತ್ತೊಬ್ಬ 'ಚೆ' ಬರುತ್ತಾನೆ. ಬರುತ್ತಲೇ ಇರುತ್ತಾನೆ. ದೌರ್ಜನ್ಯ, ದಮನ, ದಾರುಣತೆ ಕೊನೆಯಾಗಿ ಮಾನವೀಯತೆ ಮನೆ ಮಾಡಿಕೊಳ್ಳುವವರೆಗೂ ಇದು ನಡೆಯುತ್ತಲೇ ಇರುತ್ತದೆ. ಮಾನವ ಜನಾಂಗದ ನಿಜವಾದ ಇತಿಹಾಸ ಪ್ರಾರಂಭ ಆಗುವುದು ಆಮೇಲೆ"

'ಯಾವಾಗಲೂ ವಿಜಯಕ್ಕೋಸ್ಕರ; ತಾಯಿನಾಡು ಇಲ್ಲವೇ ಮರಣ' ಎನ್ನುವ ಘೋಷಣೆಯೊಂದಿಗೆ ಹೋರಾಟಕ್ಕೆ ಇಳಿದ ಚೆಗೆವಾರರ ನೆನಪು. ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿ ಸ್ವಾತಂತ್ರ್ಯ ಪಡೆದ 50 ವರ್ಷದ ಒಳಗಾಗಿ ಗ್ಯಾಟ್, ಡೆಂಕಲ್, 'ಐಎಂಎಫ್' ಅಪಾಯವನ್ನು ಹೊಸ ಆರ್ಥಿಕ ನೀತಿಯ ಹೆಸರಿನಲ್ಲಿ ಮುಕ್ತತೆಯ ಹೆಸರಿನಲ್ಲಿ ದೇಶದೊಳಗಡೆ ಆಹ್ವಾನಿಸುತ್ತಾ, ಮತ್ತೆ ಸಾಮ್ರಾಜ್ಯಶಾಹಿಗಳ ಸುಪರ್ದಿಗೆ ಮಣೆ ಹಾಕುತ್ತಿರುವ ಭಾರತದಂತಹ ಮೂರನೇ ಜಗತ್ತಿನ ರಾಷ್ಟ್ರಗಳಿಗೆ ಅನಿವಾರ್ಯವಾಗಿದ್ದಾರೆ.

ಡಾ. ರಾಮಕೃಷ್ಣ ಅವರು ಹೇಳುವಂತೆ ಭಾರತದಂತಹ ದೇಶಕ್ಕೆ 'ಚೆ' ಸಂದೇಶವೇನಾದರೂ ಇದ್ದರೆ ಅದು ಇಷ್ಟೇ "ಸಾಮ್ರಾಜ್ಯ ಶಾಹಿಗಳೆದುರು ಕಂಗಾಲಾಗಬೇಡಿ ಭಾರತ ಬಿಟ್ಟು ತೊಲಗಿ ಎಂದವರು ನೀವು. ತಾಯಿನಾಡು ಇಲ್ಲವೇ ಮರಣ ಎಂದವರು ನಾವು. ನಮ್ಮಂತವರು ಜೊತೆಗೂಡಿದರೆ ಸಾಮ್ರಾಜ್ಯಶಾಹಿಯನ್ನು ಅಳಿಸಿ ಹಾಕಬಹುದು ಬನ್ನಿ ಒಟ್ಟಿಗೆ ಹೆಜ್ಜೆ ಹಾಕೋಣ"

ಇಂಥ ಮಿಂಚು 'ಚೆ' ಯವರನ್ನು ಸಮರ್ಥವಾಗಿ ಪರಿಚಯಿಸಿದ ಲೇಖಕರು ಅಭಿನಂದನಾರ್ಹರು. ಈ ಅಭಿನಂದನೆಯನ್ನು ಪುಸ್ತಕ ಓದುವ ಮೂಲಕ 'ಚೆ' ಎಂಬ ಮಿಂಚಿನ ಬೆಳಕನ್ನು ನಮ್ಮಲ್ಲಿ ಆಹ್ವಾನಿಸಿಕೊಳ್ಳುವ ಮೂಲಕ ಹೇಳೋಣ ಅಲ್ಲವೇ?

ತನ್ನ ನಂತರ ಕೂಡ ಈ ಹೋರಾಟವನ್ನು ಮುಂದುವರಿಸಬೇಕೆಂಬುದು 'ಚೆ' ಅವರ ಆಸೆ. ತನ್ನ ಮಕ್ಕಳಿಗೆ ಬರೆದ ಈ ಪತ್ರದ ಸಾಲು ಇದಕ್ಕೆ ಸಾಕ್ಷಿ. 'ನೀವು ಬೆಳೆದು ದೊಡ್ಡವರಾಗಬೇಕು. ಒಳ್ಳೆಯ ಕ್ರಾಂತಿಕಾರಿಗಳಾಗಬೇಕು. ಶ್ರದ್ಧೆಯಿಂದ ಅಭ್ಯಾಸ ಮಾಡಿ ನಿಸರ್ಗ ನಿಮ್ಮ ನಿಯಂತ್ರಣದಲ್ಲಿರುವಂತೆ ಮಾಡುವಂತೆ ತಂತ್ರಜ್ಞಾನವನ್ನು ಕರಗತಮಾಡಿಕೊಳ್ಳಿ. ನೆನಪಿರಲಿ ಕ್ರಾಂತಿ ಅತ್ಯಂತ ಮುಖ್ಯವಾದದ್ದು ಮತ್ತು ವೈಯಕ್ತಿಕವಾಗಿ ನಿಮ್ಮಲ್ಲಿ ಪ್ರತಿಯೊಬ್ಬನೂ ಮುಖ್ಯವಾಗಿರುವುದಿಲ್ಲ.

ಅತ್ಯಂತ ಮುಖ್ಯವಾಗಿರುವ ವಿಷಯವೆಂದರೆ ಅನ್ಯಾಯ ಜಗತ್ತಿನ ಯಾವ ಭಾಗದಲ್ಲಿಯೇ ಇರಲಿ ಅದನ್ನು ಎಷ್ಟು ಮಾತ್ರಕ್ಕೂ ಸಹಿಸಕೂಡದು. ಇದು ಕ್ರಾಂತಿಕಾರಿಯ ಅತ್ಯಂತ ಶ್ಲಾಘನೀಯ ಗುಣ ಆಗಿದೆ.

ನಾವೆಲ್ಲ ಅವನ ಮಕ್ಕಳಾಗಲು ಪ್ರಯತ್ನಿಸೋಣ ಅಲ್ಲವೇ?

ಅಣಕ

[illegible]



... ಸ್ಸಾರಿ...... ತಪ್ಪಾಯ್ತು...!

ಮಾನ್ಯ ಸೋನಿಯಾಜೀ,

ನೀವು ಕಾಂಗ್ರೆಸಿಗೆ ಪ್ರಚಾರ ಆರಂಭಿಸಿದ್ದು ನಮ್ಮಲ್ಲೆಲ್ಲಾ ನವ ಉತ್ಸಾಹ ಉಂಟು ಮಾಡಿದೆ. ನೆಹರೂ ಕುಟುಂಬದ ಒಬ್ಬರು ಸದಸ್ಯರರ ನಮ್ಮೊಂದಿಗಿದ್ದರೆ, ನಮಗೆ ಅಷ್ಟೇ ಸಾಕು. ಕಾಂಗ್ರೆಸ್ ಬಿಟ್ಟು ಓಡುವ ಸನ್ನಾಹದಲ್ಲಿದ್ದ ನಾವು, ನಿಮ್ಮ ತಪ್ಪೊಪ್ಪಿಗೆಗಳಿಂದ ಉತ್ತೇಜಿತರಾಗಿ, ಕಾಂಗ್ರೆಸ್ಸಿಗೆ ಉತ್ಸಾಹದಿಂದ ಕೆಲಸ ಮಾಡುತ್ತಿದ್ದೇವೆ.

ಬಾಬ್ರಿ ಮಸೀದಿ ನಾಶ ತಡೆಯಲು ಆಗದ್ದಕ್ಕೆ, ಸಿಖ್ಖರ ಸ್ವರ್ಣ ಮಂದಿರದ ಮೇಲೆ ಸೈನ್ಯದಾಳಿ, ಸಿಖ್-ವಿರೋಧಿ ದಂಗೆ- ಇದಕ್ಕೆಲ್ಲಾ ನೀವು ತಪ್ಪೊಪ್ಪಿಗೆ ನೀಡಿ... ಸ್ಸಾರಿ ಎಂದು ಹೇಳಿದ್ದು ಜನಗಳಲ್ಲಿ, ನಮ್ಮಲ್ಲಿ ವಿದ್ಯುತ್ ಸಂಚಾರವಾದಂತಾಗಿದೆ.

ಇನ್ನೂ ಕೆಲವು ಕಾಂಗ್ರೆಸ್ ಸರಕಾರಗಳ ತಪ್ಪುಗಳ ಬಗ್ಗೆ ಮುಂಬರುವ ಚುನಾವಣಾ ಸಭೆಗಳಲ್ಲಿ ಸ್ಸಾರಿ ಅಂದು ಬಿಟ್ಟರೆ, ಕಾಂಗ್ರೆಸಿಗೆ ಬಹಳ ಅನುಕೂಲವಾಗ್ತದೆ ಅಂತ ನಿಮ್ಮಲ್ಲಿ ನಮ್ಮ ನಮ್ರ ವಿನಂತಿ.

ಹವಾಲಾ, ಜೆ.ಎಂ.ಎಂ. ಸದಸ್ಯರನ್ನು ಖರೀದಿಸಿ ವಿಶ್ವಾಸಮತ ಪಡೆದದ್ದು, ವಿ.ಪಿ. ಸಿಂಗ್ ಮೇಲೆ ಸೈಂಟ್‌ಕಿಟ್ಸ್ ಸುಳ್ಳು ಹಗರಣ ಸೃಷ್ಟಿ ಮಾಡಿದ್ದು, ದೇವೇಗೌಡ-ಗುಜ್ರಾಲ್ ಸರ್ಕಾರಗಳನ್ನು ಉರುಳಿಸಿದ್ದು, ಉದಾರೀಕರಣ, ಜಾಗತೀಕರಣ ನೀತಿಗಳಿಂದ ಬಡವರಿಗೆ ತೊಂದರೆ ಮಾಡಿದ್ದು-ಇವಕ್ಕೆಲ್ಲ ಜನ ಕಾಂಗ್ರೆಸ್ಸಿಗೆ ಉಗೀತಿದ್ದಾರೆ ಮೇಡಂ. ಇವಕ್ಕೆಲ್ಲಾ ಒಂದೊಂದಾಗಿ ... ಸ್ಸಾರಿ... ಅಂತ ಹೇಳ್ಕೊಂಡು ತಪ್ಪೊಪ್ಪಿಕೊಂಡು ಬಿಟ್ಟರೆ ಜನ ಕಾಂಗ್ರೆಸಿಗೆ ಖಂಡಿತ ಓಟು ಕೊಡ್ತಾರೆ. ನಮ್ಮ ಭಾರತದ ಜನ ಸಹನಶೀಲರು, ಕರುಣಾಮಯಿಗಳು. ಎಲ್ಲದಕ್ಕೂ ... ಸ್ಸಾರಿ.. ಅಂತ ಹೇಳಿಬಿಟ್ಟರೆ ಮನ್ನಿಸ್ತಾರೆ.

ಇನ್ನೊಂದು ಕೊನೆಯ ನಮ್ರ ಸಲಹೆ. ನಿಮಗೆ ಇಷ್ಟವಾಗದೆ ಹೋಗಬಹುದು. ಆದರೂ ಕಾಂಗ್ರೆಸಿನ ಹಿತದೃಷ್ಟಿಯಿಂದ ಬೋಫೋರ್ಸ್ಸುಗೂ ಸ್ಸಾರಿ ಹೇಳಿ ಬಿಟ್ಟರೆ ಹೇಗೆ? ಬೋಫೋರ್ಸ್ಸು ಲಂಚ ತೊಗೊಂಡಿದ್ದಕ್ಕಲ್ಲಾ! ಛೇ! ಛೇ! ಬೋಫೋರ್ಸ್ಸು ಲಂಚ ತೊಗೊಂಡವರಲ್ಲಾ- ವಿನ್ ಛಡ್ಡಾ, ಕ್ವಾಟ್ರೋಚಿ ದೇಶ ಬಿಟ್ಟು ಹೋಗಿದ್ದಕ್ಕೆ ಸ್ಸಾರಿ ಹೇಳಿಬಿಟ್ಟರಾಯಿತು.

ನಿಮ್ಮಂತಹ ಎಲ್ಲಾ ತಪ್ಪೊಪ್ಪುವ ನಾಯಕರು ಕಾಂಗ್ರೆಸ್ಸಿಗೆ ಇರುವಾಗ, ಕಾಂಗ್ರೆಸ್ ಪುನಃ ಅಧಿಕಾರಕ್ಕೆ ಬರ್ತದೆ. ಕಾಂಗ್ರೆಸ್ ಸರಕಾರ ಮುಂದಿನ ವರ್ಷಗಳಲ್ಲಿ ಸುಭದ್ರ ಸರಕಾರ ಕೊಟ್ಟು ಹೊಸ ತಪ್ಪುಗಳನ್ನು ಮಾಡಲಿಕ್ಕೆ ಅವಕಾಶ ಸಿಗ್ತದೆ ಎಂದು ಆಶಿಸುವ

ಇತೀ

ಉತ್ಸಾಹಿ ಕಾಂಗ್ರೆಸ್ಸಿಗರು.

ಚುನಾವಣೆ '98

ವ್ಯಂಗ್ಯಚಿತ್ರಕಾರರು ಕಂಡಂತೆ



ಇಂಡಿಯನ್ ಎಕ್ಸ್‌ಪ್ರೆಸನಲ್ಲಿ ಉನ್ನಿ →

ಏಶ್ಯನ್ ಏಜ್‌ನಲ್ಲಿ ಮಾಯಾಕಾಮತ್ ←

↓ ಹಿಂದು ನಲ್ಲಿ ಸುರೇಂದ್ರನ್





ಪದಬಂಧ-೫ಕ್ಕೆ ಉತ್ತರ - ವಿಶ್ವ

ಕೋ	ಲಾ	ರ		ರಾ	ಮ	ಚಂ	ದ್ರ	ನ್
ಲಾ		ವಿ		ಮ				
ರ				ಚಂ	ಡೆ			ವೆಂ
ಚಿ	ರಾ	ಯು		ದ್ರ		ಜ	ಳ	ಕ
ನ್ನ					ಜಾ	ಗ		ಟ
ದ	ಳ					ನ್ನಾ		ರಾ
ಗ		ವಿ	ದು	ರಾ	ಶ್ವ	ಥ		ಮ
ಣಿ		ಜಿ						ಯ್ಯ
	ಇ	ಕೆ	ನಾ	ಯ	ನಾ	ರ್		

KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27